ರಾಮಕೃಷ್ಣ ಮಹಾಸಂಘದ ಕನ್ನಡ ಮಾಸಪತ್ರಿಕೆ

ವಿವೇಕಪ್ರಭ

ಪರಿಪೂರ್ಣ ಜೀವನದ ಪರಮಾಪ್ತ ಪತ್ರಿಕೆ




₹ 14

ಸೆಪ್ಟೆಂಬರ್-2015

ದಸರಾ ಹಬ್ಬದ ರಜೆಯಲ್ಲಿ ವಿದೇಶಿ ಪ್ರವಾಸ




7 ದಿನಗಳ ಜಪಾನ್ ಪ್ರವಾಸ

ಹೈ ಸ್ಪೀಡ್ ಬುಲೆಟ್ ರೈಲಿನಲ್ಲಿ ಪ್ರಯಾಣದ ಅನುಭವ
ಪ್ರವಾಸ ಸ್ಥಳ : ವಸಾಕಾ, ಹಿರೋಶಿಮಾ, ಕ್ಯೊಟೋ, ಟೋಕೀಯೋ, ಮೌಂಟ್‌ಫ್ಯೂಜಿ, ನಾರ

ಸೆಪ್ಟೆಂಬರ್, ಅಕ್ಟೋಬರ್

5 ದಿನಗಳ ದುಬೈ, ಅಬುದಾಬಿ, ಶಾರ್ಜ ಪ್ರವಾಸ

ದುಬೈ ಸಿಟಿ ಟೂರ್, ಡೌ ಕ್ರೂಸ್, ಡೆಸರ್ಟ್ ಸಫಾರಿ, ಅಬುದಾಬಿ ಸಿಟಿ ಟೂರ್, ಶಾರ್ಜ ಸಿಟಿ ಟೂರ್

ಸೆಪ್ಟೆಂಬರ್, ಅಕ್ಟೋಬರ್, ನವೆಂಬರ್

10 ದಿನಗಳ ಚೈನಾ, ಹಾಂಕಾಂಗ್, ಮಕಾವ್ ಪ್ರವಾಸ

ಆಕ್ರೋಬೆಟಿಕ್ ಶೋ, ಓಷನ್ ಪಾರ್ಕ್, ಬೀಜಿಂಗ್, ಶಾಂಘೈ
ಸಮ್ಮರ್ ಪ್ಯಾಲೇಸ್, ಮ್ಯೂಸಿಯಂ ಹಾಂಕಾಂಗ್ ಮತ್ತು ಮಕಾವ್

ಸೆಪ್ಟೆಂಬರ್, ಅಕ್ಟೋಬರ್

7 ದಿನಗಳ ಸಿಂಗಾಪುರ – ಮಲೇಶಿಯ ಪ್ರವಾಸ

ಸಿಂಗಾಪುರ : ಸಿಟಿ ಟೂರ್, ಸೆಂಟೋಸ ಐಲ್ಯಾಂಡ್, ಬರ್ಡ್‌ಪಾರ್ಕ್, ಸಾಂಗ್ ಆಫ್ ಸೀ
ಮಲೇಶಿಯ : ಕೌಲಲೊಂಪುರ್ ಸಿಟಿ ಟೂರ್, ಬಾಟು ಗುಹೆ,ಪುತ್ರಜಯ, ಜಂಟಿಂಗ್ ಹೈಲ್ಯಾಂಡ್,
ಮಲಾಕ ಸಿಟಿ ಟೂರ್, ಮಲಾಕ ಫೆರ‍್ರಿ, ಜುಹೊರ್‌ಬಾರು

ಸೆಪ್ಟೆಂಬರ್, ಅಕ್ಟೋಬರ್, ನವೆಂಬರ್

15 ದಿನಗಳ ಗ್ರ್ಯಾಂಡ್ ಯುರೋಪ್ ಪ್ರವಾಸ

ಯು.ಕೆ. ಫ್ರಾನ್ಸ್, ಬೆಲ್ಜಿಯಂ, ನೆದರ್‌ಲ್ಯಾಂಡ್, ಜರ್ಮನಿ, ಸ್ವಿಟ್ಜರ್‌ಲ್ಯಾಂಡ್
ಆಸ್ಟ್ರೀಯಾ, ಲಿಚೆನ್‌ಟೆನ್‌ಸ್ಟೈನ್, ಇಟಲಿ, ವ್ಯಾಟಿಕನ್

ಸೆಪ್ಟೆಂಬರ್, ಅಕ್ಟೋಬರ್, ನವೆಂಬರ್

3 ದಿನಗಳ ಅಹೋಬಿಲಂ ನವನಾರಸಿಂಹ ಪ್ರವಾಸ

ಪ್ರವಾಸ ಸ್ಥಳಗಳು: ಜ್ವಾಲಾನರಸಿಂಹ, ಪಾವನನರಸಿಂಹ, ವರಹಾನರಸಿಂಹ, ಕಾರಂಜನರಸಿಂಹ, ಮಾಲೋಲನರಸಿಂಹ,
ಯೋಗನರಸಿಂಹ, ಭಾರ್ಗವನರಸಿಂಹ, ಉಗ್ರನರಸಿಂಹ, ಛತ್ರವಟನರಸಿಂಹ ಹಾಗೂ ಕೆಳಗಿನ ಲಕ್ಷ್ಮೀನರಸಿಂಹ

ಸೆಪ್ಟೆಂಬರ್, ಅಕ್ಟೋಬರ್, ನವೆಂಬರ್

18 ದಿನಗಳ ಆಸ್ಟ್ರೇಲಿಯಾ ಮತ್ತು ನ್ಯೂಜಿಲ್ಯಾಂಡ್ ಪ್ರವಾಸ

ಸಿಡ್ನಿ, ಗೋಲ್ಡ್ ಕೋಸ್ಟ್, ಕ್ರೈರ್ನ್ಸ್, ಮೆಲ್ಬೋರ್ನ್ (ಆಸ್ಟ್ರೇಲಿಯಾ)
ಆಕ್ಲೆಂಡ್, ರೋಟೂರಾ, ಕ್ವೀನ್ಸ್‌ಟೌನ್, ಕ್ರೈಸ್ಟ್‌ಚರ್ಚ್ (ನ್ಯೂಜಿಲ್ಯಾಂಡ್)

ನವೆಂಬರ್, ಡಿಸೆಂಬರ್

8 ದಿನಗಳ ಕಾಂಬೋಡಿಯಾ – ಥೈಲ್ಯಾಂಡ್ ಪ್ರವಾಸ

ಕಾಂಬೋಡಿಯಾ – ಸಿಯಾಮ್‌ರಿಪ್, ಅಂಕೋರ್‌ವಾಟ್, ಟೋನ್ ಸ್ಯಾಪ್ ಸರೋವರ, ತಾಪ್ರಾಮ್, ಬಯಾನ್,
ಬಪೂನ್ ದೇವಾಲಯಗಳು, ಥೈಲ್ಯಾಂಡ್ – ಪಟ್ಟಾಯ, ಕೋರಲ್ ಐಲ್ಯಾಂಡ್, ಸಫಾರಿ ವರ್ಲ್ಡ್ ಹಾಗೂ
ಬ್ಯಾಂಕಾಕ್ ಸಿಟಿ ಟೂರ್, ವಾಕರ್ ಸ್ಟ್ರೀಟ್

ಸೆಪ್ಟೆಂಬರ್, ಅಕ್ಟೋಬರ್, ನವೆಂಬರ್

Orchid Travel & Tours

ವಿದೇಶಿ ಪ್ರವಾಸಗಳು

98, 1st Floor, D.V.G. Road, Basavanagudi, Bangalore - 560 004.

Tel : 080-26670646, 26621983 www.orchidtours.net

ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ : 9900080799, 9900080794, 9900080793

ವ್ಯವಸ್ಥಾಪಕ ಸಂಪಾದಕರು

ಸ್ವಾಮಿ ಮುಕ್ತಿದಾನಂದ

ಸಂಪಾದಕರು

ಸ್ವಾಮಿ ಜ್ಞಾನಯೋಗಾನಂದ

ನೆರವು:

ಆರ್. ಎಸ್. ಪೂರ್ಣಾನಂದ
ಡಾ. ಕೆ. ಎಲ್. ಪ್ರಸನ್ನಾಕ್ಷಿ
ಡಾ. ಎಚ್. ಪಾಂಡುರಂಗ ವಿಠಲ

ಅಕ್ಷರ ಜೋಡಣೆ

ಶ್ರೀರಾಮಕೃಷ್ಣ ಆಶ್ರಮ, ಮೈಸೂರು

ಮುದ್ರಣ

ಮಯೂರ್ ಗ್ರಾಫಿಕ್ಸ್, ಬೆಂಗಳೂರು

E-mail:
vivekaprabha@hotmail.com
kannada.vivekaprabha@gmail.com
Website: vivekaprabha.net
ಫೋನ್ : 9481533505

ಮುಖಪುಟ:

ಕಾಳಿಂಗ ಮರ್ದನ ಶ್ರೀಕೃಷ್ಣ
ಹಜಾರರಾಮ ದೇವಸ್ಥಾನ, ಹಂಪಿ

ಈ ಪತ್ರಿಕೆಯ ಧ್ಯೇಯ

'ನಾವು ಪತ್ರಿಕೆಯ ಮೂಲಕ ಸಕಲ ವಿಚಾರಗಳಲ್ಲಿಯೂ ಜೀವನಪೋಷಕ ಆದರ್ಶಗಳನ್ನು ಜನರಿಗೆ ಕೊಡಬೇಕು... ವೇದವೇದಾಂತಗಳ ಉಚ್ಚ ಭಾವನೆಗಳನ್ನು ಸುಲಭವಾದ ಮಾತುಗಳಲ್ಲಿ ಜನರಿಗೆ ತಿಳಿಸಿಕೊಡಬೇಕು.'

– ಸ್ವಾಮಿ ವಿವೇಕಾನಂದ

ಚಂದಾ ವಿವರ

ಬಿಡಿ ಪ್ರತಿ: ₹ 14
ವಾರ್ಷಿಕ: ₹ 140
ಮೂರು ವರ್ಷ: ₹ 375
ಆಜೀವ (25 ವರ್ಷ): ₹ 3,000
ಪೋಷಕರು : ₹ 5,000 ಅಥವಾ ಹೆಚ್ಚು.

ವಿದೇಶಗಳಿಗೆ: (ಏರ್‌ಮೇಲ್)
ವಾರ್ಷಿಕ: $ 20; ಮೂರು ವರ್ಷ: $ 60
ಆಜೀವ (25ವರ್ಷ): $ 300
ಪೋಷಕರು : $ 600 ಅಥವಾ ಹೆಚ್ಚು.


ಚಂದಾ ಹಣವನ್ನು (Sri Ramakrishna Ashrama, Viveka Prabha A/c ಹೆಸರಿಗೆ) ಎಂ.ಓ. ಅಥವಾ ಡಿ.ಡಿ. ಮೂಲಕ ಮಾತ್ರ ಕಳುಹಿಸಬೇಕು. ಚೆಕ್‌ಗಳನ್ನು ಸ್ವೀಕರಿಸಲಾಗುವುದಿಲ್ಲ. ಆಜೀವ ಚಂದಾದಾರರು ಮತ್ತು ಪೋಷಕರಿಗೆ ಮೈಸೂರು ಆಶ್ರಮದ ಪುಸ್ತಕಗಳ ಮೇಲೆ ಮೈಸೂರು ಆಶ್ರಮದ ಮೂಲಕ ನೇರವಾಗಿ ಕೊಂಡಾಗ ಮಾತ್ರ ಶೇ. 20 ರಷ್ಟು ರಿಯಾಯಿತಿ ಕೊಡಲಾಗುವುದು. ಪೋಷಕ ಸಹಾಯಧನಕ್ಕೆ 80-G ಅಧಿನಿಯಮದ ಪ್ರಕಾರ ವರಮಾನ ತೆರಿಗೆ ವಿನಾಯಿತಿ ಇದೆ. ಪೋಷಕರ ಹೆಸರನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುವುದು.

ಸೆಪ್ಟೆಂಬರ್-2015 ಸಂಪುಟ 16 ಸಂಚಿಕೆ 09

ವಿವೇಕ ಪ್ರಭ

ಪರಿವಿಡಿ

ಅರ್ಜುನನ ಮನಸ್ಸಿನಲ್ಲಿರುವ ನಕಾರಾತ್ಮಕ ಆಲೋಚನೆಗಳೆಲ್ಲವನ್ನೂ ತನ್ನ ಅತೀತಶಕ್ತಿಯಿಂದ ಅರಿತ ಕೃಷ್ಣ ಅವನಲ್ಲಿ ಸಕಾರಾತ್ಮಕ ಭಾವನೆಗಳನ್ನು ಬಿತ್ತುತ್ತಾನೆ.





ಒಂದು ಮನವಿ

ಪಶ್ಚಿಮ ಬಂಗಾಳದ ಹೌರಾ ಜಿಲ್ಲೆಯ ಬೇಲೂರಿನಲ್ಲಿರುವ ರಾಮಕೃಷ್ಣ ಮಠದ ಶಾಖಾಕೇಂದ್ರವಾಗಿರುವ **ರಾಮಕೃಷ್ಣ ಮಠ, ಯೋಗೋದ್ಯಾನವು** ಹೊಸದಾಗಿ ಮೂರು ಮಹಡಿಗಳ ಉಚಿತ ಚಿಕಿತ್ಸಾಲಯ ಮತ್ತು ತಪಾಸಣೆಯ ಕೇಂದ್ರವೊಂದನ್ನು ನಿರ್ಮಿಸಲು ಹೊರಟಿದ್ದು, ಅದಕ್ಕಾಗಿ ನಿಮ್ಮ ಉದಾರ ಧನಸಹಾಯವನ್ನು ಕೋರುತ್ತೇವೆ. ಸುತ್ತುಮುತ್ತಲ ಕೊಳಗೇರಿಗಳಲ್ಲಿ ವಾಸಿಸುತ್ತಿರುವ, ಹಾಗೂ ಇನ್ನಿತರ ಬಡವರ್ಗದ ಜನರಿಗೆ ವೈದ್ಯಕೀಯ ಸೇವಾ ಸೌಕರ್ಯಗಳನ್ನು ಒದಗಿಸಿಕೊಡುವುದೇ ಈ ಕೇಂದ್ರದ ಉದ್ದೇಶವಾಗಿದೆ. ಈ ಹೊಸ ಕಟ್ಟಡದಲ್ಲಿ ಅಲೋಪಥಿ, ಹೋಮಿಯೋಪಥಿ, ಆಯುಸ್, ಪ್ಯಾಥೋಲಜಿ, ರೇಡಿಯೋಲಜಿ ಹಾಗೂ ಇನ್ನಿತರ ಪರೀಕ್ಷೆಗಳು ಹಾಗೂ ವಿವಿಧ ವೈದ್ಯಕೀಯ ಸೇವೆಗಳಿಗಾಗಿ ಅಗತ್ಯವಿರುವ ವಿಶಾಲ ಸ್ಥಳಾವಕಾಶವನ್ನು (24,642 ಚದರ ಅಡಿ) ಬಳಸಲಾಗುವುದು. ಇದರ ನಿರ್ಮಾಣಕ್ಕೆ ಸುಮಾರು 4 ಕೋಟಿ ರೂ. ವೆಚ್ಚ ತಗಲುವುದಾಗಿ ಅಂದಾಜು ಮಾಡಲಾಗಿದೆ. ದಿನೇದಿನೇ ರೋಗಿಗಳ ಸಂಖ್ಯೆ ವೃದ್ಧಿಹೊಂದುತ್ತಿರುವ ಕಾರಣ ಈಗ ಬಳಸಲಾಗುತ್ತಿರುವ ಕಟ್ಟಡದಲ್ಲಿ ವೈದ್ಯಕೀಯ ಸೇವೆ ನಡೆಸುವುದು ಅತ್ಯಂತ ಕಷ್ಟವಾಗುತ್ತಿದೆ. ಈ ಕೊರತೆಯನ್ನು ತುಂಬಲು ಹೊಸ ಕಟ್ಟಡವನ್ನು ನಿರ್ಮಿಸುವುದು ಅನಿವಾರ್ಯವಾಗಿದೆ.



''ಯಾರು ಇತರರಿಗೋಸ್ಕರ ಬದುಕುವರೋ, ಅವರೇ ನಿಜವಾಗಿ ಬದುಕುವವರು. ಉಳಿದವರು ಬದುಕಿದ್ದರೂ ಸತ್ತಂತೆ'' ಎಂಬ ಸ್ವಾಮಿ ವಿವೇಕಾನಂದರ ಮಾತಿನಿಂದ ಪ್ರೇರಣೆ ಪಡೆದ ಅನೇಕ ಮಂದಿ ವೈದ್ಯರು, ಶಸ್ತ್ರಚಿಕಿತ್ಸಾ ಪರಿಣತರು, ವಿವಿಧ ಕ್ಷೇತ್ರಗಳಲ್ಲಿ ನುರಿತ ವೈದ್ಯಕೀಯ ತಜ್ಞರು ಬಡಜನರಿಗೆ ಸೇವೆ ಸಲ್ಲಿಸಲು ಸ್ವ-ಇಚ್ಛೆಯಿಂದ ಮುಂದೆ ಬಂದಿರುತ್ತಾರೆ. 2014ರ ಡಿಸೆಂಬರ್ 4 ರಂದು ರಾಮಕೃಷ್ಣ ಮಠ ಮತ್ತು ಮಿಷನ್ನಿನ ಉಪಾಧ್ಯಕ್ಷರಾದ ಪರಮಪೂಜ್ಯ ಸ್ವಾಮಿ ಸ್ಮರಣಾನಂದಜಿ ಮಹಾರಾಜ್ ಅವರು ಈ ಕಟ್ಟಡದ ಶಿಲಾನ್ಯಾಸ ನೆರವೇರಿಸಿದರು. 2015ರ ಮಾರ್ಚ್ 28 ರಂದು ಕಟ್ಟಡದ ನಿರ್ಮಾಣಕಾರ್ಯ ಆರಂಭಗೊಂಡಿತು; ಒಂದೂವರೆ ವರ್ಷದ ಅವಧಿಯಲ್ಲಿ ಅದನ್ನು ಪೂರ್ಣಗೊಳಿಸುವ ಗುರಿಯನ್ನು ನಾವು ಹೊಂದಿದ್ದೇವೆ. ಅಡಿಪಾಯದ ಕೆಲಸಗಳು ಬಹುತೇಕ ಮುಗಿದಿದ್ದು, ಸದ್ಯದಲ್ಲೇ ಕಟ್ಟಡದ ಮೇಲ್ಭಾಗದ ನಿರ್ಮಾಣ ಆರಂಭವಾಗಲಿದೆ.

ಈ ಹಂತದಲ್ಲಿ ಆರ್ಥಿಕ ಕೊರತೆ ಒದಗಿರುವ ಕಾರಣ ಬಡವರ ಹಾಗೂ ವೈದ್ಯಕೀಯ ಸೇವೆಯ ತುರ್ತು ಅಗತ್ಯವಿರುವ ಜನರ ಸೇವಾಕಾರ್ಯಕ್ಕಾಗಿ ತಾವು ಉದಾರ ಧನಸಹಾಯ ನೀಡಬೇಕೆಂದು ತಮ್ಮಲ್ಲಿ ಕಳಕಳಿಯಿಂದ ವಿನಂತಿಸಿಕೊಳ್ಳುತ್ತಿದ್ದೇವೆ. ನೀವು ನೀಡುವ ಸಹಕಾರವು, ದೀನದಲಿತರಿಗಾಗಿ ತಮ್ಮೆದೆಯ ರಕ್ತವನ್ನೇ ಬಸಿದ ಸ್ವಾಮಿ ವಿವೇಕಾನಂದರಿಗೆ ಸಲ್ಲಿಸುವ ನಿಜವಾದ ಶ್ರದ್ಧಾಂಜಲಿಯಾಗುವುದರಲ್ಲಿ ಸಂದೇಹವಿಲ್ಲ.

ರಾಮಕೃಷ್ಣ ಮಠ, ಯೋಗೋದ್ಯಾನ – ಈ ಸಂಸ್ಥೆಗೆ ದೇಣಿಗೆ, ಧನಸಹಾಯ ನೀಡುವವರಿಗೆ 1961ರ ಆದಾಯ ತೆರಿಗೆ ಕಾನೂನಿನ 80 G ಕಾಯಿದೆಯನ್ವಯ ಆದಾಯ ತೆರಿಗೆ ವಿನಾಯಿತಿ ಲಭಿಸುವುದು. ಚೆಕ್, ಡಿ.ಡಿ., ಮನಿ ಆರ್ಡರ್‌ಗಳನ್ನು Ramakrishna Math (Yogodyan) ಈ ಹೆಸರಿನಲ್ಲಿ ತೆಗೆದು ಕೆಳಗಿನ ವಿಳಾಸಕ್ಕೆ ಕಳುಹಿಸಬೇಕಾಗಿ ವಿನಂತಿ. ಆನ್‌ಲೈನ್ ಮೂಲಕ ದೇಣಿಗೆ ನೀಡುವವರು ಈ ಖಾತೆಗೆ ಕಳುಹಿಸಿ *(ಭಾರತದಲ್ಲಿ):* A/c No. 962042050, IFSC Code No.IDIB000M057, Indian Bank, Manicktolla Branch, (Branch Code No.676) *(ವಿದೇಶೀ ದೇಣಿಗೆಗಳಿಗೆ):* A/c No.6030092277, IFSC Code No. IDIB000M057, Indian Bank, Manicktolla Branch, (Branch Code No.676). ಆನ್‌ಲೈನ್ ವರ್ಗಾವಣೆ ಮಾಡಿದ ಕೂಡಲೇ ಇ-ಮೇಲ್ ಮೂಲಕ ತಮ್ಮ ಹೆಸರು, ಪೂರ್ಣ ಅಂಚೆ ವಿಳಾಸ, ಪ್ಯಾನ್ ನಂ., ನೀಡಲಾದ ಮೊತ್ತ ಇವನ್ನು ಈ ವಿಳಾಸಕ್ಕೆ ಕಳುಹಿಸಿ: rkmyogodyan@gmail.com ಅಥವಾ ಪ್ರತ್ಯೇಕವಾಗಿ ಅಂಚೆ ಮೂಲಕ ಕಳುಹಿಸಿಕೊಡಬೇಕಾಗಿ ವಿನಂತಿ.

ಭಗವತ್ಸೇವೆಯಲ್ಲಿ ತಮ್ಮ,
ಸ್ವಾಮಿ ನಿತ್ಯಮುಕ್ತಾನಂದ, ಅಧ್ಯಕ್ಷರು

ಸಂಪರ್ಕಿಸಿ:
Ramakrishna Math (Yogodyan)
7, Yogodyan Lane, Kankurgachhi, Kolkata 700054, India
Mob. 09433005588, 09433729024 Ph.(033) 2320-2927/9721/6000
Email: rkmyogodyan@gmail.com/Website:www.yogodyan.org

ಪ್ರಾರ್ಥನೆ

ಶ್ರೀಗಣೇಶ ಪ್ರಾರ್ಥನಾ



ಆನಂದರೂಪ ಕರುಣಾಕರ ವಿಶ್ವಬಂಧೋ
ಸಂತಾಪಚಂದ್ರಭವವಾರಿಧಿ ಭದ್ರಸೇತೋ ।
ಹೇ ವಿಘ್ನಮೃತ್ಯುದಲನಾಮೃತ ಸೌಖ್ಯಸಿಂಧೋ
ಶ್ರೀಮನ್ ವಿನಾಯಕ ತವಾಂಘ್ರಿಯುಗಂ ನತಾಸ್ಮಃ ॥

ಆನಂದ ರೂಪನೆ, ಕರುಣೆಯ ಗಣಿಯೆ, ವಿಶ್ವಕ್ಕೆ ಬಂಧುವೆ, ಸಂಸಾರ ಸಾಗರದಲ್ಲಿ ದುಃಖವೆಂಬ ಚಂದ್ರನು ಪ್ರಭಾವ ಬೀರದಂತೆ ಮಂಗಳಕರವಾದ ಸೇತುವೆಯಾಗಿರುವವನೆ, ವಿಘ್ನವೆಂಬ ಮೃತ್ಯುವನ್ನು ಕತ್ತರಿಸಿ ಹಾಕುವವನೆ, ಅಮೃತವೆಂಬ ಸುಖಸಾಗರ ಸ್ವರೂಪಿಯೆ, ಶ್ರೀವಿನಾಯಕನೆ, ನಿನ್ನ ಪಾದಕಮಲಗಳಿಗೆ ನಮಿಸುವೆವು.

ನಿತ್ಯಂ ಸಮಾಧಿಕುಸಮಾರ್ಚಿತಪಾದಪದ್ಮ
ಆಮ್ನಾಯದೀಪ ಪರಿಶೋಭಿತದಿವ್ಯಗಾತ್ರ ।
ಸನ್ಮಂಗಲಾನಿ ವಿದಧತ್‌ಪರಮೋಕ್ಷದೋ ಯಃ
ನಿತ್ಯಂ ಚಕಾಸ್ತು ಭುವಿ ವೈದಿಕ ವಿಶ್ವಧರ್ಮಃ ॥

ಪ್ರತಿದಿನವೂ ಸಮಾಧಿಯೆಂಬ ಹೂವಿನಿಂದ ಪೂಜಿಸಲ್ಪಡುವ ಪಾದಾರವಿಂದವುಳ್ಳವನು, ವೇದವೆಂಬ ದಿವ್ಯದೀಪದ ಬೆಳಕಿನಿಂದ ಬೆಳಗುತ್ತಿರುವ ದಿವ್ಯ ಶರೀರವುಳ್ಳವನು, ಸನ್ಮಂಗಳಗಳನ್ನು ಕರುಣಿಸುತ್ತ ಶೀಘ್ರವಾದ ಮುಕ್ತಿಯನ್ನು ಕರುಣಿಸುವ ಪ್ರಭು, ಸಕಲರ ಸುಖವನ್ನು ಬಯಸುವ ವೈದಿಕ ವಿಶ್ವಧರ್ಮ ಸ್ವರೂಪಿಯು ಭೂಮಿಯನ್ನು ಸದಾ ಬೆಳಗಲಿ.

ಸೂಕ್ತಿಪ್ರಭ

ಎಲ್ಲ ಮಂಗಳಗಳಿಗೆ ಆಶ್ರಯನಾದ ಭಗವಂತನ ನಾಮವನ್ನು ಪ್ರತಿಕ್ಷಣವೂ ಭಜಿಸು. ಹೊರಗೆ ಹೊರಟ ಉಸಿರು ಮತ್ತೆ ಒಳಗೆ ಬರುತ್ತದೆ ಎಂಬ ನಂಬಿಕೆ ಎಲ್ಲಿದೆ?

–ಗುರುಕೌಮುದೀ

ಸತ್ಯ ಮತ್ತು ಆತ್ಮಸಂಯಮ – ಇವುಗಳನ್ನು ಅನುಸರಿಸಿ ನಡೆದರೆ ಶಾಂತಿ, ನೆಮ್ಮದಿಗಳು ನಿನ್ನ ಒಳಗಿನಿಂದ ಚಿಮ್ಮಿ ಬರುವವು, ನಿನ್ನ ಮನಸ್ಸನ್ನೆಲ್ಲ ತುಂಬುವವು.

–ಗುರು ಗೋವಿಂದ ಸಿಂಗ್

ಉಳದ ನೆಲ ಎಷ್ಟೇ ಫಲವತ್ತಾಗಿರಲಿ, ಅದು ಮುಳ್ಳುಕಂಟಿ, ಕಳೆಗಳನ್ನಷ್ಟೇ ಬೆಳೆಯುವುದು. ಮಾನವನ ಮನಸ್ಸೂ ಅದೇ ರೀತಿ.

–ಸಂತ ಥೆರೆಸಾ (ಅವಿಲಾ)

ಎಲ್ಲ ಹಕ್ಕಿಗಳೂ ಮಳೆಗಾಲದಲ್ಲಿ ಗೂಡಿಗೆ ಮರಳುತ್ತವೆ. ಆದರೆ ಹದ್ದು ಮಾತ್ರ ಮೋಡದ ಮೇಲೆ ಹಾರಾಡುತ್ತ ಮಳೆಯನ್ನು ಮೀರಿಹೋಗುತ್ತದೆ.

–ಡಾ. ಎ.ಪಿ.ಜೆ. ಅಬ್ದುಲ್ ಕಲಾಂ



ನಿನ್ನ ಮಾತು, ಕೃತಿ ಹಾಗೂ ಆಧ್ಯಾತ್ಮಿಕ ಸಾಧನೆಯಲ್ಲಿ ಪ್ರಾಮಾಣಿಕನಾಗಿರು. ಹಾಗಿದ್ದರೆ ನೀನು ಧನ್ಯ . ಭಗವಂತನ ಕೃಪೆ ಪ್ರಪಂಚದ ಎಲ್ಲ ಜೀವಿಗಳ ಮೇಲೆ ಯಾವಾಗಲೂ ಹರಿದು ಬರುತ್ತಿದೆ. ಅದಕ್ಕಾಗಿ ಪ್ರತ್ಯೇಕ ಬೇಡಬೇಕಾದುದಿಲ್ಲ. ಪ್ರಾಮಾಣಿಕತೆಯಿಂದ ಧ್ಯಾನದ ಅಭ್ಯಾಸ ಮಾಡು. ಆಗ ದೇವರ ಅಪಾರ ಕೃಪೆ ನಿನಗರ್ಥವಾಗುವುದು. ದೇವರಿಗೆ ಬೇಕಾಗಿರುವುದು ಪ್ರಾಮಾಣಿಕತೆ, ಸತ್ಯಸಂಧತೆ ಮತ್ತು ಭಕ್ತಿ . ಬರಿ ಬಾಯಿ ಮಾತಿನ ಭಾವುಕತೆ ಅವನನ್ನು ತಲುಪಲಾರದು.

– ಶ್ರೀಮಾತೆ ಶಾರದಾದೇವಿ

ಶ್ರೀರಾಮಕೃಷ್ಣ ಶಾರದಾಶ್ರಮ

ಪೊನ್ನಂಪೇಟೆ –571 216, ಕೊಡಗು ಜಿಲ್ಲೆ ಫೋನ್: 08274–249040

e-mail: srkseva@gmail.com, srksevaponnampet@gmail.com

Web: www.rkmponnampet.org

ಆಧ್ಯಾತ್ಮಿಕ ಶಿಬಿರ

25–10–2015 ರಿಂದ 27–10–2015

ಪೊನ್ನಂಪೇಟೆಯಲ್ಲಿ ನಿರ್ಮಾಣವಾಗಿರುವ ಶ್ರೀರಾಮಕೃಷ್ಣ ವಿಶ್ವಭಾವೈಕ್ಯ ಮಂದಿರದ 6ನೇ ವಾರ್ಷಿಕೋತ್ಸವದ ಪ್ರಯುಕ್ತ, **2015 ಅಕ್ಟೋಬರ್ 25 ರಿಂದ 27 ರವರೆಗೆ,** 3 ದಿನಗಳ ಆಧ್ಯಾತ್ಮಿಕ ಶಿಬಿರವನ್ನು ಆಯೋಜಿಸಲಾಗಿದೆ. ರಾಮಕೃಷ್ಣ ಮಠದ ಹಿರಿಯ ಯತಿಗಳಾದ ಸ್ವಾಮಿ ಜಗದಾತ್ಮಾನಂದಜಿ, ಸ್ವಾಮಿ ರಾಘವೇಶಾನಂದಜಿ, ಸ್ವಾಮಿ ನಿತ್ಯಸ್ಥಾನಂದಜಿ, ಸ್ವಾಮಿ ಮುಕ್ತಿದಾನಂದಜಿ ಮತ್ತಿತರರು ಈ ಶಿಬಿರದಲ್ಲಿ ಭಕ್ತರಿಗೆ ಮಾರ್ಗದರ್ಶನ ನೀಡಲಿದ್ದಾರೆ ಮತ್ತು ನಾಡಿನ ಹಲವು ಖ್ಯಾತ ವಾಗ್ಮಿಗಳು ಪ್ರವಚನಗಳನ್ನು ನೀಡಲಿದ್ದಾರೆ. ಸಾಂಸ್ಕೃತಿಕ ಕಾರ್ಯಕ್ರಮಗಳೂ ಆಯೋಜಿತವಾಗಿವೆ.

ನೋಂದಣಿ ಶುಲ್ಕ : *ವಸತಿ ರಹಿತ :* **ರೂ. 600/–** *ವಸತಿ ಸಹಿತ :* **ರೂ. 1000/–**

ಅರ್ಜಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 15.10.2015

(ಅರ್ಜಿಯಲ್ಲಿ ಹೆಸರು, ವಯಸ್ಸು, ವಿಳಾಸ ಮತ್ತು ದೂರವಾಣಿ ಸಂಖ್ಯೆಗಳನ್ನು ನೀಡಬೇಕು. ನಿಗದಿತ ಅರ್ಜಿಯನ್ನು ಆಶ್ರಮದ ವೆಬ್‌ಸೈಟಿನಿಂದ ಕೂಡ ಪಡೆಯಬಹುದಾಗಿದೆ.)

ಭಕ್ತಾದಿಗಳು ಈ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ದಿವ್ಯತ್ರಯರ ಕೃಪೆಗೆ ಪಾತ್ರರಾಗಬೇಕೆಂದು ಕೋರಲಾಗಿದೆ.

ಭಗವತ್ಸೇವೆಯಲ್ಲಿ ತಮ್ಮ,

ಸ್ವಾಮಿ ಬೋಧಸ್ವರೂಪಾನಂದ

ಅಧ್ಯಕ್ಷರು

ಶ್ರೀರಾಮಕೃಷ್ಣ ಸೇವಾಶ್ರಮ ಆಸ್ಪತ್ರೆ

(ಶ್ರೀರಾಮಕೃಷ್ಣ ಶಾರದಾಶ್ರಮ, ಪೊನ್ನಂಪೇಟೆಯ ಅಂಗಸಂಸ್ಥೆ)

ಪ್ರಕೃತಿ ಚಿಕಿತ್ಸೆ, ಯೋಗ ಹಾಗೂ ಫಿಸಿಯೋಥೆರಪಿ ವಿಭಾಗ

ಪೊನ್ನಂಪೇಟೆ – 571216

Email: srkseva@gmail.com, srksevaponnampet@gmail.com

Web: www.rkmponnampet.org

ನಿಸರ್ಗ ಚಿಕಿತ್ಸೆ ಆಧುನಿಕ ಮಾನವನಿಗೆ ಅತ್ಯಂತ ಆವಶ್ಯಕವಿರುವ ಚಿಕಿತ್ಸಾಪದ್ಧತಿ. ರೋಗಿಯನ್ನು ದೇಹವೆಂದು ಪರಿಗಣಿಸದೆ, ಸಮಗ್ರವಾಗಿ ಪರಿಗಣಿಸಿ ಚಿಕಿತ್ಸೆ ನೀಡಿ, ನಂತರ ರೋಗ ಮರುಕಳಿಸದಂತೆ ಮಾರ್ಗದರ್ಶನ ನೀಡುವುದೇ ಪ್ರಕೃತಿ ಚಿಕಿತ್ಸೆ ಹಾಗೂ ಯೋಗ ಚಿಕಿತ್ಸೆಗಳ ಗುರಿ. ಪ್ರಕೃತಿ ಚಿಕಿತ್ಸೆಯು ಕಾಯಿಲೆಗಳನ್ನು ಗುಣಪಡಿಸುತ್ತದೆ; ಯೋಗವು ಆರೋಗ್ಯವನ್ನು ಕಾಯ್ದುಕೊಂಡು ಹೋಗಲು ಸಹಕರಿಸುತ್ತದೆ.

ಶ್ರೀರಾಮಕೃಷ್ಣ ಸೇವಾಶ್ರಮ ಆಸ್ಪತ್ರೆ , ಪೊನ್ನಂಪೇಟೆಯಲ್ಲಿ ಪ್ರಕೃತಿ ಚಿಕಿತ್ಸೆ ಮತ್ತು ಯೋಗ ವಿಭಾಗವನ್ನು ಪ್ರಾರಂಭಿಸಲಾಗಿದೆ. ಇಲ್ಲಿ ಯೋಗ ಚಿಕಿತ್ಸೆ, ಜಲ ಚಿಕಿತ್ಸೆ, ಫಿಸಿಯೋಥೆರಪಿ, ಆಕ್ಯುಪಂಕ್ಚರ್, ಮಸಾಜ್ ಚಿಕಿತ್ಸೆ, ಮಣ್ಣಿನ ಚಿಕಿತ್ಸೆಗಳ ಸೇವೆಗಳು ಲಭ್ಯವಿವೆ.

ಪೊನ್ನಂಪೇಟೆಯಲ್ಲಿ ಪ್ರಕೃತಿ ಚಿಕಿತ್ಸೆ, ಯೋಗ ಹಾಗೂ ಫಿಸಿಯೋಥೆರಪಿಯ ಈ ಕೆಳಕಂಡ ಮೂರು ಶಿಬಿರಗಳನ್ನು ಆಯೋಜಿಸಲಾಗಿದೆ:

10.09.2015 ರಿಂದ 13.09.2015 ರ ವರೆಗೆ

24.09.2015 ರಿಂದ 27.09.2015 ರ ವರೆಗೆ

01.10.2015 ರಿಂದ 04.10.2015 ರ ವರೆಗೆ

ಶಿಬಿರದಲ್ಲಿ ಪಾಲ್ಗೊಳ್ಳಬಯಸುವ ಆಸಕ್ತರು ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ : 9845395293, 08274–249555, 249040

ನೋಂದಣಿ ಶುಲ್ಕ : **500 ರೂಪಾಯಿಗಳು** *(ಚಿಕಿತ್ಸಾ ಶುಲ್ಕ ಪ್ರತ್ಯೇಕ)*



ಸಂಪಾದಕೀಯ

ಪೂರ್ಣ ಮಾನವ - ಪೂರ್ಣಾವತಾರ

ಅನುಪಮ ವ್ಯಕ್ತಿತ್ವ

ಹಳ್ಳಿಯ ಶಾಂತ, ಸರಳ ಜೀವನ; ಹುಲ್ಲುಗಾವಲ ನಡುವೆ ಸಹಜವಾಗಿ ನದಿ ಹರಿದುಬಂದಂತೆ ಜನಸಾಮಾನ್ಯರ ಬದುಕು ಸಾಗುತ್ತಿದೆ. ಅಲ್ಲೊಬ್ಬ ಹುಡುಗ ಎಲ್ಲ ಮಕ್ಕಳಿಗೂ ಗೆಳೆಯ, ಎಲ್ಲರ ನಾಯಕ. ಹಳ್ಳಿಯ ತಾಯಂದರಿಗೂ, ಯುವಕ-ಯುವತಿಯರಿಗೂ, ವೃದ್ಧರಿಗೂ ಪ್ರಿಯನು. ಅಷ್ಟೇಕೆ, ಪ್ರೀತಿಯ ಅತಿರೇಕದಲ್ಲಿ ಎಲ್ಲವನ್ನೂ ಮರೆತುಬಿಡುವರು. ಕ್ರಮೇಣ ಅವರಿಗೆ ಅರ್ಥವಾಯಿತು, ತಮ್ಮನ್ನು ಸಂತಸದ ಪ್ರವಾಹದಲ್ಲೇ ತೇಲಿಬಿಟ್ಟ ಹುಡುಗ ಸಾಮಾನ್ಯನಲ್ಲ; ಜಗತ್ತನ್ನೇ ಉದ್ಧರಿಸಲು ಅವತರಿಸಿ ಬಂದ ಭಗವಂತನೇ ಅವನು! ಹೀಗೆ ತಮ್ಮೆಲ್ಲರ ನಡುವೆ ಒಂದಾದ ಪುಟ್ಟ ಬಾಲಕ ಕೃಷ್ಣ , ಪರಾತ್ಪರ ಪುರುಷನೇ ಎಂದು ಕಂಡುಕೊಂಡ ಗೋಕುಲದ ಜನರೆಲ್ಲ ಭಗವಂತನ ಲೀಲೆಯಲ್ಲಿ ಮುಳುಗೆದ್ದು ಓಲಾಡಿದರು. ಗೋಪಿಯರು ಅಕಳಂಕ ಪ್ರೇಮದ ಹುಚ್ಚುಹೊಳೆಯಲ್ಲಿ ತಮ್ಮ ಐಹಿಕ ವ್ಯಾಪಾರವನ್ನೆಲ್ಲ ಮೀರಿ, ದಿವ್ಯತೆಯ ಶಿಖರವನ್ನೇರಿದರು. ಇಲ್ಲೊಬ್ಬ ಅಸಾಧಾರಣ ಬಾಲಕ ಬೆಳೆದ – ಅವನು ಸಾಮಾನ್ಯರ ನಡುವೆ ತಾನೂ ಸಾಮಾನ್ಯನಾದ, ಅವನೇ ಮುಂದೆ ಪ್ರಪಂಚಕ್ಕೆ ಹೊಸ ಬೆಳಕನ್ನು ಕೊಟ್ಟ ಪುರುಷೋತ್ತಮನಾದ.

ಶ್ರೀಕೃಷ್ಣನ ವ್ಯಕ್ತಿತ್ವವೇ ಅಂಥದು, ಅವನ ಜೀವನದ ಘಟನೆಗಳೂ ಅಂಥವು. ಎಂದಿಗೂ ಪರಕೀಯನಾಗದ, ಯಾರಿಗೂ 'ಅನ್ಯ' ಎನಿಸದ ಆಪ್ಯಾಯಮಾನ ಸ್ವಭಾವ ಅವನದು. ಜನರಿಂದ ದೂರವಾಗಿ ಜೀವನವೆಲ್ಲ ಅವನು ಎಂಥವರೊಡನೆಯೂ ಬೆರೆತು, ಎಲ್ಲ ಬಗೆಯ ಜನರ ನಡುವೆಯೂ ಓಡಾಡಿ, ಅವರ ಕಷ್ಟ-ಸುಖಗಳಲ್ಲಿ ಒಂದಾದ. ಅನೇಕ ದುರ್ಘಟನೆಗಳು, ಗಂಡಾಂತರಗಳು ಒದಗಿ ಬಂದಾಗ ಅವನು ಸಾವಿನ ಭಯವನ್ನು ಲೆಕ್ಕಿಸದೆ ಮುನ್ನುಗ್ಗಿದ, 'ತನ್ನವ'ರನ್ನು ರಕ್ಷಿಸಿದ. ಹಾಗೆ ನೋಡಿದರೆ ಎಲ್ಲರೂ ತನ್ನವರೇ; ಎಲ್ಲಿಗೆ ಹೋದರೂ ಅಲ್ಲಿನ ಜನ ತನಗೆ ಆತ್ಮೀಯರೇ. ಕೃಷ್ಣ ಎತ್ತರದ ವ್ಯಕ್ತಿಯಾಗುವುದು ಈ ಗುಣದಿಂದ – ಪ್ರತಿಯೊಂದು ಜೀವಿಯ ಹಂತಕ್ಕೆ ಇಳಿದು ಬಂದು ಅವರನ್ನು ಮೇಲಕ್ಕೆತ್ತುವುದರಿಂದ. ಮನುಷ್ಯ ಜಾತಿಯಷ್ಟೇ ಅಲ್ಲ, ಪಶುಪಕ್ಷಿ ಪ್ರಾಣಿಗಳೂ ಅವನ ಅಸೀಮ ಪ್ರೇಮದಲ್ಲಿ ಮೈ-ಮನ ತೊಯ್ಯಿಸಿದವು.

ಐತಿಹಾಸಿಕ ದಾಖಲೆಗಳ ಸಂಕಲೆಯಾಚೆ

ಜೀವನದ ಪ್ರತಿಯೊಂದು ಆಗುಹೋಗುಗಳನ್ನು ಜಗತ್ತಿನ ಎಲ್ಲ ವ್ಯಾಪಾರ-ವಹಿವಾಟುಗಳನ್ನು ದಾಖಲಿಸುವ, ಹಾಗೆ ದಾಖಲಿಸಿದ್ದನ್ನು 'ಇತಿಹಾಸ'ವೆಂದು, ಸತ್ಯಸಂಗತಿಯೆಂದು ನಂಬುವ ಶಾಸ್ತ್ರವಾಗಿ ಚರಿತ್ರೆ ಬೆಳೆದು ಬಂತು. ವೈಜ್ಞಾನಿಕ ವಿಧಾನ, ವಿಶ್ಲೇಷಣೆ-ವಿಮರ್ಶೆಗಳ ಒರಗಲ್ಲು ಮುಂತಾದ ಕ್ರಮಗಳಿಂದ ಇತಿಹಾಸವನ್ನು ಕಟ್ಟುವ, ಸತ್ಯವೆಂದು ಕಂಡುಬರದ್ದನ್ನು ಅಲ್ಲಗಳೆಯುವ ಈ ಅಧ್ಯಯನ ಶಾಖೆ ನಮಗೆ ಬಳುವಳಿಯಾಗಿ ಬಂದದ್ದು ಬ್ರಿಟಿಷರಿಂದ. ವೈಜ್ಞಾನಿಕ ವಿಧಾನದಲ್ಲಿ ಇತಿಹಾಸವನ್ನು ಕಲಿಯುವ ವಿಧಾನ ನಮಗೆ ಹೊಸತಾಗಿ ಬಂತು ನಿಜ; ಆದರೆ ಅದರೊಂದಿಗೆ ದಾಖಲೆ

ಯಿಲ್ಲದ ಎಲ್ಲವನ್ನೂ ತಿರಸ್ಕರಿಸುವ 'ಆಧುನಿಕ ಮೌಢ್ಯ' ವೂ ಭಾರತೀಯ ಮನಸ್ಸನ್ನು ಕವಿಯತೊಡಗಿತು. ಈ ಹಿನ್ನೆಲೆಯಲ್ಲಿ ಶ್ರೀಕೃಷ್ಣನ ವ್ಯಕ್ತಿತ್ವ, ಜೀವನ ಮತ್ತು ಸಿದ್ಧಾಂತಗಳನ್ನು ವಿಶ್ಲೇಷಿಸಿದ ಬಹುಪಾಲು ಮಂದಿ ವಿದ್ವಾಂಸರು ಪಾಶ್ಚಾತ್ಯ ಚಿಂತನೆಯ, ನಾಸ್ತಿಕವಾದಿಗಳ ವಿಡಂಬನಾತ್ಮಕ ವಿಶ್ಲೇಷಣೆಗಳಿಂದ ಪೀಡಿತರಾದವರೆ. ಆಧುನಿಕ ವಿಧಾನಗಳಿಂದ, ವೈಜ್ಞಾನಿಕ ಕ್ರಮಗಳಿಂದ ಇತಿಹಾಸ, ತತ್ತ್ವ, ಧರ್ಮ ಇವುಗಳನ್ನು ಅಧ್ಯಯನ ಮಾಡಿಯೂ ದಿವ್ಯ ವ್ಯಕ್ತಿತ್ವಗಳ, ಅವತಾರಪುರುಷರ, ಭಾರತೀಯ ತತ್ತ್ವಗಳ ಅಸಾಧಾರಣತೆಯನ್ನು ಗುರುತಿಸಿ, ಎತ್ತಿ ಹಿಡಿದ ವಿದ್ವಾಂಸರೂ ನಮ್ಮಲ್ಲಿ ಹಲವರಿದ್ದಾರೆ. 'ಆಧುನಿಕ ಮೌಢ್ಯ'ಕ್ಕೆ ಸೂಕ್ತ ಉತ್ತರ ನೀಡಿ, ವಸ್ತುನಿಷ್ಠವಾದ, ನಮ್ಮ ಪರಂಪರೆಗೆ ಸೂಕ್ತವಾದ ಆರೋಗ್ಯಕರ ದೃಷ್ಟಿಕೋನವನ್ನು ನೀಡಿದವರು ಇವರು. ಗಾಂಧಿ, ತಿಲಕ್, ವಿನೋಬಾ, ಸ್ವಾಮಿ ವಿವೇಕಾನಂದ, ಅರವಿಂದರೇ ಮೊದಲಾದವರಿಂದ ಈ ಬಗೆಯ ಪ್ರಯತ್ನ ನಡೆಯಿತು. ಇವರಿಗೆಲ್ಲ ಆಧ್ಯಾತ್ಮಿಕ ಹಿನ್ನಲೆಯ ಬೆನ್ನೆಲುಬು ಇತ್ತೆನ್ನುವುದು ಗಮನಾರ್ಹವಾದ ಅಂಶ.

ಶ್ರೀಕೃಷ್ಣ ನಿಜವಾಗಿಯೂ ಬದುಕಿದ್ದ ವ್ಯಕ್ತಿಯೆಂಬುದನ್ನು ಐತಿಹಾಸಿಕವಾಗಿಯೂ ಸ್ವೀಕರಿಸಲಾಗಿದೆ. ಅವನ ಜೀವನದಲ್ಲಿ ಬರುವ ಅನೇಕ 'ಅನೈತಿಕ' ಅಂಶಗಳು, ಅತಿಮಾನುಷ ಘಟನೆಗಳು ಅವನ ವ್ಯಕ್ತಿತ್ವಕ್ಕೆ ಕಳಂಕ ತರುತ್ತವೆ ಎಂಬ ಕೆಲವು ವಾದಗಳಿಗೆ ಅವನ ದಿವ್ಯಜೀವನವೇ ಉತ್ತರ ನೀಡುತ್ತದೆ. ಚೋರ, ಜಾರ ಸ್ವಭಾವ ಶ್ರೀಕೃಷ್ಣದು ಎಂದು ಹಳಿಯುವ ಮಂದಿ ಕೇವಲ ಮತಾಂಧತೆಯ, ನಾಸ್ತಿಕತೆಯ ಮನೋಭಾವದವರು ಮಾತ್ರ; ಶ್ರೀಕೃಷ್ಣನ ಕಥೆಯನ್ನು ಹೇಳುವ ಸಾಹಿತ್ಯದಲ್ಲೆಲ್ಲೂ ಅವನ ಈ ಸ್ವಭಾವ ಕಳಂಕದ್ದಾಗಿ ಕಂಡುಬರುವುದಿಲ್ಲ. ಬಾಲ್ಯದ ತುಂಟತನ, ಕಳ್ಳತನ, ಕಪಟತೆಗಳು ಅವನ ವಿನೋದದ ವ್ಯಕ್ತಿತ್ವವನ್ನು ಚಿತ್ರಿಸಿದರೆ, ಪ್ರೌಢ ಶ್ರೀಕೃಷ್ಣನ 'ಕಪಟನಾಟಕ ಸೂತ್ರಧಾರ'ನ ಸ್ವಭಾವ ಅಪಾರ ಅನುಕಂಪ, ಕರುಣೆ, ಪ್ರೀತಿಗಳಿಂದ ತುಂಬಿದ ದುಷ್ಟಶಿಕ್ಷಕ–ಶಿಷ್ಟರಕ್ಷಕನ ಮಹಿಮೆಯಷ್ಟೆ. ಅವನ ವ್ಯಕ್ತಿತ್ವದಲ್ಲೆಲ್ಲೂ ದ್ವಂದ್ವವಿಲ್ಲ; ಸತ್ಯನಿಷ್ಠೆ, ಮಾನವೀಯತೆ, ಅಸಾಮಾನ್ಯ ಕ್ರಿಯಾಶೀಲತೆ, ದಿವ್ಯ ಲೀಲಾನಾಟಕವನ್ನಾಡುವ – ಆಡಿಸುವ ಅವತಾರಪುರುಷ ಅವನು.

ದಿವ್ಯತೆಯ ನೋಟ

ಶ್ರೀಕೃಷ್ಣ ಅಸಾಧಾರಣ ವ್ಯಕ್ತಿಯೆಂದಷ್ಟೇ ಹೇಳಿದರೆ ಅವನ ವ್ಯಕ್ತಿತ್ವವನ್ನು ಅರಿತಂತಾಗುವುದಿಲ್ಲ; 'ವ್ಯಕ್ತಿತ್ವ'ವೆಂಬ ಮಿತಿಯನ್ನು ಮೀರಿ ಅವನನ್ನು ಅರಿಯಬೇಕು, ಆಗ ಅವನು 'ಮಾನವ'ನಲ್ಲ, ದಿವ್ಯ ಮಾನವನೆಂಬುದು ಅರ್ಥವಾಗುವುದು. ನಮ್ಮ ಪರಂಪರೆಯಲ್ಲಿ ಮಾನವರೆಲ್ಲರೂ 'ಜೀವ'ವೆನಿಸಿಕೊಳ್ಳುತ್ತಾರೆ. ಹುಟ್ಟು–ಸಾವು, ಸುಖ–ದುಃಖ, ಹಾಗೂ ನೈಸರ್ಗಿಕ ನಿಯಮಗಳಿಗೆಲ್ಲ ಒಳಗಾಗುವ ಸಾಮಾನ್ಯ ವ್ಯಕ್ತಿತ್ವ ಅವರದು. ಇವನ್ನೆಲ್ಲ ಮೀರಿದ, ಪ್ರಕೃತಿಯನ್ನೇ ನಿಯಂತ್ರಿಸುವ, ಇಡೀ ಜಗತ್ತನ್ನು ಮೀರಿ ನಿಂತಿರುವ ಅಮಾನುಷ ಶಕ್ತಿಯನ್ನು ಹೊಂದಿರುವ ವ್ಯಕ್ತಿತ್ವವುಳ್ಳವನು ಕೇವಲ 'ಜೀವ'ನಲ್ಲ; ಅವನು 'ದೇವ.' ಅವನು ಜಗತ್ತನ್ನು ಮೀರಿ ನಿಂತಿರುವವನಾದರೆ ('**ಅತ್ಯತಿಷ್ಠದ್ದಶಾಂಗುಲಂ**' – 'ಈ ಲೋಕದಿಂದಾಚೆಗೂ ಹತ್ತು ಅಂಗುಲ ವ್ಯಾಪಿಸಿರುತ್ತಾನೆ' ಎನ್ನುತ್ತದೆ *ಪುರುಷಸೂಕ್ತ*) ಈ ಜಗತ್ತಿನಲ್ಲಿ ಸಾಮಾನ್ಯರಂತೆ ದೇಹಧಾರಣೆ ಮಾಡಿ 'ಲೀಲೆ'ಯನ್ನೇಕೆ ಮಾಡಿದ? ಇದಕ್ಕೆ ಅವತಾರತತ್ತ್ವ ಸಮರ್ಪಕ ಉತ್ತರ ನೀಡುತ್ತದೆ. 'ಎಲ್ಲೆಲ್ಲಿ ಧರ್ಮವು ಕುಗ್ಗಿಹೋಗಿ ಅಧರ್ಮ ತಾಂಡವವಾಡುತ್ತದೋ, ಅಲ್ಲಿ ಮತ್ತೆ ಧರ್ಮಸ್ಥಾಪನೆ ಮಾಡಲು ಭಗವಂತ ಮಾನವ ರೂಪವನ್ನು ಧರಿಸಿ, ಧರೆಗಿಳಿದು ಬರುತ್ತಾನೆ' ಎನ್ನುತ್ತದೆ ಗೀತೆ ('**ಯದಾ ಯದಾ ಹಿ ಧರ್ಮಸ್ಯ . .**' *ಗೀತೆ, ೪.೭*). ಅವನ ನಡೆನುಡಿ, ಸ್ವಭಾವ, ಕಾರ್ಯಗಳೆಲ್ಲ ಸಾಮಾನ್ಯರಂತೆ ಕಂಡುಬಂದರೂ, ಅದರ ಹಿಂದೆ ಅಸಾಧಾರಣ ದಿವ್ಯತೆ ಕೆಲಸಮಾಡುತ್ತದೆ. ಈ ದಿವ್ಯತೆ ಕ್ರಮೇಣ ಜನಮಾನಸದಲ್ಲಿ ಅಚ್ಚೊತ್ತಿ ನಿಂತು, ಭಗವಂತನ ದಿವ್ಯ ವ್ಯಕ್ತಿತ್ವವನ್ನು ಅವರು ಅರಿತುಕೊಳ್ಳುತ್ತಾರೆ. ಹೀಗೆ ಅವರು ಮತ್ತೆ ಧಾರ್ಮಿಕರೂ, ಆಧ್ಯಾತ್ಮಿಕರೂ ಆಗುತ್ತಾರೆ; ಭಗವಂತನ ದಿವ್ಯತೆ ಅವರಿಂದಾಗಿ ಹೆಚ್ಚು ಹೆಚ್ಚು ಪ್ರಕಾಶಗೊಳ್ಳುತ್ತದೆ.

ಶ್ರೀಕೃಷ್ಣನ ದಿವ್ಯತೆ ಅವನ ಹುಟ್ಟಿನಿಂದಲೇ ಆರಂಭವಾಯಿತೆನ್ನಬೇಕು. ಕಾರಾಗೃಹದಲ್ಲಿ ಜನನ, ಆದರೆ ಮಾತಪಿತೃಗಳಿಗೆ ಅಭಯ! ನಡುರಾತ್ರಿ ಹುಟ್ಟಿದ, ಆದರೆ ಅಂಧಕಾರವನ್ನೇ ಅಟ್ಟಿದ! ಗೊಲ್ಲರ ನಡುವೆ ಗೊಲ್ಲನಾದ; ಎಲ್ಲ ದುಷ್ಟರಾಕ್ಷಸರ ದಮನಗೈದ! ಮತ್ತೆ ಇಡೀ ಗ್ರಾಮದ ಕಣ್ಗೊಂಬೆಯಾದ, ದಿವ್ಯಪ್ರೇಮದಲ್ಲಿ ಮಾತ್ರ ಎಲ್ಲರನ್ನೂ ಮೀರಿನಿಂತ! ಮುಂದೆ ಉತ್ತರಭಾರತದ ಇಡೀ ರಾಜಕರಣ ಶ್ರೀಕೃಷ್ಣನ ಕಿರುಬೆರಳಿನ ಆಟವಾಯಿತು; ಸಹಸ್ರಾರು ಮಂದಿ ಅವನ ಭಕ್ತರಾದರು, ಅನುಯಾಯಿಗಳಾದರು. ಎಲ್ಲೂ ಅವನ ತಲೆ ತಿರುಗಲಿಲ್ಲ, ಅವನು ಏನನ್ನೂ ಬಯಸಲಿಲ್ಲ. ದೇಶದ, ಜನಸಾಮಾನ್ಯರ ಹಿತಕ್ಕಾಗಿ ಯೋಗ್ಯ ರಾಜರ ರಕ್ಷಣೆಗೆ ನಿಂತ. ದುಷ್ಟರ ಪೂರ್ಣನಾಶವಾಗುವವರೆಗೂ ವಿರಮಿಸಲಿಲ್ಲ. ಲೀಲೆಯ ಅಂತ್ಯವಾಗುತ್ತಲೇ ಶ್ರೀಕೃಷ್ಣ ತನ್ನ ನಿಜವಾದ ನೆಲೆಗೆ ಮರಳಿದ.

'ಜನ್ಮ ಕರ್ಮಚ ಮೇ ದಿವ್ಯಂ ಏವಂ ಯೋ ವೇತ್ತಿ ತತ್ತ್ವತಃ' –'ಯಾವನು ಹೀಗೆ ನನ್ನ ದಿವ್ಯವಾದ ಅವತಾರವನ್ನೂ ಕರ್ಮವನ್ನೂ ಯಥಾರ್ಥವಾಗಿ ತಿಳಿಯುತ್ತಾನೋ' *(ಗೀತೆ, ೪.೯)* – ಎಂದು ಶ್ರೀಕೃಷ್ಣನೇ ಭಗವದ್ಗೀತೆಯಲ್ಲಿ ಹೇಳುತ್ತಾನೆ. 'ಯಥಾರ್ಥವಾಗಿ' ತಿಳಿಯುವುದೆಂದರೆ ಶ್ರೀಕೃಷ್ಣನ ಸಾಕ್ಷಾತ್ಕಾರ ಮಾಡಿಕೊಂಡಂತೆಯೇ. ಹೀಗೆ ಅವನ ವ್ಯಕ್ತಿತ್ವ ಎಲ್ಲ ಆಧ್ಯಾತ್ಮಿಕ ಸಾಧನೆಗಳ ಗಮ್ಯಸ್ಥಾನವೂ ಆಗಿದೆ; ಅವನ ವ್ಯಕ್ತಿತ್ವವೇ ತತ್ತ್ವವೂ ಆಗಿದೆ. ಆದ್ದರಿಂದಲೇ ಇರಬೇಕು, ಅವನ ಜನ್ಮ (ಅಥವಾ ಅವತಾರ) ಎಂದೇ ಆಗಿರಲಿ, ಎಲ್ಲೇ ಆಗಿರಲಿ – 'ಶ್ರೀಕೃಷ್ಣ ನಮ್ಮವನೇ' ಎಂದು ಜಗತ್ತಿನ ಎಲ್ಲರೂ ಹೇಳಿಕೊಳ್ಳಬಹುದು; ಎಲ್ಲ ಕಾಲದವರೂ ಹೇಳಿಕೊಳ್ಳಬಹುದು. ಕಾಲ,

ದೇಶಗಳನ್ನು ಮೀರಿ ನಿಂತ ವ್ಯಕ್ತಿತ್ವ ಶ್ರೀಕೃಷ್ಣನದು. ಸುಮಾರು ಐದು ಸಾವಿರ ವರ್ಷಗಳ ನಂತರವೂ ಶ್ರೀಕೃಷ್ಣನ ವಾಣಿ ಭಕ್ತರ ಹೃದಯದಲ್ಲಿ ಗೀತೆಯ ರೂಪದಲ್ಲಿ ಅನುರಣಿಸುತ್ತಿರುವುದರ ಹಿನ್ನೆಲೆ ಇದೇ ಆಗಿದೆ.

ಗೀತೆಯ ಸ್ತೋತ್ರ

ಅರ್ಜುನನಿಗೆ ಶ್ರೀಕೃಷ್ಣ ರಣರಂಗದಲ್ಲಿ ಧೈರ್ಯದ, ಸತ್ಯದ, ತತ್ತ್ವದ ಹಾಗೂ ಆದರ್ಶದ ಉಪದೇಶ ಮಾಡಿದುದು ಒಂದು ಪ್ರಾಸಂಗಿಕ ಘಟನೆಯಾಗಿರಬಹುದು. ಆದರೆ ಅದು ಅಷ್ಟೇ ಅಲ್ಲ; ಮಾನವನಿಗೆ ಎಲ್ಲ ಕಾಲಕ್ಕೆ, ಎಲ್ಲ ಸನ್ನಿವೇಶಕ್ಕೆ ಉತ್ತರ ನೀಡಬಲ್ಲ, ದಾರಿ ತೋರಿಸಬಲ್ಲ ದಿವ್ಯ ಸ್ತೋತ್ರವದು. ಬೃಹತ್ತಾದ ಮಹಾ



ಭಾರತದ ಬಗ್ಗೆ ಹೇಳುತ್ತ 'ಜಗತ್ತಿನಲ್ಲಿ ಇರುವುದೆಲ್ಲ ಇಲ್ಲಿದೆ; ಇಲ್ಲಿಲ್ಲದ್ದೇನೂ ಜಗತ್ತನಲ್ಲಿಲ್ಲ' ಎನ್ನುತ್ತಾರೆ. ಆದರೆ ನಿಜವಾದ ಅರ್ಥದಲ್ಲಿ, ಗೀತೆಯನ್ನು ಕುರಿತೇ ಈ ಮಾತನ್ನು ಹೇಳಬೇಕು. ಮಹಾಭಾರತದ ತಿರುಳೇ ಗೀತೆ; ಆದ್ದರಿಂದ ಇಲ್ಲಿರುವುದೆಲ್ಲವೂ ತತ್ತ್ವರೂಪದಲ್ಲಿ. ಜಗತ್ತಿನಲ್ಲಿರುವ ಎಲ್ಲವೂ ತತ್ತ್ವರೂಪದಲ್ಲಿ ಇಲ್ಲಿದೆ, ಇಲ್ಲಿಲ್ಲದ ತತ್ತ್ವವನ್ನು ಇನ್ನೆಲ್ಲಿ ಕಾಣಬಹುದು? – ಗೀತೆಯ ಮಹತ್ವವನ್ನು ನಿಜವಾಗಿ ಅರಿತುಕೊಂಡ ಮಹಾನುಭಾವನ ಮಾತದು. ಮಾನವನ ಎಲ್ಲ ನೆಲೆಗಳಿಂದ, ಎಲ್ಲ ಹಂತಗಳಿಂದ ಆರಂಭಿಸಿ, ಅವನ ಅತ್ಯುನ್ನತ ಹಂತವಾದ ಸಾಕ್ಷಾತ್ಕಾರದವರೆಗೆ ಹೆಜ್ಜೆಹೆಜ್ಜೆಗೂ ಕೈಹಿಡಿದು ದಾರಿ ತೋರಿಸುವ ಸಾಧನೆಯ ಕೈದೀವಿಗೆ ಗೀತೆ. ಹಲವು ಬಗೆಯ ವ್ಯಕ್ತಿತ್ವಗಳಿಗೆ, ವಿಭಿನ್ನ ಮಾನಸಿಕ ರಚನೆಗಳಿಗೆ ಒಗ್ಗುವ ಸಾಧನೆಯ ಮಾರ್ಗಗಳು ಇಲ್ಲಿವೆ. ಮಾನಸಿಕ, ಬೌದ್ಧಿಕ, ಮನೋವೈಜ್ಞಾನಿಕ, ತಾತ್ತ್ವಿಕ, ಆಧ್ಯಾತ್ಮಿಕ – ಈ ಎಲ್ಲ ಹಂತಗಳಲ್ಲಿ ಶ್ರೀಕೃಷ್ಣನು ನೀಡುವ ಉಪದೇಶಗಳು ಸಾಧಕನಿಗೆ ಸಹಾಯ ಮಾಡುತ್ತವೆ. ಇದಕ್ಕನುಗುಣವಾಗಿ ಭಕ್ತಿಯೋಗ, ಕರ್ಮಯೋಗ, ಜ್ಞಾನಯೋಗವೇ ಮೊದಲಾದ 'ಯೋಗ'ಗಳನ್ನು ಜಗತ್ತಿಗೆ ಗೀತೆಯ ಮೂಲಕ ನೀಡಿದ್ದಾನೆ, 'ಯೋಗೇಶ್ವರ'ನಾದ ಕೃಷ್ಣ. ಇಲ್ಲಿ ಅತ್ಯಂತ ಅಚ್ಚರಿಯನ್ನು ಮೂಡಿಸುವ ಅಂಶವೆಂದರೆ, ಗೀತೆಯ ತತ್ತ್ವಗಳೆಲ್ಲವೂ ಶ್ರೀಕೃಷ್ಣನ ಜೀವನದಲ್ಲಿ ಗುಪ್ತಗಾಮಿನಿಯಂತೆ ಪ್ರವಹಿಸುತ್ತದೆ ಎಂಬುದು. ಆರನೇ ಅಧ್ಯಾಯದ ಸಮದರ್ಶಿತ್ವ, ಹನ್ನೆರಡನೇ ಅಧ್ಯಯದ ಭಕ್ತಿ-ಮಹಿಮೆ, ಹತ್ತನೇ ಅಧ್ಯಾಯದ ಅಸಾಮಾನ್ಯಗುಣದರ್ಶನ, ಹದಿನೆಂಟನೇ ಅಧ್ಯಾಯದಲ್ಲಿ ಮತ್ತು ಒಂಬತ್ತನೇ ಅಧ್ಯಾಯದಲ್ಲಿ ಕಂಡುಬರುವ ಶರಣಾಗತಿ ಮತ್ತು ವಿಶ್ವವಿಶಾಲ ಭಾವನೆ – ಇವು ಶ್ರೀಕೃಷ್ಣನ ವ್ಯಕ್ತಿತ್ವದ ಸಾರಭೂತ ಅಂಶಗಳೇ ಆಗಿವೆ. ಗೀತೆಯನ್ನು ಮಹಾಭಾರತದಲ್ಲಿ ಅನಂತರ ಸೇರಿಸಲಾಯಿತು ಎಂಬ ವಾದ ಇಲ್ಲಿ ನಿರರ್ಥಕವೆನಿಸುತ್ತದೆ.

ಪೂರ್ಣ ಮಾನವ – ಪೂರ್ಣಾವತಾರ

ಶ್ರೀಕೃಷ್ಣನಿಗೆ ಎರಡು ಬಿರುದುಗಳಿವೆ. ಅವನನ್ನು 'ಪುರುಷೋತ್ತಮ'ನೆನ್ನುತ್ತಾರೆ. ಪುರುಷನೆಂದರೆ ಮಾನವ ಎಂದುಕೊಂಡಾಗ, ಶ್ರೀಕೃಷ್ಣ ಮಾನವರಲ್ಲೆಲ್ಲ ಪರಿಪೂರ್ಣನು, ಉತ್ತಮನು. ಮಾನವ ಜೀವನದ ಎಲ್ಲ ಅಂಗಗಳನ್ನೂ ಅವನು ಸಮಗ್ರವಾಗಿ ಬದುಕಿದವನು; ಅವನದು ತುಂಬು ಜೀವನ. ಕುಟುಂಬ, ಸ್ನೇಹಿತರು, ಬಂಧುಗಳು, ಪತ್ನಿಯರು, ವೈರಿಗಳು, ಮಹಾಪುರುಷರು – ಹೀಗೆ ಎಲ್ಲ ವಿಷಯಗಳಲ್ಲೂ ಅವನು ಮಿಗಿಲಾದವನ್ನೇ ಸಂಪಾದಿಸಿದ, ಎಲ್ಲರೊಡನೆ ಬೆರೆತೂ ಅವರಿಂದ ಬೇರೆಯಾಗಿ ನಿಂತ. ಅವನು ಯಾರಿಂದಲೂ ಏನನ್ನೂ ಬೇಡಲಿಲ್ಲ, ಆದರೆ ಪ್ರತಿಯೊಬ್ಬರಿಗೂ ನೀಡುತ್ತಲೇ ಹೋದ. ತ್ಯಾಗ, ವೈರಾಗ್ಯ ಇವುಗಳೆಲ್ಲ ತನ್ನ ಪಾಲಿಗೆ; ಪ್ರೀತಿ, ಸುಖ, ಆನಂದಗಳೆಲ್ಲ ಇತರರ ಪಾಲಿಗೆ. ಶ್ರೀಕೃಷ್ಣನ ಮಹಿಮಾತಿಶಯವಿರುವುದೇ ಇಂತಹ ಅಸದೃಶ ಸ್ವಭಾವದಲ್ಲಿ.

ಮತ್ಸ್ಯಕೂರ್ಮಾದಿ ಅವತಾರಗಳೆಲ್ಲ ಕಾಲದ ಒಂದೊಂದು ಆವಶ್ಯಕತೆಗಾಗಿ ನಡೆದರೆ, ಕೃಷ್ಣಾವತಾರವನ್ನು ಹಾಗನ್ನುವಂತಿಲ್ಲ. ಕಾಲದ ಅಗತ್ಯವನ್ನು ಪೂರೈಸುವುದಕ್ಕಾಗಿಯೇ ಶ್ರೀಕೃಷ್ಣಾವತಾರ ನಡೆದರೂ, ಅಲ್ಲಿ ವ್ಯಕ್ತವಾಗುವ ಭಾವಗಳು ಸಮಗ್ರ ಮಾನವ ಜನಾಂಗದ, ಇಡೀ ಪ್ರಪಂಚದ, ಸೃಷ್ಟಿಯ ಎಲ್ಲ ಜೀವಿಗಳ ಉದ್ಧಾರವನ್ನು ಮಾಡಬಲ್ಲವು ಅನಿಸುತ್ತದೆ. ಶ್ರೀಕೃಷ್ಣನ ಜೀವನ ಹಾಗೂ ಉಪದೇಶಗಳು ಈ ಪರಿಪೂರ್ಣತೆಯನ್ನು ತನ್ನಲ್ಲಿ ಅಡಕಗೊಳಿಸಿರುವುದರಿಂದಲೇ, ಈ ಅವತಾರವನ್ನು 'ಪೂರ್ಣಾವತಾರ' ಎಂದು ಕರೆದಿರಬೇಕು. ಶ್ರೀಕೃಷ್ಣನ ಕಥೆಯನ್ನು ವಿಸ್ತಾರವಾಗಿ ಸಾರುವ ಭಾಗವತ, ಮಹಾಭಾರತಗಳು, ಇತರ ಪುರಾಣ-ಉಪಪುರಾಣಗಳಲ್ಲಿ ಮತ್ತು ಅವನ ತತ್ತ್ವಗಳು ನಿತ್ಯನೂತನವಾಗಿ ಪ್ರವಹಿಸುತ್ತಿರುವ ಭಗವದ್ಗೀತೆಯಲ್ಲಿ ಈ ಪೂರ್ಣತೆ ಸಮಗ್ರವಾಗಿ ಚಿತ್ರಿತವಾಗಿದೆ. ಪ್ರತಿ ವರ್ಷ ನಾವು ವೈಭವೋತ್ಸಾಹಗಳಿಂದ ಆಚರಿಸುವ 'ಶ್ರೀಕೃಷ್ಣ ಜನ್ಮಾಷ್ಟಮಿ'ಯ ಪುಣ್ಯದಿನದಂದು ಇಂತಹ ಕೃತಿಗಳನ್ನು ಓದಬೇಕು; ಶ್ರೀಕೃಷ್ಣನ ದಿವ್ಯಜೀವನ, ತತ್ತ್ವಗಳನ್ನು ನಮ್ಮೆದೆಯಲ್ಲಿ ಧರಿಸಿಕೊಳ್ಳಬೇಕು. ಹೀಗೆ ಅವನ ನಿರಂತರ ದಿವ್ಯಲೀಲೆ ನಮ್ಮೆಲ್ಲರ ಅಂತರಂಗದಲ್ಲಿ ಹರಿದಾಡಬೇಕು; ಇದರಿಂದ ನಾವೂ ಅವನ ದಿವ್ಯತೆಯ ಭಾಗವಾಗುತ್ತೇವೆ. ಅಂತಹ ಮಾನಸಿಕ ಸ್ಥಿತಿಯನ್ನು ತಲುಪಿದಾಗ ವೃಂದಾವನ, ಗೋಕುಲ, ಮಧುರೆ, ದ್ವಾರಕೆಗಳೆಲ್ಲ ಎಲ್ಲೋ ದೂರ ಇರುವುದಿಲ್ಲ; ನಮ್ಮ ಹೃದಯದಲ್ಲೇ ಆ ದಿವ್ಯಧಾಮಗಳೆಲ್ಲ ಶ್ರೀಕೃಷ್ಣನ ನೆನಪಿನೊಂದಿಗೆ ನಿರಂತರ ಅನುರಣಿಸುತ್ತಿರುತ್ತವೆ. ✤

ಲೋಕಶಿಕ್ಷಣ



✤ ಮೊದಲು ಹೃದಯಮಂದಿರದಲ್ಲಿ ಭಗವಂತನನ್ನು ಪ್ರತಿಷ್ಠಾಪನೆ ಮಾಡಿಕೊಳ್ಳಿ. ಬಳಿಕ ಇಚ್ಛೆಯಾದರೆ ಲೆಕ್ಚರ್ ಕೊಡಿ. ವಿವೇಕ, ವೈರಾಗ್ಯ ಗಳಿಸಿಕೊಳ್ಳದೆ ಕೇವಲ 'ಬ್ರಹ್ಮ, ಬ್ರಹ್ಮ' ಅಂತ ಹೇಳುತ್ತಿದ್ದರೆ ಏನು ದೊರೆತೀತು?

✤ ಲೋಕಶಿಕ್ಷಣ ಬಹಳ ಕಠಿಣವಾದ ಕೆಲಸ. ಭಗವಂತ ತನ್ನ ಸಾಕ್ಷಾತ್ಕಾರ ಕೊಟ್ಟು ಆದೇಶವೀಯುವುದಾದರೆ ಮನುಷ್ಯ ಲೋಕಶಿಕ್ಷಣ ಕಾರ್ಯವನ್ನು ಮಾಡಬಲ್ಲ. ನಾರದ ಶುಕದೇವಾದಿಗಳಿಗೆ ಭಗವಂತನಿಂದ ಆದೇಶ ದೊರೆತಿತ್ತು. ಶಂಕರಾಚಾರ್ಯರಿಗೂ ದೊರೆತಿತ್ತು. ಆದೇಶವಿಲ್ಲದೆ ಇತ್ತು ಎಂದರೆ, ಯಾರು ತಾನೇ ನಿನ್ನ ಮಾತಿಗೆ ಬೆಲೆ ಕೊಡುತ್ತಾರೆ?

✤ ನೀರು ಬೇಕು ಅಂತ ಬಾವಿ ತೋಡುತ್ತಾರೆ. ಅಲ್ಲೇನಾದರೂ ಒಂದು ಸ್ವಲ್ಪ ಅರೆ ಸಿಕ್ಕಿತು ಅಂದರೆ, ಆ ಸ್ಥಳ ಬಿಟ್ಟುಬಿಡುತ್ತಾರೆ. ಬಳಿಕ ಬೇರೆ ಕಡೆ ಅಗೆಯಲು ಶುರು ಮಾಡುತ್ತಾರೆ. ಅಲ್ಲೇನಾದರೂ ಮರಳು ಸಿಕ್ಕಿಬಿಟ್ಟಿತು ಎಂದರೆ, ಆ ಭಾಗವನ್ನೂ ಬಿಟ್ಟು ಬಿಡುತ್ತಾರೆ. ಹೀಗೆ ಮುಂದುವರೆಯುತ್ತಲೇ ಇರುತ್ತಾರೆ. ಸುಮ್ಮಸುಮ್ಮನೆ ಮನಸ್ಸಿನಲ್ಲಿ ತನಗೆ ಆದೇಶ ದೊರೆತುಬಿಟ್ಟಿದೆ ಎಂದು ಭಾವಿಸಿಕೊಂಡು ಬಿಟ್ಟರೆ ಅದು ಯಾವ ಪ್ರಯೋಜನಕ್ಕೂ ಬಾರದು.

✤ ಸತ್ಯವಾಗಿಯೂ ಭಗವಂತ ನಮ್ಮ ಕಣ್ಣಿಗೆ ಕಾಣಿಸಿಕೊಳ್ಳುತ್ತಾನೆ, ನಮ್ಮೊಡನೆ ಮಾತುಕತೆ ಆಡುತ್ತಾನೆ. ಆಗ ಆತನಿಂದ ಆದೇಶ ಪಡೆಯಲು ಸಾಧ್ಯ. ಆ ರೀತಿಯಾಗಿ ಆದೇಶ ಪಡೆದ ವ್ಯಕ್ತಿಯ ಬಾಯಿಯಿಂದ ಬರುವ ಮಾತಿಗೆ ಎಷ್ಟು ಬಲ! ಅದು ಪರ್ವತಗಳನ್ನೂ ಚಲಿಸಿಬಿಡಬಲ್ಲದು. ಬರಿದೆ ಉಪನ್ಯಾಸ ಯಾವುದಕ್ಕೆ ಬಂದೀತು? ಒಂದೆರಡು ದಿನಗಳ ಮಟ್ಟಿಗೆ ಕೇಳುತ್ತಾರೆ, ಬಳಿಕ ಮರೆತುಬಿಡುತ್ತಾರೆ. ಅದರಂತೆ ಅವರು ಎಂದಿಗೂ ನಡೆದುಕೊಳ್ಳುವುದಿಲ್ಲ.

✤ ಭಗವಂತನಿಂದ ಆದೇಶ ಪಡೆಯದಿದ್ದರೆ ಅದು ಹಾಸ್ಯಾಸ್ಪದಕ್ಕೆ ಇಟ್ಟುಕೊಳ್ಳುತ್ತದೆ. ತನಗೇ ಪರಿಪಕ್ವತೆ ತಂದುಕೊಂಡಿಲ್ಲ, ಬೇರೆಯವರಿಗೆ ಪರಿಪಕ್ವತೆ ತರಲು ಹೋಗುವುದು! ಕುರುಡ ಕುರುಡನಿಗೆ ದಾರಿ ತೋರಿಸಿದಂತೆ! ಈ ವಿಧವಾದ ಹಿತ ವಿಪರೀತಕ್ಕಿಟ್ಟುಕೊಳ್ಳುತ್ತದೆ. ಭಗವಂತನ ಸಾಕ್ಷಾತ್ಕಾರ ತಂದುಕೊಂಡ ನಂತರ ಅಂತರ್ದೃಷ್ಟಿ ಉಂಟಾಗುತ್ತದೆ; ಯಾರಿಗೆ ಏನು ಎಂಬುದು ಗೊತ್ತಾಗುತ್ತದೆ. ಆಗ ಸರಿಯಾದ ಔಷಧಿ ಕೊಡಬಹುದು.

✤ ಭಗವಂತನಿಂದ ಆದೇಶ ಪಡೆದುಕೊಳ್ಳದೆ ಇದ್ದರೆ, 'ನಾನು ಲೋಕಶಿಕ್ಷಣ ಮಾಡುತ್ತಿದ್ದೇನೆ' ಎಂಬ ಅಹಂಕಾರ ಬಂದುಬಿಡುತ್ತದೆ. ಅಹಂಕಾರ ಅಜ್ಞಾನದಿಂದ ಉಂಟಾಗುತ್ತದೆ. ಅಜ್ಞಾನದಿಂದಲೇ ಅನ್ನಿಸುತ್ತದೆ, 'ನಾನು ಕರ್ತ' ಎಂಬುದಾಗಿ.

✤ ನೀವು ಹೇಳುತ್ತೀರಿ, ಜಗತ್ತಿಗೆ ಉಪಕಾರ ಮಾಡಬೇಕು ಎಂಬುದಾಗಿ. ಜಗತ್ತೇನು ಒಂದು ಅಂಗೈಯಗಲದ್ದೆ? ಅದೂ ಈ ಜಗತ್ತಿಗೆ ಉಪಕಾರ ಮಾಡಲು ಮೊದಲನೆಯದಾಗಿ ನೀವು ಯಾರು? ಮೊದಲು ಸಾಧನೆ ಮಾಡಿ ಭಗವಂತನನ್ನು ಸಾಕ್ಷಾತ್ಕಾರ ಮಾಡಿಕೊಳ್ಳಿ, ಆತ ಶಕ್ತಿಯನ್ನು ಕರುಣಿಸಿದ್ದೇ ಆದರೆ ಆಗ ಎಲ್ಲರಿಗೂ ಹಿತವನ್ನು ಮಾಡಬಲ್ಲಿರಿ; ಇಲ್ಲದಿದ್ದರೆ ಸಾಧ್ಯವಿಲ್ಲ.

✤ ಆದರೆ ಶಕ್ತಿವಿಶೇಷತೆಯನ್ನು ಒಪ್ಪಲೇಬೇಕು. ಸಾಮಾನ್ಯ ಜೀವಿಗಳು ಲೋಕಶಿಕ್ಷಣ ಮಾಡಲು ಹೆದರುತ್ತಾರೆ. ಸಾಮಾನ್ಯ ಕಡ್ಡಿ ಹೇಗೋ ಮಾಡಿ ತಾನು ಮಾತ್ರ ನೀರಿನ ಮೇಲೆ ತೇಲಿಹೋಗಬಲ್ಲುದು. ಆದರೆ ಅದರ ಮೇಲೇನಾದರೂ ಒಂದು ಹಕ್ಕಿ ಬಂದು ಕುಳಿತರೂ ಅದು ಮುಳುಗಿಹೋಗುತ್ತದೆ. ಆದರೆ ನಾರದಾದಿಗಳು ಭಾರೀ ದಿಮ್ಮಿಗಳಂಥ ಮನುಷ್ಯರು. ಈ ವಿಧದ ದಿಮ್ಮಿ ತಾನೂ ತೇಲಿಹೋಗುವುದಲ್ಲದೆ ಮನುಷ್ಯರನ್ನೂ, ಹಸುಗಳನ್ನು, ಕೊನೆಗೆ ಆನೆಯನ್ನೂ ಹೊತ್ತುಕೊಂಡು ಹೋಗಿಬಿಡುತ್ತದೆ.

✤ ಭಗವಂತನಿಂದ ಆದೇಶ ದೊರೆತಿದ್ದರೆ, ಆಗ ಲೋಕಶಿಕ್ಷಣ ತಪ್ಪಿನ ಕಾರ್ಯವೇನಲ್ಲ. ಆದೇಶ ಪಡೆದು ಲೋಕಶಿಕ್ಷಣ ಮಾಡಿದರೆ ಆತನನ್ನು ಯಾರೂ ಸೋಲಿಸಲಾರರು. ವಾಗ್ದೇವಿಯ ಒಂದು ಕಿರಣ ಮಾತ್ರ ಬಿದ್ದುದೇ ಆದರೆ, ವ್ಯಕ್ತಿಗೆ ಅಂಥ ಶಕ್ತಿ ಬಂದುಬಿಡುತ್ತದೆ. ಆತನೆದುರು ದೊಡ್ಡ ದೊಡ್ಡ ಪಂಡಿತರೆಲ್ಲ ಎರೆಹುಳುವಿನಂತಾಗಿ ಬಿಡುತ್ತಾರೆ.

✤ ದೀಪ ಉರಿಯುತ್ತಿದ್ದರೆ ದೀಪದ ಚಿಟ್ಟೆ ಗುಂಪುಗುಂಪಾಗಿ ತಾವೇ ಬರುತ್ತವೆ – ಆಹ್ವಾನವೀಯಬೇಕಾಗಿರುವುದಿಲ್ಲ. ಅದೇ ರೀತಿ ಯಾರಿಗೆ ಆದೇಶ ದೊರೆತಿದೆಯೋ ಆತ ಜನರನ್ನು ಕರೆಯಬೇಕಾಗಿರುವುದಿಲ್ಲ. ಆತನಲ್ಲಿ ಅಂಥ ಅತಿಮಾನುಷ ಆಕರ್ಷಕ ಶಕ್ತಿ. ಆಗ ಜನರು ತಾವುತಾವಾಗಿಯೇ ಬಂದು ಆತನನ್ನು ಮುತ್ತುತ್ತಾರೆ. ಆಗ ರಾಜಮಹಾರಾಜರೂ, ಬಾಬುಗಳೂ ಎಲ್ಲರೂ ಗುಂಪುಗುಂಪಾಗಿ ಬರಲಾರಂಭಿಸುತ್ತಾರೆ.

✤ ಕೆಲಸಕ್ಕೆ ಬಾರದವರೆಲ್ಲಾ ಉಪನ್ಯಾಸ ಕೊಟ್ಟರೆ ಅದು ಯಾವ ಪ್ರಯೋಜನಕ್ಕೂ ಬಾರದು. ಭಗವಂತನಿಂದ ಬಂದ ಲಾಂಛನ ಹತ್ತಿರ ಇದ್ದರೆ ತಾನೆ ಹೇಳಿದ ಹಾಗೆ ಕೇಳುತ್ತಾರೆ.

ಶ್ರೀರಾಮಕೃಷ್ಣ ವಚನವೇದದಿಂದ

ಅಸಾಧಾರಣ ವ್ಯಕ್ತಿತ್ವದ ರಾಷ್ಟ್ರಪತಿ ಡಾ. ಅಬ್ದುಲ್ ಕಲಾಂ



ಜುಲೈ ೨೭ರಂದು ವಿಧಿವಶರಾದ ಭಾರತದ ೧೧ನೇ ರಾಷ್ಟ್ರಪತಿ ಡಾ. ಎ.ಪಿ.ಜೆ. ಅಬ್ದುಲ್ ಕಲಾಂ ಅವರು ತಮ್ಮ ಅಸಾಧಾರಣ ವ್ಯಕ್ತಿತ್ವದ, ಅತಿಶ್ರೇಷ್ಠ ಸಾಧನೆಯ, ಸಾರ್ಥಕ ಜೀವನದ ಯಾತ್ರೆಯನ್ನು ಕೊನೆಗೊಳಿಸಿದರು. ಭಾರತದ ಅತ್ಯುನ್ನತ ಪದವಿಯನ್ನು ಅಲಂಕರಿಸಿದ ಧೀಮಂತರಾಗಿ ಮಾತ್ರವಲ್ಲ , ಆಧುನಿಕ ಭಾರತದ ಅತ್ಯುನ್ನತ ವಿಜ್ಞಾನಿಯಾಗಿ, ಅತಿಶ್ರೇಷ್ಠ ಶಿಕ್ಷಕರಾಗಿ, ಮಾನವೀಯ ಹೃದಯದ ಸರಳ, ಸುಸಂಸ್ಕೃತ ಭಾರತೀಯನಾಗಿ, ಎಲ್ಲಕ್ಕಿಂತ ಹೆಚ್ಚಾಗಿ ಒಬ್ಬ ಆಧ್ಯಾತ್ಮಿಕ ಸಾಧಕನಾಗಿ ಅವರು ಎತ್ತರೇಕ್ಕೇರುತ್ತಾರೆ. ಹಲವು ಬಗೆಯ ಮಹಿಮಾನ್ವಿತ ಗುಣಗಳು ಒಬ್ಬ ವ್ಯಕ್ತಿಯಲ್ಲಿ ಕಾಣಬೇಕೆಂದರೆ, ಅದು ಡಾ. ಕಲಾಂ ಅವರಲ್ಲಿ ಮಾತ್ರ.

ನನಸಾದ ಕನಸು

ತಮಿಳುನಾಡಿನ ರಾಮೇಶ್ವರಂ ಪರಿಸರದಲ್ಲಿ ಬೆಳೆದ ಕಲಾಂ ಅವರು ತಮ್ಮ ಪರಿಸರದಿಂದ, ನೆರೆಹೊರೆಯ ವಿಶೇಷ ವ್ಯಕ್ತಿಗಳಿಂದ ತಮ್ಮ ಉಜ್ವಲ ಬದುಕನ್ನು ಕಟ್ಟುವ ಪ್ರೇರಣೆ ಪಡೆದರು. ತಂದೆ, ತಾಯಿ, ಬಂಧುಗಳು, ಶಿಕ್ಷಕರು ತಮ್ಮ ಮೇಲೆ ಪ್ರಭಾವ ಬೀರಿದ ಬಗೆ, ತನ್ನಲ್ಲಿ ಅಡಗಿದ್ದ ಅಸಾಧಾರಣ ಚೈತನ್ಯವನ್ನು ಗುರುತಿಸಿದ ಅವರು ತಮಗೆ ಧೈರ್ಯ ತುಂಬಿದ ರೀತಿ, ಅಪಾರ ಆತ್ಮವಿಶ್ವಾಸವನ್ನು ಮೂಡಿಸುವ ಅವರ ಮಾತುಗಳು – ಇವನ್ನೆಲ್ಲ ಅಬ್ದುಲ್ ಕಲಾಂ ಕೊನೆಯವರೆಗೂ ಮರೆಯಲಿಲ್ಲ. ತಾವು ಕಾಣುತ್ತಿದ್ದ ಕನಸುಗಳ ಬಗ್ಗೆ ಹೇಳುತ್ತ, ''ಚಿಕ್ಕಂದಿನಿಂದಲೇ ನಾನು ಆಕಾಶದ ರಹಸ್ಯಗಳ ಬಗ್ಗೆ ಮತ್ತು ಹಾರಾಡುವ ಹಕ್ಕಿಗಳ ಬಗ್ಗೆ ಯೋಚಿಸುತ್ತಿದ್ದೆ. ಕೊಕ್ಕರೆ ಮತ್ತು ಇತರ ಸಮುದ್ರ ಹಕ್ಕಿಗಳು ನೆಲದಿಂದ ಹಾರುತ್ತಾ ಪಟಪಟನೆ ರೆಕ್ಕೆ ಹೊಡೆದು, ಒಂದು ಕ್ಷಣ ಹಾಗೆಯೇ ತೇಲುತ್ತಾ ಮತ್ತೆ ಎಗರುವುದು ಎಷ್ಟೊಂದು ಸುಂದರವಾದದ್ದು ಹೇಳಿ! ತೀರ ಪ್ರದೇಶದ ಹಳ್ಳಿಯ ಸಾಧಾರಣ ಹುಡುಗನಾದ ನಾನು ಮುಂದೊಂದು ದಿನ ಖಂಡಿತ ಆಕಾಶಕ್ಕೇರುತ್ತೇನೆ ಎಂದು ಕನಸು ಕಂಡಿದ್ದೆ'' ಎನ್ನುತ್ತಾರೆ *('ಅಗ್ನಿಯ ರೆಕ್ಕೆಗಳು', ಕಲಾಂ ಆತ್ಮಚರಿತ್ರೆ, ೨೦೦೨, ಪು.೧೨)*. ಅವರ ಕನಸು ನನಸಾಯಿತು. ಮುಂದೆ ವಿಜ್ಞಾನದಲ್ಲಿ ಅತ್ಯುನ್ನತ ಶಿಕ್ಷಣ ಪಡೆದು, ರಾಕೆಟ್ ತಂತ್ರಜ್ಞಾನ, ಉಪಗ್ರಹಗಳ ಯೋಜನೆ, ಕ್ಷಿಪಣಿಗಳ ಅಭಿವೃದ್ಧಿ ಮೊದಲಾದ ಅತ್ಯಾಧುನಿಕ ಕ್ಷೇತ್ರಗಳಲ್ಲೆಲ್ಲ ಭಾರತವನ್ನು ಜಾಗತಿಕ ಮಟ್ಟಕ್ಕೆ ಕೊಂಡೊಯ್ಯುವ ಕಾರ್ಯದಲ್ಲಿ ಡಾ.ಕಲಾಂ ಮಹತ್ತರ ಪಾತ್ರವನ್ನು ವಹಿಸಿದರು. ಒಬ್ಬ ಉನ್ನತ ದರ್ಜೆಯ ವಿಜ್ಞಾನಿಯಾಗಿ ಕೆಲಸ ಮಾಡುವಾಗಲೂ ಅವರು ತಮ್ಮ ಸರಳತೆ, ವಿನಯ, ನಿರಹಂಕಾರ ಸ್ವಭಾವವನ್ನು ಮಾತ್ರ ಬಿಡಲಿಲ್ಲ.



ವೈಜ್ಞಾನಿಕ ಸಾಧನೆ

ವಿದ್ಯಾಭ್ಯಾಸ ಮುಗಿದು, ಉದ್ಯೋಗಾರ್ಥಿಯಾಗಿ ಭಾರತೀಯ ವಾಯುಪಡೆಯಲ್ಲಿ ಪೈಲಟ್ ಆಗುವ ಗುರಿ ಹೊಂದಿದ್ದ ಕಲಾಂ, ಅದಕ್ಕೆ ಅವಕಾಶ ದೊರೆಯದಿದ್ದಾಗ ತುಂಬ ಮರುಗಿದ್ದರು. ಆದರೆ ಹೃಷೀಕೇಶದ ಸಂತ ಸ್ವಾಮಿ ಶಿವಾನಂದರ ಭವಿಷ್ಯವಾಣಿಯಂತೆ ಅವರು ತಮ್ಮ ಅಂತರಂಗದ ಕರೆಗೆ ಓಗೊಟ್ಟರು; ದೈವೇಚ್ಛೆಗೆ ಶರಣಾಗಿ ರಕ್ಷಣಾ ಇಲಾಖೆಯಲ್ಲಿ ವಿಜ್ಞಾನಿಯಾಗಿ ತಮ್ಮ ಸೇವೆಯನ್ನು ಆರಂಭಿಸಿದರು. ಅನಂತರ ಅವಕಾಶಗಳು ಬಂದಂತೆಲ್ಲ 'ತುಂಬಾ' ರಾಕೆಟ್ ಉಡ್ಡಯಣ ಕೇಂದ್ರ, ಹೆಚ್.ಎ.ಎಲ್., ಡಿ.ಆರ್.ಡಿ.ಓ, ಇಸ್ರೋ ಮೊದಲಾದ ಸಂಸ್ಥೆಗಳಲ್ಲಿ ವೈಮಾನಿಕ, ಉಪಗ್ರಹ ಯೋಜನೆಗಳಲ್ಲಿ ಮಹತ್ತರ ಕಾರ್ಯ ನಿರ್ವಹಿಸಿದರು. ಡಾ.ವಿಕ್ರಂ ಸಾರಾಭಾಯಿ, ಡಾ.ಸತೀಶ್ ಧವನ್ ಮೊದಲಾದ ದಿಗ್ಗಜಗಳ ಮಾರ್ಗದರ್ಶನ ಹಾಗೂ ಬೆಂಬಲದಿಂದ ಕಲಾಂ ಒಬ್ಬರು ಮುಂಚೂಣಿಯ ವಿಜ್ಞಾನಿಯಾಗಿ, ಒಬ್ಬ ಅತ್ಯುತ್ತಮ ಕಾರ್ಯನಿರ್ವಾಹಕರಾಗಿ ರೂಪುಗೊಂಡರು. ಭಾರತದ ಆಧುನಿಕ ತಂತ್ರಜ್ಞಾನ, ರಕ್ಷಣಾ ವ್ಯವಸ್ಥೆ, ಬಾಹಾಕಾಶ ಪ್ರಗತಿಗಳು ಕಲಾಂ ಅವರ ಪ್ರತಿಭೆ, ಕಾರ್ಯದಕ್ಷತೆ ಹಾಗೂ ಬದ್ಧತೆಗಳಿಂದ ಸಂಪನ್ನಗೊಂಡವು ಎಂದರೆ ತಪ್ಪಾಗಲಾರದು. ಈ ಎಲ್ಲ ಸಾಧನೆಗಳ ಫಲವಾಗಿ ಅವರಿಗೆ 'ಭಾರತರತ್ನ'ವೂ ಸೇರಿದಂತೆ ಅನೇಕಾನೇಕ ಪ್ರಶಸ್ತಿಗಳು ಸಂದವು.

ಶಿಸ್ತುಬದ್ಧತೆ, ನಾಯಕತ್ವ

ಡಾ.ಅಬ್ದುಲ್ ಕಲಾಂ ಅವರು ಬಾಲ್ಯದಿಂದಲೇ ರೂಢಿಸಿಕೊಂಡು ಬಂದಿದ್ದ ಶಿಸ್ತುಬದ್ಧತೆ ಅವರ ಜೀವನದುದ್ದಕ್ಕೂ ಒಂದು ವಿಶೇಷ ಗುಣವಾಗಿ ಬೆಳೆದು ಬಂತು. ವೈಜ್ಞಾನಿಕ ಅನ್ವೇಷಣೆ, ಪ್ರಗತಿ ಇವುಗಳಿಗೆ ಸಂಶೋಧಕನೊಬ್ಬ ರೂಢಿಸಿಕೊಳ್ಳಬೇಕಾದ ಅತ್ಯುತ್ತಮ ಗುಣವಿದು. ಭಾರತದಲ್ಲಿ ಸಹಜವಾಗಿ ಕಂಡುಬರುವ ಆಲಸ್ಯ, ಅಸೂಯೆ, ಸ್ಪರ್ಧಾಮನೋಭಾವಗಳು ಕಾರ್ಯನಿರ್ವಹಣೆಗೆ, ಪ್ರಗತಿಗೆ ಹಲವು ವಿಧದಲ್ಲಿ ಅಡಚಣೆಯಾಗಿರುವ ಸತ್ಯವನ್ನು ಕಂಡುಕೊಂಡ ಕಲಾಂ, ಅನೇಕ ಸಲ ಕಟ್ಟುನಿಟ್ಟಾದ ನಿರ್ಧಾರಗಳನ್ನೂ ತೆಗೆದುಕೊಂಡದ್ದಿದೆ; ತಮ್ಮ ಸಹೋದ್ಯೋಗಿಗಳೊಂದಿಗೆ ಕಠಿಣವಾಗಿ ವಾದಿಸಿದ್ದಿದೆ. ಆದರೆ ಅವರ ದೃಷ್ಟಿ ದೇಶದ ಪ್ರಗತಿ, ವೈಜ್ಞಾನಿಕ ಮುನ್ನಡೆ, ಕಾರ್ಯಸಾಧನೆಯಾಗಿತ್ತೇ ವಿನಾ ವೈಯಕ್ತಿಕ ಭಿನ್ನಭಿಪ್ರಾಯಗಳಲ್ಲ. ತನ್ನ ಹಿರಿಯರೊಂದಿಗೆ, ಸಹೋದ್ಯೋಗಿಗಳೊಂದಿಗೆ, ಕಿರಿಯರೊಂದಿಗೆ ಅವರು ಅತ್ಯಂತ ಉತ್ಸಾಹದಿಂದ ಬೆರೆಯುತ್ತಿದ್ದರು, ಕೆಲಸದಲ್ಲಿ ಅವರೊಂದಿಗೆ ಒಂದಾಗುತ್ತಿದ್ದರು. ಅವರು




ಕ್ರಿಯಾಶೀಲ ವಿಜ್ಞಾನಿಗಳಿಗೆ ಸ್ಫೂರ್ತಿಯ ಕೇಂದ್ರವಾಗಿದ್ದರು. ತಮ್ಮ ಕೌಟುಂಬಿಕ ಪರಿಸರ, ಧಾರ್ಮಿಕ ಶ್ರದ್ಧೆ, ತಾವು ಭೇಟಿಯಾದ ಸಾಧುಸಂತರ ಪ್ರಭಾವ ಇಂತಹ ಶಿಸ್ತುಬದ್ಧ ಸ್ವಭಾವವನ್ನು ತಮ್ಮಲ್ಲಿ ಬೆಳೆಸಿಕೊಂಡು ಬಂತು ಎಂದು ಡಾ.ಕಲಾಂ ತಮ್ಮ ಜೀವನ ಚರಿತ್ರೆಯಲ್ಲಿ ಬರೆಯುತ್ತಾರೆ.

ಕುಟುಂಬ, ಸಮಾಜ, ಜನತೆ

ಹಲವು ಮಂದಿ ವಿಜ್ಞಾನಿಗಳು ತಮ್ಮ ಬಂಧುಬಾಂಧವರ, ಸ್ನೇಹಿತರ, ತನ್ನ ಸಮಾಜದ ಸಂಪರ್ಕದಿಂದ ದೂರವಾಗಿ, ತಮ್ಮ ವೈಜ್ಞಾನಿಕ ಜಗತ್ತಿನಲ್ಲೇ ಮುಳುಗಿಬಿಡುವ ಉದಾಹರಣೆಗಳು ಸಾಕಷ್ಟಿವೆ. ಇದಕ್ಕೆ ಅಪವಾದವೆಂಬಂತೆ, ಅಬ್ದುಲ್ ಕಲಾಂ ಅವರು ಎಂದೂ ತನ್ನ ಜನರಿಂದ ದೂರವಾಗಲಿಲ್ಲ. ತಮ್ಮ ಅಧ್ಯಯನ, ಉದ್ಯೋಗ ಹಾಗೂ ಜವಾಬ್ದಾರಿಗಳ ನಿಮಿತ್ತ ಅವರು ತಮ್ಮ ಕುಟುಂಬದಿಂದ ದೂರವಿರಬೇಕಾಗಿ ಬಂದರೂ, ಕುಟುಂಬದ ಸದಸ್ಯರನ್ನೆಲ್ಲ ಅವರು ಅತ್ಯಂತ ಪ್ರೀತಿಸುತ್ತಿದ್ದರು. ತಂದೆ, ತಾಯಿ ಅಣ್ಣಂದಿರು, ತಂಗಿ ಹಾಗೂ ಇನ್ನಿತರ ಬಂಧುಗಳೊಂದಿಗೆ ಕೊನೆಯವರೆಗೂ ಸಂಪರ್ಕ ವಿಟ್ಟುಕೊಂಡಿದ್ದರು. ಅವರ ಕಾರ್ಯಕ್ಷೇತ್ರ ವಿಶಾಲವಾದಂತೆ ವೈವಿಧ್ಯಮಯ ವ್ಯಕ್ತಿತ್ವಗಳುಳ್ಳ ಜನರ ಒಡನಾಟ, ಪರಿಚಯಗಳೂ ವಿಸ್ತಾರಗೊಂಡವು; ಇಡೀ ಭಾರತವೇ ತಮ್ಮ ಸಮಾಜವೆಂಬಂತೆ ಅವರು ವಿವಿಧ ಸಂಧರ್ಭಗಳಲ್ಲಿ ಸಕ್ರಿಯವಾಗಿ ಭಾಗವಹಿಸಿದರು. ದೇಶದ ಪ್ರತಿಷ್ಠಿತ ಸಂಸ್ಥೆಗಳಾದ ಐ.ಐ.ಟಿ., ಐ.ಐ.ಎಸ್.ಸಿ. ಹಾಗೂ

ಇತರ ಉನ್ನತ ಶಿಕ್ಷಣ ಕೇಂದ್ರಗಳಲ್ಲಿ, ವೈಜ್ಞಾನಿಕ ಸಂಶೋಧನೆಯ ಸಂಸ್ಥೆ ಹಾಗೂ ಬಾಹ್ಯಾಕಾಶ ಸಂಸ್ಥೆಗಳಲ್ಲಿ, ಅಂತರರಾಷ್ಟ್ರೀಯ ವಿಜ್ಞಾನಿಗಳ ಸಭೆ, ಸಮಾರಂಭಗಳಲ್ಲಿ ಅವರು ಪಾಠ, ಪ್ರವಚನ



ನೀಡಿದರು. ಮಕ್ಕಳ ವಿದ್ಯಾಭ್ಯಾಸ, ಬೆಳವಣಿಗೆಗೆ ಅವರು ವಿಶೇಷ ಪ್ರೋತ್ಸಾಹ ನೀಡಿದ್ದರು. ಅವರಲ್ಲಿ ಅಡಗಿರುವ ಪ್ರತಿಭೆಯನ್ನು ಗುರುತಿಸಿ ಪ್ರೋತ್ಸಾಹಿಸುವ, ಅವರ ವೈಜ್ಞಾನಿಕ ಶಿಕ್ಷಣಕ್ಕೆ ಹೆಚ್ಚಿನ ಮಹತ್ವ ಕೊಡುವ ವಿಷಯದಲ್ಲಿ ಅವರು ವಿಶೇಷ ಕಾಳಜಿ ಹೊಂದಿದ್ದರು. ವಿದ್ಯಾರ್ಥಿಗಳನ್ನು ಕುರಿತು ವಿಶೇಷ ಪ್ರೀತಿ ಹೊಂದಿದ್ದ ಡಾ. ಕಲಾಂ ನಿಧನ ಹೊಂದಿದಾಗ ಸಹಸ್ರಾರು ಮಂದಿ ವಿದ್ಯಾರ್ಥಿಗಳು ದೇಶದಾದ್ಯಂತ ಅವರಿಗೆ ಶ್ರದ್ಧಾಂಜಲಿ ಅರ್ಪಿಸಿದರು. ಬೇರೆ ಯಾವ ರಾಜಕೀಯ ಧುರೀಣರಿಗೂ ಸಲ್ಲದ ಅಪೂರ್ವ ಶ್ರದ್ಧಾಂಜಲಿ ಅದಾಗಿತ್ತು. ಹೀಗೆ ತನ್ನ ದೇಶ, ಜನ, ಸಮಾಜವನ್ನು ಪ್ರೀತಿಸುವ ವಿಶೇಷ ಗುಣ ಡಾ.ಕಲಾಂ ಅವರನ್ನು ಇನ್ನಷ್ಟು ಎತ್ತರೇಕ್ಕೇರುವಂತೆ ಮಾಡಿತು.

ಆಧ್ಯಾತ್ಮಿಕತೆ

ಡಾ. ಅಬ್ದುಲ್ ಕಲಾಂ ಅವರು ಒಬ್ಬ ಶ್ರೇಷ್ಠ ವಿಜ್ಞಾನಿಯಾಗಿದ್ದರೂ, ಧರ್ಮ, ಆಧ್ಯಾತ್ಮಿಕತೆಗಳನ್ನು ಮೂಢನಂಬಿಕೆಯೆಂದು ತಳ್ಳಿ ಹಾಕುವ ಮನೋಭಾವ ಅವರದಾಗಿರಲಿಲ್ಲ, ಬಾಲ್ಯದಿಂದಲೂ ಧಾರ್ಮಿಕಶ್ರದ್ಧೆ, ಆಧ್ಯಾತ್ಮಿಕ ಪ್ರವೃತ್ತಿ ಅವರಲ್ಲಿ ಬೆಳೆದು ಬಂದಿತ್ತು. ಇಸ್ಲಾಂ ಧರ್ಮಕ್ಕೆ ಸೇರಿದವರಾಗಿದ್ದ ತಮ್ಮ ತಂದೆ, ತಾಯಿ, ಬಂಧುಗಳಲ್ಲಿದ್ದ ಧರ್ಮಶ್ರದ್ಧೆ, ತಮ್ಮ ಧರ್ಮದ ಪರಿಧಿಯಾಚೆಗೂ ವಿಸ್ತರಿಸಿದ್ದ ಅವರುಗಳ ಮಾನವೀಯತೆ – ಅನ್ಯ ಮತಸಹಿಷ್ಣುತೆ, ರಾಮೇಶ್ವರದ ಅರ್ಚಕರ ಒಡನಾಟದಿಂದ ತಂದೆಯವರಲ್ಲಿ ಬೆಳೆದು ಬಂದಿದ್ದ ಹಿಂದೂ ಆಚಾರವಿಚಾರಗಳ ಪರಿಚಯ – ಇವು ಕಲಾಂ ಅವರಲ್ಲೂ ಧಾರ್ಮಿಕ ಸಮನ್ವಯದ ಸ್ವಭಾವವನ್ನು ಬೆಳೆಸಿತ್ತು. ಭಾರತದಲ್ಲಿನ ಎಲ್ಲ ಧರ್ಮಗಳ ತಿರುಳನ್ನು ಅರಿತುಕೊಳ್ಳುವ ಯೋಗ್ಯ ಸಂದರ್ಭ ಗಳು ಡಾ. ಕಲಾಂ ಅವರಿಗೆ ದೊರಕಿತ್ತು; ಅದು ತಮ್ಮ ಪ್ರಗತಿಗೆ, ತಮ್ಮ ಜ್ಞಾನವಿಕಾಸಕ್ಕೆ ಅನವರತವೂ ಸ್ಫೂರ್ತಿ ನೀಡಿದ್ದಾಗಿ ಅವರು ಹಲವೆಡೆ ಹೇಳಿಕೊಂಡಿದ್ದಾರೆ. ಇದರೊಂದಿಗೆ ಹೃಷೀಕೇಶದ ಸ್ವಾಮಿ ಶಿವಾನಂದರು, ಸ್ವಾಮಿ ನಾರಾಯಣ ಸಂಪ್ರದಾಯದ ಪ್ರಮುಖ್ ಮಹಾರಾಜ್ ಇವರ ಸಂಪರ್ಕ ಅವರ ಆಧ್ಯಾತ್ಮಿಕ ಶ್ರದ್ಧೆ ಯನ್ನು ಇನ್ನಷ್ಟು ಗಾಢವಾಗಿಸಿತು. ಹಲವು ಬಾರಿ ರಾಮಕೃಷ್ಣ ಮಿಷನ್ನಿನ ಕೇಂದ್ರವಾದ ಬೇಲೂರು ಮಠಕ್ಕೆ ಅವರು ಭೇಟಿ ನೀಡಿದ್ದಲ್ಲದೆ, ಮಿಷನ್ನಿನ ವಿವಿಧ ಶಾಖಾಕೇಂದ್ರಗಳಲ್ಲಿ, ಹಲವು ವಿದ್ಯಾಸಂಸ್ಥೆಗಳಲ್ಲಿ , ಹಲವು ಕಾರ್ಯಕ್ರಮಗಳಲ್ಲಿ ಭಾಗ ವಹಿಸಿದ್ದಾರೆ. ಆಧ್ಯಾತ್ಮಿ ಕತೆಗೂ ವಿಜ್ಞಾನಕ್ಕೂ ವಿರೋಧವಿಲ್ಲವೆಂದೂ, ಅವು ಪರಸ್ಪರ ಪೂರಕವೆಂಬುದನ್ನೂ ಡಾ. ಅಬ್ದುಲ್ ಕಲಾಂ ತಮ್ಮ ಜೀವನದ ಮೂಲಕ ತೋರಿಸಿಕೊಟ್ಟರು.

'ಎಸ್.ಎಲ್.ವಿ.' ಸರಣಿಯ ಬಾಹ್ಯಾಕಾಶ ನೌಕೆಗಳ, 'ತ್ರಿಶೂಲ್', 'ಅಗ್ನಿ' ಮೊದಲಾದ ಕ್ಷಿಪಣಿಗಳ ರೂವಾರಿಯಾಗಿ ಕಾರ್ಯನಿರ್ವಹಿಸಿ ಭಾರತದ ಯಶಸ್ಸನ್ನು ಅಂತರರಾಷ್ಟ್ರೀಯ ಮಟ್ಟದ ಖ್ಯಾತಿಗೆ ಕೊಂಡೊಯ್ದ ಡಾ.ಕಲಾಂ ಅವರು ಒಬ್ಬ ಶ್ರೇಷ್ಠ ಭಾರತೀಯನಾಗಿ, ಶ್ರೇಷ್ಠ ವಿಜ್ಞಾನಿಯಾಗಿ ಪ್ರಮುಖರಾಗುವಂತೆ, ಒಬ್ಬ ಆಧ್ಯಾತ್ಮಿಕ ಅನ್ವೇಷಕರಾಗಿಯೂ ಮುಖ್ಯರಾಗುತ್ತಾರೆ. ಅವರ ಜೀವನ ಮುಂದಿನ ಪೀಳಿಗೆಯ ಜನತೆಗೆ ಅಪರಿಮಿತ ಸ್ಫೂರ್ತಿ, ಪ್ರೇರಣೆ ತುಂಬಲಿ ಎಂದು ಆಶಿಸುತ್ತಾ, ಡಾ.ಕಲಾಂ ಅವರಿಗೆ ನಮ್ಮ ಶ್ರದ್ಧಾಂಜಲಿಯನ್ನು ಅರ್ಪಿಸುತ್ತಿದ್ದೇವೆ. ✤

ಒಂದು ವಿಶೇಷ ಘಟನೆ

''ನನ್ನ ಕುಟುಂಬದಲ್ಲಿ ನಡೆದ ಘಟನೆ ಇದು. ನನ್ನ ಅಜ್ಜ, ಮುತ್ತಜ್ಜಂದಿರು ರಾಮೇಶ್ವರದ 'ರಾಮರ್ ತೀರ್ಥಂ' ಎಂಬ ಕೊಳದಲ್ಲಿ ರಾಮ, ಸೀತೆಯರ ಕಲ್ಯಾಣ ಮಹೋತ್ಸವವನ್ನು ಆಚರಿಸುವ ಸಂದರ್ಭದಲ್ಲಿ ದೇವರ ಅಲಂಕೃತವಾದ ವಿಗ್ರಹವನ್ನು ಹೊತ್ತೊಯ್ಯುವ ದೋಣಿಯನ್ನು ಸಿದ್ಧಪಡಿಸುತ್ತಿದ್ದರು. ಒಂದು ಬಾರಿ ಉತ್ಸವ ನಡೆಯುತ್ತಿದ್ದಾಗ ವಿಗ್ರಹ ನೀರಿನಲ್ಲಿ ಮುಳುಗಿಹೋಯಿತು. ನನ್ನ ಮುತ್ತಜ್ಜ ಸ್ವಲ್ಪವೂ ಅಳುಕದೆ ಕೊಳದಲ್ಲಿ ಮುಳುಗಿ, ವಿಗ್ರಹವನ್ನು ಮೇಲಕ್ಕೆತ್ತಿ ತಂದರು. ದೇವಸ್ಥಾನದ ಅರ್ಚಕರು ನನ್ನ ಕುಟುಂಬಕ್ಕೆ 'ಮುದಲ್ ಮರಿಯಾದೈ' (ಮೊದಲ ಗೌರವ) ಸಲ್ಲಿಸಿದರು. ವಿಗ್ರಹ ಸಿಗುವಂತಾಗಲು ರಾಮೇಶ್ವರದ ಮಸೀದಿಯಲ್ಲೂ ವಿಶೇಷ ಪ್ರಾರ್ಥನೆ ಸಲ್ಲಿಸಲಾಗಿತ್ತು. ಈ ಘಟನೆ ಮಾನವ ಸಹೋದರತ್ವದ, ಸಮನ್ವಯದ ಒಂದು ಉಜ್ಜ್ವಲ ಉದಾಹರಣೆಯೆಂದೇ ನನಗೆ ಯಾವಾಗಲೂ ಅನ್ನಿಸಿದೆ – ವಿಶೇಷವಾಗಿ ಇಂದಿನ ಸನ್ನಿವೇಶಗಳಲ್ಲಿ.''

–ಡಾ. ಎ.ಪಿ.ಜೆ. ಅಬ್ದುಲ್ ಕಲಾಂ, *Ignited Minds, p.95*



ಅಮರನಾಥನ ಸನ್ನಿಧಿಯಾತ್ರೆ

ಸ್ವಾಮಿ ಜ್ಞಾನಯೋಗಾನಂದ

ಅಮರನಾಥ ಯಾತ್ರೆಯನ್ನು ಎರಡು ದಾರಿಗಳಿಂದ ಮಾಡಬಹುದು. ಪಹಲ್‌ಗಾಮ್‌ನಿಂದ ಆರಂಭಿಸಿ, ಚಂದನವಾಡಿ–ಶೇಷನಾಗ–ಪಂಚತರಣಿ ಮೂಲಕ ಹೋಗುವುದು ಒಂದು ದಾರಿ; ಬಾಲ್‌ತಾಲ್‌ನಿಂದ ಆರಂಭಿಸಿ ನೇರ ಅಮರನಾಥ ಗುಹೆಯನ್ನು ತಲುಪುವುದು ಇನ್ನೊಂದು ದಾರಿ. ಮೊದಲನೆಯ ದಾರಿಯ ಮೂಲಕ ಅಮರನಾಥಕ್ಕೆ ಹೋಗಿ, ಭಗವಂತನ ದರ್ಶನ ಮಾಡಿಕೊಂಡು, ಎರಡನೆಯ ದಾರಿಯ ಮೂಲಕ ಹಿಂದಿರುಗುವುದು ಸಾಂಪ್ರದಾಯಿಕ ಯಾತ್ರೆಯ ಕ್ರಮ. ಕಾರಣ, ಬಾಲ್‌ತಾಲ್‌ನಿಂದ ಯಾತ್ರೆ ಹೋಗುವುದು ಅತ್ಯಂತ ಕಷ್ಟಕರ; ಹದಿನಾಲ್ಕೇ ಕಿ.ಮೀ. ದೂರವಾದರೂ, ದಾರಿ ಅತ್ಯಂತ ಕಡಿದು. ನಿಧಾನವಾಗಿ ಏರುತ್ತ ಹೋಗುವ ಪರ್ವತ ಕಣಿವೆಯ ಹಾದಿ; ಎಲ್ಲೂ ಇಳಿಜಾರೇ ಇಲ್ಲದೆ ಒಂದೇ ಸಮನೆ ಏರುತ್ತದೆ. ಯಾತ್ರಿಗಳು ಅರ್ಧದಾರಿಯಲ್ಲೇ ಅರೆಜೀವವಾಗಿಬಿಡುತ್ತಾರೆ. ಪಹಲ್‌ಗಾಮ್ ಮೂಲಕ ಯಾತ್ರೆ ಆರಂಭಿಸಿದರೆ ಕೆಲವು ಅನುಕೂಲತೆಗಳಿವೆ. ಒಂದು, ದಾರಿ ಒಂದೇ ಸಮನೆ ಏರುವುದಿಲ್ಲ; ಏರಿದಂತೆ ಇಳಿದೂ ಸಾಗಬೇಕಾಗುತ್ತದೆ. ೩೬ ಕಿ.ಮೀ ದೂರ ನಡೆಯಬೇಕು; ಶೇಷನಾಗದಲ್ಲಿ ಒಂದು ರಾತ್ರಿ ತಂಗಿ, ಮರುದಿನ ಯಾತ್ರೆ ಮುಂದುವರೆಸಬಹುದು. ಇಲ್ಲಿ ಆಯಾಸ ಕಡಿಮೆ. ಎರಡು, ಶೇಷನಾಗ, ಪಂಚತರಣಿ ಹಾಗೂ ನಡುನಡುವೆ ಸಿಗುವ ಪರ್ವತ, ಕಣಿವೆ, ಸರೋವರ, ತೊರೆಗಳ ದೃಶ್ಯಗಳು ಅಸಾಧಾರಣ ಸೌಂದರ್ಯದಿಂದ ಕೂಡಿವೆ. ಬಾಲ್‌ತಾಲ್‌ನಿಂದ ಯಾತ್ರೆ ಮರಳುವಾಗ ಇಳಿಜಾರಿನಲ್ಲಿ ಇಳಿಯುತ್ತ ಹೋಗುವುದರಿಂದ ಹೆಚ್ಚು ಆಯಾಸವಿಲ್ಲ; ಬೇಗನೆ ಮರಳುತ್ತೇವೆ. ಹೀಗಾಗಿ ನಾವು ಸಾಂಪ್ರದಾಯಿಕ ದಾರಿಯಲ್ಲೇ ಹೋಗುವುದೆಂದು ನಿಶ್ಚಯಿಸಿದೆವು.

ನಾವು ಆರು ಮಂದಿ ಸಾಧುಗಳು, ರಾಮಕೃಷ್ಣ ಮಿಷನ್‌ನ ವಿವಿಧ ಶಾಖಾಕೇಂದ್ರಗಳಿಂದ ಬಂದವರು ಜಮ್ಮುವಿನಲ್ಲಿ ಒಟ್ಟಾಗಿದ್ದೆವು. ಒಬ್ಬರು ಖಾಸಗಿ ಆಶ್ರಮದ ಸಾಧುಗಳೂ ನಮ್ಮೊಡನೆ ಇದ್ದರು. ಎಲ್ಲರೂ ಕನ್ನಡಿಗರೇ.

ಬಹಳ ಮಂದಿ ಯಾತ್ರಿಕರು ಜಮ್ಮುವಿನಿಂದ ನೇರ ಪಹಲ್‌ಗಾಮ್‌ಗೆ ಹೋಗಿ, ಅಲ್ಲಿಂದ ಯಾತ್ರೆ ಆರಂಭಿಸುತ್ತಾರೆ. ಆದರೆ ನಾವು ಮೊದಲು ಶ್ರೀನಗರಕ್ಕೆ ಹೋಗಿ, ಅಲ್ಲಿನ ರಾಮಕೃಷ್ಣ ಮಿಷನ್ ಕೇಂದ್ರದಲ್ಲಿ ನಮ್ಮ ಪ್ರಧಾನ ಲಗ್ಗೇಜುಗಳನ್ನು ಇಟ್ಟು, ಅಗತ್ಯವಾದ ಕೆಲವೇ ವಸ್ತುಗಳನ್ನು ಸಣ್ಣ ಬ್ಯಾಗ್‌ನಲ್ಲಿ ಹಾಕಿಕೊಂಡು ಪಹಲ್‌ಗಾಮ್‌ಗೆ ಹೋಗುವುದೆಂದು ನಿಶ್ಚಯಿಸಿದೆವು. ಬಾಲ್‌ತಾಲ್‌ನಿಂದ ಮರಳಿ ಬಂದು, ಮತ್ತೆ ಶ್ರೀನಗರಕ್ಕೆ ಹೋಗಿ, ಅಲ್ಲಿನ ಸ್ಥಳಗಳನ್ನು ನೋಡಬೇಕೆಂದು ನಾವು ಮೊದಲೇ ಯೋಜನೆ ಹಾಕಿಕೊಂಡಿದ್ದೆವು. ೨೦೧೫ರ ಜುಲೈ ೯ರಂದು ಶ್ರೀನಗರದಿಂದ ಒಂದು ವಾಹನ ಬಾಡಿಗೆ ಮಾಡಿಕೊಂಡು ಪಹಲ್‌ಗಾಮ್‌ಗೆ ಬಂದೆವು. ಅಲ್ಲಿ ಒಂದು ಖಾಸಗಿ ಬಿಡಾರ ('ಹೋಟೆಲ್' ಅನ್ನಬಹುದೇನೋ!) ದಲ್ಲಿ ತಂಗಿ, ಮರುದಿನ ಬೆಳಗ್ಗೆ ಐದಕ್ಕೆ ಮೊದಲೇ ಕಾರಿನಲ್ಲಿ ಚಂದನವಾಡಿಗೆ ಹೊರಟೆವು. ನಮ್ಮ ನೋಂದಣಿ ಪತ್ರಗಳನ್ನು ತೋರಿಸಿ, ಅಲ್ಲಿಂದಲೇ ನಮ್ಮ ಯಾತ್ರೆ ನಿಜವಾಗಿ ಆರಂಭವಾಗಬೇಕು.

ಮಳೆರಾಯನ ಕಾಟ

ನಾವು ಕಾರಿನಲ್ಲಿ ಚಂದನವಾಡಿಗೆ ಹೊರಟು, ದಾರಿ ಮಧ್ಯೆ ಒಂದೆಡೆ ನಿಲ್ಲಿಸಬೇಕಾಯಿತು. ಗೇಟ್ ಬಳಿ ವಾಹನಗಳು ಕ್ಯೂ ನಿಂತಿದ್ದವು. ಆಗಲೇ ಜಿಟಿಜಿಟಿ ಮಳೆ ಆರಂಭವಾಯಿತು. ಮಿಲಿಟರಿ, ಪೋಲಿಸ್ ಸಿಬ್ಬಂದಿಗಳು ನಮ್ಮ ನೋಂದಣಿ ಪತ್ರ ನೋಡಿ, ಅದರ ಒಂದು ತುಂಡನ್ನು ತಮ್ಮ ಬಳಿ ಇಟ್ಟುಕೊಂಡು, ನಮ್ಮನ್ನು ಒಳಗಡೆ ಬಿಟ್ಟರು. ನೂರಾರು, ಸಾವಿರಾರು ಜನರ ನಡುವೆ ನಾವೂ ತೂರಿಕೊಂಡು ಯಾತ್ರೆ ಆರಂಭಿಸುವ ಉತ್ಸಾಹದಿಂದ 'ಲಂಗರ್'ಗಳಿದ್ದಲ್ಲಿಗೆ ಬಂದೆವು. (ಉಚಿತ ಊಟ, ತಿಂಡಿ ಆಹಾರ ಒದಗಿಸುವ ಸೇವಾ ಕೌಂಟರ್‌ಗಳೇ 'ಲಂಗರ್' ಗಳು. ಅಲ್ಲಿ ಕೆಲವಡೆ ತಂಗಲು ವ್ಯವಸ್ಥೆಯೂ ಇರುತ್ತದೆ.) ಮಳೆ ತುಸು ಜೋರಾಗಿದ್ದರಿಂದ ಲಂಗರ್ ನೊಳಗೆ ನುಗ್ಗಿ, ಜನರ ನಡುವೆ ಸ್ಥಳ ಮಾಡಿಕೊಂಡು, ಮೊದಲು ತಿಂಡಿ ತಿಂದೆವು. ಬಿಸಿ ಬಿಸಿ ಚಪಾತಿ, ಪಲ್ಯ, ಇಡ್ಲಿ, ಉತ್ತಪ್ಪ, ಖೀರು, ಸಿಹಿತಿಂಡಿ ಏನು ಬೇಕಾದರೂ ಸಿಗುತ್ತದೆ. 'ಬಂಬಂ ಬಾಬಾ'ನನ್ನು ನೆನೆದುಕೊಂಡೇ ಎಲ್ಲ ಯಾತ್ರಿಕರಿಗೂ ಉಚಿತ ಆಹಾರ ನೀಡಿ ಸೇವೆ ಮಾಡುತ್ತಾರೆ. ಅವರ ಶ್ರದ್ಧೆ, ಸೇವಾಭಾವಗಳನ್ನು ನೋಡಿ ಹೃದಯ ತುಂಬಿ ಬಂತು.

ತಿಂಡಿ ತಿಂದ ಬಳಿಕ ನಮ್ಮ ನಮ್ಮ ಲಗೇಜು, ಲಾಠಿ ಮೊದಲಾದವನ್ನೆಲ್ಲ ಒಂದೆಡೆ ಇಟ್ಟು ಕಾಯುತ್ತ ಕುಳಿತೆವು. ಮಳೆ ನಿಂತಲ್ಲದೆ ಯಾತ್ರೆ ಆರಂಭವಾಗುವಂತಿಲ್ಲ. ಬೆಳಿಗ್ಗೆ ಆರುಗಂಟೆಗೆ ಆರಂಭವಾದ ಮಳೆ ಹನ್ನೊಂದು–ಹನ್ನೆರಡರವರೆಗೂ ಮುಂದುವರಿಯಿತು. ಇನ್ನು ಯಾತ್ರೆ ಆರಂಭವಾಗದು ಎಂದು ಎಲ್ಲರಿಗೂ ಖಾತ್ರಿಯಾಯಿತು. ಯಾತ್ರೆ ಮುಗಿಸಿ ಮರಳಿ ಬಂದ ಕೆಲವರು, 'ಇಂದು ಖಂಡಿತ ಹೋಗಬೇಡಿ! ಮೊಣಕಾಲು ತನಕ ಕೆಸರು, ಕೊಚ್ಚೆ ಇದೆ. ಹಿಮದ ಮೇಲೆ ನಡೆಯುವಾಗ ಜಾರಿ ಬೀಳುತ್ತೀರಿ. ನಾಳೆಯವರೆಗೆ ಕಾದರೂ ಪರವಾಗಿಲ್ಲ, ಸುರಕ್ಷಿತವಾಗಿ ಹೋಗಿ' ಎಂದರು. ನಾವು ಅಲ್ಲೇ ತಂಗುವ ವ್ಯವಸ್ಥೆ ಮಾಡಿಕೊಳ್ಳಲು ಪರದಾಡಿದೆವು. ಕೊನೆಗೆ 'ಭಾರತ ಸೇವಾಶ್ರಮ ಸಂಘ'ದವರು ನಮ್ಮನ್ನು ಗುರುತಿಸಿ, 'ಸ್ವಾಮೀಜಿ, ನಮ್ಮಲ್ಲಿಗೇ ಬಂದುಬಿಡಿ, ಇಲ್ಲೇ ತಂಗಬಹುದು' ಎಂದು ನಮಗೆ ಒಳ್ಳೆಯ ಸ್ಥಳ ನೀಡಿದರು. ಹೀಗಾಗಿ ಅಂದು ರಾತ್ರಿ ಚಂದನವಾಡಿಯಲ್ಲೇ ತಂಗಿದೆವು.

ಹಿಮಾಲಯದಲ್ಲಿ ಕ್ಷಣಕ್ಷಣವೂ ಹವೆ ಬದಲಾಗುತ್ತದೆ. ಈ ಕ್ಷಣ ಒಣ ಬಿಸಿಲಿದ್ದರೆ, ಮುಂದಿನ ಕ್ಷಣ ಮೋಡಗಳೇಳುತ್ತವೆ, ತಂಗಾಳಿ ಬೀಸಿ ಬಂದು ಮಳೆ ಆರಂಭವಾಗುತ್ತದೆ. ಮಳೆ ಅತಿಯಾದರೆ ಪರ್ವತ ಕುಸಿತ, ನೆರೆ, ಅನಾಹುತಗಳಾಗುವ ಸಂಭವವೂ ಇದೆ. (ಈ ವರ್ಷವೇ ನಾವು ಮರಳಿ ಬಂದ ನಂತರ ಅಮರನಾಥ ಯಾತ್ರೆಯ ನಡುವೆ ಪರ್ವತ ಕುಸಿತ, ಮೇಘಸ್ಫೋಟ ಉಂಟಾಗಿ ಕೆಲವರು ಜೀವ ಕಳೆದುಕೊಂಡರು ಎಂದು ಪತ್ರಿಕೆಗಳಲ್ಲಿ ವರದಿಯಾಗಿದೆ.) ತೀರ ಅನಾಹುತವುಂಟಾದರೆ ಅಮರನಾಥ ಯಾತ್ರೆ ನಿಲ್ಲಿಸಿಬಿಡಬಹುದೇನೋ ಎಂಬ ಭಯವೂ ನಮ್ಮನ್ನು ಕಾಡುತ್ತಿತ್ತು. ಆದರೂ 'ಎಲ್ಲವೂ ಅಮರನಾಥನ ಇಚ್ಛೆ' ಎಂದು ಸಮಾಧಾನ ತಂದುಕೊಳ್ಳುತ್ತಿದ್ದೆವು. 'ನಾಳೆ ಮಳೆಯಿಲ್ಲದಿದ್ದರೆ ಬೆಳಿಗ್ಗೆ ಐದುಗಂಟೆಗೇ ಹೊರಟು, ಶೇಷನಾಗ ದಾಟಿ, ಸಾಯಂಕಾಲದ ಹೊತ್ತಿಗೆ ಪಂಚತರಣಿಯನ್ನೇ ತಲುಪಬಹುದು; ನೀವೆಲ್ಲ ಗಟ್ಟಿಮುಟ್ಟಾಗಿದ್ದೀರಿ. ಮಳೆ ಬಂದು ಅಲ್ಲಲ್ಲಿ ಯಾತ್ರೆ ಸ್ಥಗಿತವಾಗುತ್ತಿದೆ. ಆದಷ್ಟು ಬೇಗನೆ ಅಲ್ಲಿಗೆ ತಲುಪಿಬಿಡಬಹುದಲ್ಲ!' ಎಂದರು ಭಾರತ ಸೇವಾಶ್ರಮದ ಸ್ವಾಮೀಜಿ. ಅವರ ಸಲಹೆಯಂತೆ ಮರುದಿನ (ಜುಲೈ ೧೧) ಬೆಳಿಗ್ಗೆ ಐದಕ್ಕೇ ನಾವು ಹೊರಟು ನಿಂತೆವು.

ಉತ್ಸಾಹದ ಪಿಸು ಟಾಪ್

ಯಾತ್ರೆಯ ಆರಂಭದಲ್ಲಿ ಉತ್ಸಾಹ ಹೇಳತೀರದು. ಚಂದನವಾಡಿಯಿಂದ ಹೊರಟರೆ, ಮೊದಲು ಸಿಗುವ ಬೆಟ್ಟವೇ 'ಪಿಸು ಟಾಪ್.' ಅತ್ಯಂತ ಕಡಿದಾದ ಬೆಟ್ಟವಿದು; ಆದರೆ ಇನ್ನೂ ಹೆಚ್ಚು ಆಯಾಸವಾಗಿರಲಿಲ್ಲ; ಜೊತೆಗೆ ನಮ್ಮ ಉತ್ಸಾಹವೂ ಸೇರಿಕೊಂಡು ಹೆಚ್ಚು ಶ್ರಮವಿಲ್ಲದೆ ಪಿಸುಟಾಪ್ ತಲುಪಿದೆವು. ಸುಮಾರು ಎಂಟು ಗಂಟೆಗೆ ಬೆಟ್ಟದ ಮೇಲಿದ್ದೆವು. ಆಗಲೇ ಯಾತ್ರಿಕರು, ಕುದುರೆಗಳು, 'ಪಾಲಕಿ' (ನಡೆಯಲಾಗದವರು, ವೃದ್ಧರು, ಮಹಿಳೆಯರು ಇವರನ್ನೆಲ್ಲ ಪಲ್ಲಕ್ಕಿಯಲ್ಲಿ ನಾಲ್ಕು ಜನ ಹೊತ್ತುಕೊಂಡು ಹೋಗುತ್ತಾರೆ) ಇವರೆಲ್ಲ ನಮ್ಮೊಂದಿಗೆ ನಡೆದು ಬರುತ್ತಿದ್ದರು. ಯಾರು ಮುಖಾಮುಖಿಯಾದರೂ **'ಜೈ ಬೋಲೇ'**, **'ಬಂ ಬಂ ಬೋಲೇ'**, **'ಹರಹರ ಮಹಾದೇವ್'** ಎನ್ನುತ್ತಿದ್ದರು. ಯಾತ್ರಿಕರ ನಡುವೆ ಇದೇ ಅವ್ಯಕ್ತ ಸ್ನೇಹದ ಬಂಧನ. ವಿಭಿನ್ನ ಪ್ರದೇಶ, ವಿಭಿನ್ನ ಸಂಸ್ಕೃತಿ, ಬೇರೆ ಬೇರೆ ಭಾಷೆ–ಆಚಾರ ವಿಚಾರ; ಆದರೆ ಭಾವ ಮಾತ್ರ ಒಂದೇ. ಭಾರತದ 'ವಿವಿಧತೆಯಲ್ಲಿ ಏಕತೆ' ನಿಜವಾಗಿ ವ್ಯಕ್ತವಾಗುವುದು ಇಲ್ಲೇ.



'ಪಿಸು ಟಾಪ್' ನತ್ತ

ಪಿಸುಟಾಪ್ ತಲುಪುವಷ್ಟರಲ್ಲೇ ನಮ್ಮ ಗುಂಪಿನವರೆಲ್ಲ ಬೇರೆ ಬೇರಾಗಿದ್ದರು. ಬೆಟ್ಟದ ತುದಿಯಲ್ಲಿದ್ದ ಲಂಗರ್‌ಗಳಲ್ಲಿ ಕೆಲವರು ಸಿಕ್ಕಿದರು; ಆದರೆ ನಮ್ಮ ತಿಂಡಿಯಾಗುವಷ್ಟರಲ್ಲೇ ಅವರೆಲ್ಲ ಮುಂದಕ್ಕೆ ಹೊರಟರು. ನಾನು ಮತ್ತು ತೋತಾಪುರಿ ಮಹಾರಾಜ್ (ಖಾಸಗಿ

ಆಶ್ರಮದ ಸ್ವಾಮೀಜಿ) ಜೊತೆಯಲ್ಲೇ ಇದ್ದೆವು. ಪಿಸುಟಾಪ್‌ನಿಂದ ಮುಂದಕ್ಕೆ ಬೆಟ್ಟವಿಳಿಯುತ್ತಾ ಸಾಗಬೇಕು; ಇಳಿಜಾರು ದಾರಿಯೇ ಅಧಿಕಭಾಗ. ಸುಂದರವಾದ ಕಣಿವೆ, ನಡುನಡುವೆ ಹಿಮಾಚ್ಛಾದಿತ ಶಿಖರಗಳ ದರ್ಶನ, ಹಿಮಗಡ್ಡೆಗಳ ನಡುವಿನಿಂದ ತೂರಿಬರುತ್ತಿರುವ ಝರಿಗಳು, ಹಸಿರು ಹುಲ್ಲಿನ ಇಳಿಜಾರು, ಹೀಗೆ ಅಲ್ಲಿನ ಸೌಂದರ್ಯ ವನ್ನು ವರ್ಣಿಸಲಾಗದು. ಹೀಗೆ ಬಹುದೂರ ಸಾಗಿದ ಮೇಲೆ ದೂರ ದಲ್ಲೊಂದು ಸರೋವರ ಕಾಣಿಸಿತು. ಅದೇ '**ಶೇಷನಾಗ.**'

ಹಸಿರು ನೀರಿನ ಸರೋವರ – ಶೇಷನಾಗ

ಸುತ್ತಲೂ ಹಿಮಕವಿದ ಪರ್ವತಗಳು, ತಗ್ಗಿನಲ್ಲಿ ಹಸಿರು ಬಣ್ಣದ ನೀರಿನ ಸರೋವರ. ಅದೆಂಥ ಚೆಲುವು ಆ ಪ್ರದೇಶದ್ದು! ನೋಡಿ ದಷ್ಟೂ ನೋಡುತ್ತಿರಬೇಕು ಅನ್ನಿಸುತ್ತದೆ. ಪೌರಾಣಿಕ ಕಥೆಗಳ ಹಿನ್ನೆಲೆ ಯಿರುವ ಈ ಸರೋವರದಲ್ಲಿ ಸ್ನಾನ ಮಾಡಬೇಕು ಎನ್ನುತ್ತಾರೆ. ಆದರೆ ನಾವು ಅಲ್ಲಿ ತಂಗದೆ, ಪಂಚತರಣಿಯ (ಅಮರನಾಥಕ್ಕೆ ಅತ್ಯಂತ ಹತ್ತಿರದ ಕ್ಯಾಂಪ್) ವರೆಗೂ ಅಂದೇ ಹೋಗಬೇಕು ಎಂದು ನಿರ್ಧರಿಸಿದ್ದರಿಂದ, ಸ್ನಾನ ಮಾಡುವ ಸಂಭವವೇ ಇರಲಿಲ್ಲ. ಶೇಷ ನಾಗ ಸರೋವರ ದಾಟಿ, ಲಂಗರ್‌ಗಳೆಲ್ಲ ಇರುವ ಸ್ಥಳ ಬಂದಾಗ ಅಲ್ಲಿ ನಮ್ಮವರೆಲ್ಲರೂ ಸಿಕ್ಕಿದರು. ಪ್ರಕಾಶ್ ಮಹಾರಾಜ್ ಮಾತ್ರ ಬೇಗನೆ ಊಟ ಮಾಡಿ ಕುದುರೆಯ ಮೂಲಕ ಬೇಗನೆ ಯಾತ್ರೆ ಮುಂದುವರಿಸಿದ್ದರು. ಉಳಿದವರೆಲ್ಲ ಲಂಗರ್‌ನಲ್ಲಿ ಊಟಮಾಡಿ ನಮಗಾಗಿ ಕಾಯುತ್ತಿದ್ದರು. ನಾವೂ ಊಟಮಾಡಿ ಬಂದೆವು. ಮುಂದಿನ ಯಾತ್ರೆ ಹೇಗೆ ಎಂಬ ಚರ್ಚೆ ನಡೆಯಿತು. ಈಗಾಗಲೇ



ಶೇಷನಾಗ ಸರೋವರ

ಸಾಕಷ್ಟು ಆಯಾಸಗೊಂಡಿದ್ದರಿಂದ ಧರ್ಮವ್ರತಾನಂದಜಿ, ನವ ದುರ್ಗಾನಂದಜಿ ಕುದುರೆ ಗೊತ್ತುಮಾಡಿಕೊಂಡರು. ನಾನು, ಸುನಿಶ್ಚಲಾನಂದಜಿ (ವೇಣು ಮಹಾರಾಜ್), ತೋತಾಪುರಿ ಹಾಗೂ ಬ್ರಹ್ಮಚಾರಿ ಶಿವಕುಮಾರ್ ನಡೆಯುವುದೆಂದು ತೀರ್ಮಾನಿಸಿದೆವು. ನಮ್ಮೆಲ್ಲರ ಸಣ್ಣ ಚೀಲಗಳನ್ನು ಒಂದೇ ಕುದುರೆಯ ಮೇಲೆ ಹೊರಿಸಿ, ಉಳಿದ ಸ್ವಾಮಿಗಳೊಂದಿಗೆ ಅದನ್ನು ಕಳುಹಿಸಿಕೊಟ್ಟೆವು. ನಾವು ಬರೀ ರೈನ್‌ಕೋಟ್, ಲಾಠಿ ಹಿಡಿದು ಮುಂದುವರಿದೆವು.

ಬಹುಪಾಲು ಯಾತ್ರಿಕರು ಅಂದು ಶೇಷನಾಗದಲ್ಲೇ ತಂಗು ತ್ತಾರೆ. ಅದೇ ದಿನ ಅಲ್ಲಿಂದ ಪ್ರಯಾಣ ಮುಂದುವರಿಸುವವರನ್ನು ಮಧ್ಯಾಹ್ನ ಎರಡು ಗಂಟೆಯವರೆಗೆ ಮಾತ್ರ ಬಿಡುತ್ತಾರೆ; ಮುಂದಕ್ಕೆ ಗೇಟ್ ಹಾಕಿಬಿಡುತ್ತಾರೆ ಎಂದು ತಿಳಿದುಬಂತು. ಆಗಿನ್ನೂ ಮಧ್ಯಾಹ್ನ ಒಂದೂವರೆಯಾಗಿತ್ತು. ನಾವು ಲಗುಬಗೆಯಿಂದ ಹೊರಟು, ಗೇಟ್ ದಾಟಿ ಯಾತ್ರೆ ಮುಂದುವರೆಸಿದೆವು. ಮುಂದೆ ಕೆಲವು ಕಡೆ ಹಿಮದ ಮೇಲೆ ನಡೆಯಬೇಕಾಯಿತು. ನೆಲದಂತೆ ಸಲೀಸಾಗಿ ನಡೆಯ ಲಾಗದೆ, ಕೋಲಿನ ಆಧಾರ ಪಡೆದುಕೊಳ್ಳುತ್ತ, ನಡುನಡುವೆ ಜಾರುತ್ತ ನಡೆದೆವು. ಆದರೆ ಮುಂದಕ್ಕೆ ಕಲ್ಲು, ಬಂಡೆಗಳಿಂದ ಕೂಡಿದ ನೆಲ ಎದುರಾಗಿ, ನಡಿಗೆ ಸುಲಭವಾಯಿತು. ಮುಂದಕ್ಕೆ ನೋಡಿದರೆ, ಕಾಲುನಡಿಗೆಯ ಯಾತ್ರಿಕರು ವಿರಳವಾಗಿದ್ದು, ಕುದುರೆ ಯಾತ್ರಿಕರೇ ಹೆಚ್ಚು ಅನ್ನಬೇಕು. ನಡುವೆ ಒಂದೆರಡು ಬೆಟ್ಟಗಳನ್ನೇರಬೇಕು, ಮತ್ತೆ ಇಳಿಯಬೇಕು; ಅಲ್ಲಲ್ಲಿ ಸುಂದರ ಝರಿ, ಮಧ್ಯೆ ಹಿಮದ ಮೇಲೆ ನಡಿಗೆ – ಹೀಗೆ ನಮ್ಮ ಯಾತ್ರೆ ಸಾಗಿತು. ದಾರಿಯುದ್ದಕ್ಕೂ 'ಬಂಬಂ ಬೋಲೇ' ಅನವರತವೂ ಕೇಳಿಬರುತ್ತಿತ್ತು.

ಮಹಾಗುಣಾಸ್ ಟಾಪ್ – 'ರಕ್ಷಿಸೋ ಅಮರನಾಥ'!

ಮುಂದೆ ಮಹಾಗುಣಾಸ್ ಟಾಪ್ (ಗಣೇಶ ಟಾಪ್ ಅಥವಾ ಎಂ.ಜಿ.ಟಾಪ್ ಎಂದೂ ಕರೆಯುತ್ತಾರೆ) ಎಂಬ ಬೆಟ್ಟ ಎದುರಾ ಗುತ್ತದೆ. ಅದೂ ಕಡಿದಾದ ಏರುದಾರಿ; ಅಲ್ಲಿಯವರೆಗೆ ಕರೆದು ಕೊಂಡು ಹೋಗಿಬಿಡುತ್ತೇವೆ ಎಂದು ಕುದುರೆಯವರು ಕೂಗಿ ಕರೆಯುತ್ತಿದ್ದರು. ಆಯಾಸದಿಂದ ನಡೆಯಲಾಗದ ಯಾತ್ರಿಕರು ಕುದುರೆ ಗೊತ್ತುಮಾಡಿಕೊಳ್ಳುತ್ತಿದ್ದರು. ಅದರ ಚಾರ್ಜ್ ಇಷ್ಟೆಂದು ಕುದುರೆಯವನು ಹೇಳುವನು; ಯಾತ್ರಿಕ ಚೌಕಾಶಿ ಮಾಡುತ್ತಾನೆ. ಕೊನೆಗೆ ಇಬ್ಬರಿಗೂ ಒಪ್ಪಂದವಾಗಿ, ಯಾತ್ರಿಕ ಕುದುರೆ ಏರುತ್ತಾನೆ; ಯಾತ್ರೆ ಮುಂದುವರೆಯುತ್ತದೆ. ಇದು ಸರ್ವೇಸಾಮಾನ್ಯ ದೃಶ್ಯ.

ಗಣೇಶ ಟಾಪ್ ಇನ್ನೇನು ಹತ್ತಿರವಾಗುತ್ತಿದೆ ಎನ್ನುವಷ್ಟರಲ್ಲಿ ಹಿಂದಿದ್ದ ಬೆಟ್ಟಗಳ ಸಾಲಿನ ನಡುವಿನಿಂದ ಮೋಡಗಳು ಎದ್ದು ಬರ ತೊಡಗಿದವು. ಶೀತಲಗಾಳಿ, ಆವರಿಸಿದ ಮೋಡದ ನೆರಳು – ಇವು ಸುತ್ತಣ ಪರಿಸರವನ್ನೇ ಬದಲಾಯಿಸಿತು. ಅಷ್ಟರಲ್ಲಿ ಪರಿಸ್ಥಿತಿಯನ್ನು ಅರಿತ N.D.R.F.(ನ್ಯಾಷನಲ್ ಡಿಸಾಸ್ಟರ್ ರಿಲೀಫ್ ಫೋರ್ಸ್ 'ರಾಷ್ಟ್ರೀಯ ದುರಂತ ಪರಿಹಾರ ದಳ') ನವರು ಯಾತ್ರಿಕರ ಸಮೀಪಕ್ಕೆ ಬಂದು, 'ಮಳೆ ಆರಂಭವಾಗುವ ಸೂಚನೆಯಿದೆ. ಬೇಗ ಬೇಗ ನಡೆಯಿರಿ. ಎಲ್ಲೂ ನಿಲ್ಲಬೇಡಿ. ಏನೇ ಆದರೂ ನೀವು ಪಂಚತರಣಿ ತಲುಪಲೇಬೇಕು' ಎಂದರು. ನಾವು 'ಗಣೇಶ ಟಾಪ್ ಅದೇ' ಎಂದು ಭಾರತದ ಧ್ವಜ ಕಂಡುಬಂದ ಪ್ರದೇಶವನ್ನು ಗುರುತಿಸಿದೆವು. ಆದರೆ ಅದು ಒಂದು ಮಿಲಿಟರಿ ತಂಗುದಾಣ ವಾಗಿತ್ತು. ಅಷ್ಟರಲ್ಲಿ ಮಳೆ ಜಿನುಗತೊಡಗಿತು. ನಾವು ಭಯ, ಆತಂಕಗಳಿಂದ ಬೇಗಬೇಗನೆ ಹೆಜ್ಜೆ ಹಾಕತೊಡಗಿದೆವು.

ಮುಂದಕ್ಕೆ ಎತ್ತರದಲ್ಲಿ 'ಗಣೇಶ ಟಾಪ್' ಕಾಣಿಸುತ್ತಿತ್ತು. ಅಲ್ಲಿಗೆ ಏರಿಹೋಗುವ ಮುನ್ನ ಹಿಮದ ಮೇಲೆ ನಡೆಯಬೇಕಾಯಿತು. ಪಕ್ಕದಲ್ಲೇ ಒಂದು ತೊರೆ ಹರಿದು ಬರುತ್ತಿತ್ತು. ಅಲ್ಲಲ್ಲಿ ಹಿಮ ಕರಗಿ ನೀರಿನಲ್ಲಿ ಮಂಜುಗಡ್ಡೆಯ ತುಂಡುಗಳು ತೇಲುತ್ತಿದ್ದವು. ನೀರಿಲ್ಲ ದಲ್ಲಿ ತೊರೆ ದಾಟಿ, ಮುಂದೆ ಕಲ್ಲು , ಬಂಡೆಗಳಿಂದ ತುಂಬಿದ ಬೆಟ್ಟ ವನ್ನು ಏರತೊಡಗಿದೆವು. ಮಳೆ ಜೋರಾದಂತೆ ಕಲ್ಲುಬಂಡೆಗಳ ನಡುವೆ ನೀರಿಳಿಯತೊಡಗಿ, ದಾರಿಯೆಲ್ಲ ಕೆಸರು–ಕೊಚ್ಚೆಗಳಿಂದ ತುಂಬಿ, ಕಾಲಿಟ್ಟರೆ ಜಾರಿ ಬೀಳುವಂತಾಯಿತು. ಅಲ್ಲಲ್ಲಿ ಕೋಲಿ ನಿಂದ ಚುಚ್ಚಿ, ನೆಲ ಗಟ್ಟಿಯಾಗಿದೆ ಎಂದು ಪರೀಕ್ಷಿಸುತ್ತ ಮೇಲಕ್ಕೆ ಏರಿ ಹೋಗಬೇಕಾಯಿತು. ಒಂದೆಡೆ, ಕಾಲಿಟ್ಟ ನೆಲ ಜಾರುತ್ತಿದ್ದುದು ಅರಿವಾಗದೆ, ಕಾಲುಜಾರಿ ಉರುಳಿಬಿದ್ದೆ. ನೆಲಕ್ಕೆ ಕೈಕೊಟ್ಟು, ಜಾರಿ ಬೀಳುವುದನ್ನು ತಪ್ಪಿಸಹೊರಟರೆ, ಕೈಯೂ ಜಾರಿತು. ಒಂದೆರಡು ಉರುಳು ಜಾರಿ, ನೆಲದ ಕೆಸರು, ನೀರು ಮೈಗೆಲ್ಲಾ ಮೆತ್ತಿಕೊಂಡಿತು. ನಾನು ಜಾರಿಬಿದ್ದುದನ್ನು ಕಂಡ ಕುದುರೆಯವರು (ಲೋಕಲ್ ಜನ) 'ಬಾಬಾಜಿ! ನಿಮಗೆ ಮೇಲೆ ಹೋಗಲಾಗುವುದಿಲ್ಲ, ಜಾರಿ ಬೀಳ ಬೇಡಿ' ಎಂದರು. ಅವರ ಮಾತನ್ನು ಕೇಳಿ ನನಗೆ ಆತಂಕ, ಭಯ ಮಿತಿಮೀರಿ, ಎದೆ ಹೊಡೆದುಕೊಳ್ಳತೊಡಗಿತು. 'ಹೇಗಪ್ಪಾ ಮುಂದಿನ ಯಾತ್ರೆ ಮಾಡುವುದು? ಹತ್ತಿರದಲ್ಲಿ ತಂಗಲು ಯಾವ ಸ್ಥಳವೂ ಇಲ್ಲ; ಈಗೇನು ಮಾಡಲಿ?' ಭಯವಾಗಿ ಕಣ್ಣುಕತ್ತಲೆ ಬಂತು. ನನ್ನ ಜೊತೆಗಿದ್ದ ಬ್ರಹ್ಮಚಾರಿ ಶಿವಕುಮಾರ್, ವೇಣು ಮಹಾರಾಜ್ ಇಬ್ಬರೂ ಬೆಟ್ಟದ ಮೇಲಕ್ಕೆ ಏರಿ ಹೋಗಿದ್ದರು. ನಾನು ಕೂಗಿದರೂ ಅವರಿಗೆ ಕೇಳಿಸುವಂತಿರಲಿಲ್ಲ. ಏನು ಮಾಡಬೇಕೆಂದು ದಾರಿ ತೋಚದೆ ನನಗೆ ಅಳುವೇ ಬರುವಂತಾಯಿತು. 'ಬಾಬಾ ಅಮರನಾಥ! ನೀನೇ ಕಾಪಾಡಬೇಕು!' ಎಂದು ಮೊರೆಯಿಟ್ಟೆ. ಹೇಗೋ ಕೋಲೂರಿಕೊಂಡು ಮೇಲಕ್ಕೆ ಹೋಗುವಾಗ ನನ್ನ ಕಷ್ಟ ವನ್ನು ಅರಿತ ಶಿವಕುಮಾರ್ ಮಹಾರಾಜ್ ಅಲ್ಲೇ ನಿಂತರು. ನಾನು ನಡೆದುದನ್ನೆಲ್ಲ ವಿವರಿಸಿದೆ. 'ಬನ್ನಿ, ಮೇಲೆ ಮೆಡಿಕಲ್ ಕ್ಯಾಂಪಿಗೆ ಹೋಗಿ ಏನಾದರೂ ಮಾಡೋಣ' ಎಂದರು. ಸ್ವತಃ ಅವರೇ ವೈದ್ಯರು. ನನ್ನ ಕೈಗೋ, ಕಾಲಿಗೋ ಏಟುಬಿದ್ದಿದೆಯೋ ಎಂಬುದೂ ನನಗೆ ತಿಳಿಯಲಿಲ್ಲ, ಅಷ್ಟರಮಟ್ಟಿಗೆ ನಾನು ಗಾಬರಿಗೊಂಡಿದ್ದೆ. (ಅದೃಷ್ಟ, ಯಾವುದೇ ಗಂಭೀರ ಗಾಯಗಳಾಗಿರಲಿಲ್ಲ.) ನನ್ನ ಕೈಗ ಳೆರಡೂ ಮಳೆ ನೀರಿನಲ್ಲಿ ಒದ್ದೆಯಾಗಿ, ಮರಗಟ್ಟಿದ್ದವು. ಆದ್ದರಿಂದ ಒಂದು ಗ್ಲೌಸ್ ಅಗತ್ಯವಾಗಿ ಬೇಕಿತ್ತು. ಗಣೇಶ ಟಾಪ್ ಏರಿದ ಬಳಿಕ ಒಂದು ಅಂಗಡಿಯಲ್ಲಿ ಚಹಾ ಕುಡಿದು, ಕೈ ಬಿಸಿ ಮಾಡಿಕೊಂಡು ಗ್ಲೌಸ್ ಕೊಂಡುಕೊಂಡೆವು. ಅಂಗಡಿಯಿಂದ ಹೊರಬಂದು ನೋಡು ತ್ತೇವೆ, ವೇಣು ಮಹಾರಾಜರ ಪತ್ತೆಯಿಲ್ಲ. 'ಇಂಥ ಸಂದರ್ಭದಲ್ಲಿ ಅವರು ಎಲ್ಲಿ ಹೋದರು ಎಂದು ನೋಡುವುದು ಉಚಿತ' ಎಂದೆ ನಾನು. 'ಸರಿ, ಅವರು ಅಲ್ಲೆಲ್ಲಾದರೂ ಇದ್ದಾರೋ ನೋಡಿ ಬರು ತ್ತೇನೆ. ನೀವಂತೂ ನಿಲ್ಲಬೇಡಿ, ನಡೆಯುತ್ತಾ ಹೋಗಿ' ಎಂದರು ಶಿವಕುಮಾರ್ ಮಹಾರಾಜ್.

ಹಿಮ, ಕೆಸರು– ಕೊಚ್ಚೆ : ಪೋಷಪಾತ್ರಿವರೆಗೆ

ಮುಂದಿನ ದಾರಿ ಹೇಗೆ ನಡೆದೆನೋ! ಹಿಮದ ಮೇಲೆ ಕಾಲಿಟ್ಟರೆ ಜಾರುತ್ತಿತ್ತು. ಜಿಟಿ ಜಿಟಿ ಮಳೆ ಬೇರೆ. ಕೆಲವೆಡೆ ಹಿಮ ಕರಗಿ, ಬಿರುಕು ಬಿಟ್ಟು, ತಳದಲ್ಲಿ ಹರಿಯುತ್ತಿದ್ದ ನೀರು ಕಾಣಿಸುತ್ತಿತ್ತು. 'ಸ್ವಲ್ಪ ಹೊತ್ತಿ ನಲ್ಲೇ ಹಿಮ ಕರಗಿಹೋಗುತ್ತದೆ. ಅದಕ್ಕೆ ಮೊದಲೇ ಬೇಗಬೇಗನೆ ನಡೆದು ಬಚಾವ್ ಆಗಿ' ಎಂದು ಕುದುರೆಯವನೊಬ್ಬ ಹೇಳಿದ್ದು ಕೇಳಿಸಿತು. ನನ್ನೊಂದಿಗಿದ್ದ ಇತರ ಯಾತ್ರಿಕರಿಗೂ, ನನಗೂ ಆತಂಕ ವಾಯಿತು. ಹಿಮದ ಹಾದಿ ಸಾಗುತ್ತಿದ್ದಂತೆ ನೋಡಿದೆ, ಒಂದೆಡೆ ಎಲ್ಲಿ ನೋಡಿದರೂ ಹಿಮವೇ! ಅದರಾಚೆಗೆ ಮೋಡ ಮುಸುಕಿದ್ದ ಪರ್ವತದ ಸಾಲುಗಳು. ಅದು ನನ್ನಲ್ಲಿ ಭಯವನ್ನು ಹೆಪ್ಪುಗಟ್ಟಿಸಿತು. ನಿರಂತರ ಗುರುಮಹಾರಾಜರ, ಅಮರನಾಥನ ಹೆಸರು ಹೇಳುತ್ತಾ ಮುಂದುವರಿದೆ. ಒಂದೆಡೆ ನೀರು ಹರಿಯುತ್ತಿತ್ತು – ಕಾಲಿಟ್ಟರೆ ಮೈ ಕೊರೆಯುವ ಚಳಿ. ಅದನ್ನು ದಾಟದೆ ಮುಂದೆ ಹೋಗುವಂತಿಲ್ಲ. ಕಾಲು ಮುಳುಗಿ ಹೋಗುವಷ್ಟು ನೀರಿತ್ತು – ನನ್ನ ಶೂ ಒದ್ದೆಯಾಗಿ, ಶೂವಿನೊಳಗೆ ನೀರು ನುಗ್ಗಿ ಬಿಟ್ಟರೆ ಎಂಬ ಭಯದಲ್ಲಿ ಅಲ್ಲಲ್ಲಿ ಕಲ್ಲು ಕಾಣಿಸುತ್ತಿದ್ದ ಒಂದೆಡೆ ನೀರಿಗಿಳಿದೆ. ಅಯ್ಯೋ, ಶೂವೆಲ್ಲ ಒದ್ದೆ ಯಾಗಿ, ಒಳಕ್ಕೂ ನೀರು ನುಗ್ಗಿ, ಕಾಲು ಚೀಲವೆಲ್ಲ ಒದ್ದೆಯಾಯಿತು. ಇನ್ನು ಹೇಗೆ ನಡೆಯಲಿ! ಹೇಗೋ ಧೈರ್ಯ ತಾಳಿ ಮುಂದುವರೆದೆ. ಅಷ್ಟರಲ್ಲಿ ಶಿವಕುಮಾರ್ ಕಾಣಿಸಿಕೊಂಡರು. 'ವೇಣು ಮಹಾರಾಜ್ ಎಲ್ಲೂ ಕಾಣಿಸಲಿಲ್ಲ. ಬಹುಶಃ ಮುಂದೆ ಹೋಗಿರಬೇಕು. ಪಂಚ ತರಣಿಗೆ ಹೋದ ಮೇಲೆ ಅವರನ್ನು ಹುಡುಕೋಣ' ಎಂದರು.



ಹಿಮದ ಹಾದಿ

ಹಿಮದಲ್ಲಿ ನಡೆಯುವುದಾದರೂ ಅಷ್ಟು ಕಷ್ಟವಿರಲಿಲ್ಲ. ಆದರೆ ಕೆಸರು, ಕೊಚ್ಚೆಗಳಿರುವಲ್ಲಿ ಕಾಲಿಟ್ಟರೆ ಸಾಕು ಜಾರಿ ಬೀಳುವಂತಾಗು ತ್ತಿತ್ತು. ನಮಗಿದ್ದ ಒಂದೇ ಒಂದು ಆಸರೆಯೆಂದರೆ ಲಾಠಿ ಮಾತ್ರ. ಇಡೀ ದೇಹದ ಭಾರ ಅದರ ಮೇಲೆ ಬೀಳುತ್ತಿತ್ತು. ಸಮತೋಲನ ತಪ್ಪಿ ಒಂದೆರಡು ಬಾರಿ ಜಾರಿ ಬೀಳಹೊರಟಿದ್ದೆ. ಆದರೂ ವಿಶೇಷ ಅನಾಹುತವಾಗದೆ ಮುಂದೆ ಸಾಗಿದೆ. ನಿರಂತರ ಇಳಿಯುತ್ತ ಸಾಗು ತ್ತಿದ್ದೆವು. ದೂರದಲ್ಲಿ ಲಂಗರ್ ಕಾಣಿಸುತ್ತಿತ್ತು. ಅದೇ ಪೋಷಪಾತ್ರಿ – ಅಲ್ಲಿಗೆ ಹೇಗಾದರೂ ತಲುಪಿಬಿಟ್ಟರೆ ಬದುಕಿದೆವು; ಆದರೆ ಅಲ್ಲಿಗೆ

ತಲುಪುವಾಗ ಜೀವವೇ ಇಲ್ಲವೆನ್ನುವಷ್ಟು ನಿತ್ರಾಣ. ಮುಂದೆ ಒಂದು ಹೆಜ್ಜೆಯನ್ನೂ ಇಡಲಾಗದು ಎನ್ನುವಂತಾಗಿ ತಲೆಸುತ್ತಿ ಬಂತು.

ಪೋಷಾಪಾತ್ರಿಯ ಲಂಗರ್‌ನಲ್ಲಿ ಖೀರು, ಚಹಾ, ನೀರು ಇವನ್ನೆಲ್ಲ ಸೇವಿಸಿದಾಗ ಜೀವ ಬಂದಂತಾಯಿತು. ಅಲ್ಲೇ ವಿಶ್ರಮಿಸಿಕೊಳ್ಳೋಣವೆಂದರೆ, ಹೆಚ್ಚು ತಡಮಾಡುವಂತಿಲ್ಲ ಎಂದರು ಶಿವಕುಮಾರ್ ಮಹಾರಾಜ್. ತಡವಾದರೆ ಯಾತ್ರಿಕರನ್ನು ಮುಂದೆ ಬಿಡುವುದಿಲ್ಲವಂತೆ ಎಂದರು. ಅವರಿಗಂತೂ ಮಿತಿಮೀರಿದ ಶಕ್ತಿ – ಅದೆಲ್ಲಿಂದ ಬಂತೋ! ಕೊನೆಗೆ ಅಲ್ಲಿನ ಗೇಟ್ ಕೂಡ ದಾಟಿ ಮುಂದುವರಿದೆವು – ಆದರೆ ನನಗೆ ನಡೆಯಲಾಗುತ್ತಿಲ್ಲ. ಎರಡು ಹೆಜ್ಜೆ ಇಡುವಷ್ಟರಲ್ಲಿ ಬೀಳುವಂತಾದೆ. ಅದನ್ನು ನೋಡಿದ ಶಿವಕುಮಾರ್, ಇಬ್ಬರಿಗೂ ಕುದುರೆ ಗೊತ್ತು ಮಾಡಿದರು. ನಾನು ಮೊಟ್ಟಮೊದಲ ಬಾರಿ ಕುದುರೆಯಲ್ಲಿ ಕುಳಿತೆ; ನನಗೋ, ಬಿದ್ದುಹೋಗುವಂತಾಗುತ್ತಿತ್ತು. ಕುದುರೆಯವನು ಹೇಳುತ್ತಿದ್ದ, 'ಗಟ್ಟಿಯಾಗಿ ಕುಳಿತುಕೊಳ್ಳಿ, ಏನೂ ಆಗಲ್ಲ.' ಅವರಿಗೂ ಇದು ಸಾಧಾರಣ ಸಂಗತಿ. ಯಾತ್ರಿಕರನ್ನು ಕುದುರೆಯ ಮೇಲೆ ಸಾಗಿಸುವಾಗ ಹೇಗೆ ಕುಳಿತುಕೊಳ್ಳಬೇಕು ಎಂಬುದನ್ನು ಹೇಳಿಕೊಡಬೇಕು. ಸರಿ, ಕುದುರೆ ಹೊರಟಿತು. ಇನ್ನೇನು ಎಂಟು ಕಿ.ಮೀ ದೂರದಲ್ಲಿ ಪಂಚತರಣಿ ಬರುತ್ತದೆ. ಆದರೆ ನಾಲ್ಕು ಕಿ.ಮೀ ದೂರ ಸಾಗುವಷ್ಟರಲ್ಲಿ ವೇಣು ಮಹಾರಾಜ್ ನಮ್ಮ ಮುಂದೆ ನಡೆದು ಹೋಗುತ್ತಿದ್ದರು. ಅವರನ್ನು ಕಂಡ ಕೂಡಲೇ ನಾವು ಕುದುರೆಯಿಂದಿಳಿದು, ಕುದುರೆಯವನಿಗೆ ಪೂರ್ತಿ ಹಣ ಕೊಟ್ಟು ಕಳುಹಿಸಿ, ಮೂವರೂ ನಡೆಯತೊಡಗಿದೆವು. ಕುದುರೆ ಸವಾರಿಗಿಂತ ನಡಿಗೆಯೇ ಎಷ್ಟೊಂದು ಸುಖಕರ!

ಪಂಚತರಣಿ

ಸುತ್ತಲೂ ವಿಶಾಲವಾಗಿ ಹಬ್ಬಿರುವ ಬೆಟ್ಟಗಳು; ನಡುವೆ ವಿಸ್ತಾರವಾದ ಕಣಿವೆ. ಅದೆಂಥ ಭವ್ಯ ದೃಶ್ಯ! ಮನಸ್ಸು ಉನ್ನತ ಭಾವಕ್ಕೇರುತ್ತಿತ್ತು. ನಡೆಯುತ್ತಾ ಪಂಚತರಣಿ ತಲಪುವಾಗ ರಾತ್ರಿ ಎಂಟು ಗಂಟೆ. ಪಂಚತರಣಿ ಪ್ರವೇಶದ್ವಾರದ ಬಳಿ ಪ್ರಕಾಶ್ ಮಹಾರಾಜ್ ಕಾಯುತ್ತ ನಿಂತಿದ್ದರು. ಅವರನ್ನು ಕಂಡು ನಮಗೆ ಅದೆಂಥ ಆನಂದವಾಯಿತೋ! ಕುದುರೆಯಲ್ಲಿ ಬಂದವರೆಲ್ಲ ಸಾಯಂಕಾಲ ಐದಕ್ಕೇ ಅಲ್ಲಿಗೆ ತಲುಪಿದ್ದರು. ಅವರು ನಮಗಾಗಿ ಒಂದು ಟೆಂಟ್ ಬುಕ್ ಮಾಡಿದ್ದರು. ಉಳಿದವರನೆಲ್ಲ ಟೆಂಟ್‌ನಲ್ಲೇ ಭೇಟಿಯಾದೆವು. ಏಳೂ ಮಂದಿ ಮತ್ತೆ ಒಂದಾದಾಗ ನಮಗೆಲ್ಲ ಹೇಳಲಾಗದ ನೆಮ್ಮದಿಯಾಯಿತು. ಆಯಾಸದಿಂದ ಹಾಸಿಗೆಯಲ್ಲಿ ಉರುಳಿಕೊಂಡೆವು.

ಮರುದಿನ (ಜುಲೈ ೧೨, ಅಂದು ನಮಗೆ ಅಮರನಾಥ ದರ್ಶನವಾಗಬೇಕಿತ್ತು) ಇಡೀ ದಿನ ಜಿಟಿಜಿಟಿ ಮಳೆ, ರಾತ್ರಿಯ ತನಕವೂ ಬರುತ್ತಿತ್ತು. ಅಂದು ಯಾತ್ರೆ ಸಾಧ್ಯವಾಗಲೇ ಇಲ್ಲ. ಇನ್ನೊಂದು ದಿನ ತಡವಾಯಿತು. ಮಾರನೇ ದಿನ ಬೆಳಿಗ್ಗೆ ವಾತಾವರಣ ಶುಭ್ರವಾಗಿತ್ತು, ಮಳೆಯೂ ಬರುತ್ತಿರಲಿಲ್ಲ. ಯಾತ್ರೆ



ಪಂಚತರಣಿ

ಹೊರಟಿತು. ಅಲ್ಲಿಂದ ಆರು ಕಿ.ಮೀ ದೂರದಲ್ಲಿ ಅಮರನಾಥನ ಗುಹೆಯಿದೆ. ಮತ್ತೆ ಸಣ್ಣದಾಗಿ ಮಳೆ, ಹಿಮ, ಕೆಸರುಕೊಚ್ಚೆ – ಇವೆಲ್ಲ ಪುನರಾವರ್ತನೆಯಾದಂತೆ ಕಡಿದಾದ ದಾರಿಯಲ್ಲಿ ಏರಿ ಹೋಗಬೇಕಾಯಿತು. ಒಂದು ಬಾರಿ ಜಾರಿ ಬಿದ್ದುಬಿಟ್ಟೆ; ಆದರೆ ಈಗ ಅಷ್ಟೇನೂ ಭಯವಾಗಲಿಲ್ಲ. ಯಾತ್ರೆಯ ನಡುವೆ ಪ್ರಾಣ ಹೋದರೂ ಪುಣ್ಯಕರವಲ್ಲವೆ?

ಅಮರನಾಥನ ದರ್ಶನ

ಜುಲೈ ೧೩ ರಂದು ಬೆಳಿಗ್ಗೆ ಸುಮಾರು ಒಂಬತ್ತು ಗಂಟೆಯ ಹೊತ್ತಿಗೆ ಅಮರನಾಥನ ಗುಹೆ ಕಾಣಿಸಿತು. ದೂರದಿಂದ ಗುಹೆಯ ದ್ವಾರ ಕಂಡಾಗ ಅದೆಂಥಾ ಆನಂದ! ಸ್ವಾಮಿ ವಿವೇಕಾನಂದರ, ನಿವೇದಿತಾ ಮೊದಲಾದವರ ನೆನಪಾಯಿತು. ಮೆಟ್ಟಿಲನ್ನು ಏರಿದಷ್ಟೂ ಮುಗಿಯುತ್ತಿಲ್ಲ! ಒಂದು ಅಂಗಡಿಯಲ್ಲಿ ನಮ್ಮ ಬ್ಯಾಗ್, ಕ್ಯಾಮೆರಾ, ಮೊಬೈಲ್ ಇವನ್ನೆಲ್ಲ ಬಿಟ್ಟೆವು. ನೈವೇದ್ಯ ಮಾಡಿ, ಪ್ರಸಾದ ಒಯ್ಯಲು ಒಂದು ಪ್ಯಾಕೇಟ್ ಕೊಂಡುಕೊಂಡು, ಮುಂದೆ ನಡೆದೆವು.

ಆಯಾಸದಿಂದ ಕಂಗೆಟ್ಟ ನಮಗೆ ಸಿ.ಆರ್.ಪಿ.ಎಫ್.ನ ಸಿಬ್ಬಂದಿಗಳು ಕೊಟ್ಟ ಬಿಸಿನೀರು ನಿಜವಾಗಿಯೂ ಅಮೃತಸಮಾನವೆನಿಸಿತು. ಮುಂದೆ ಭದ್ರತಾ ತಪಾಸಣೆಯನ್ನು ಹಾದು ಹೋಗಿ ಮೆಟ್ಟಿ



ಅಮರನಾಥ ಗುಹೆಗೆ ಸಮೀಪ

ಲೇರುತ್ತ ಅಮರನಾಥನ ಮುಂದೆ ನಿಂತಾಗ ಅಳುವೇ ಬರುವಂತಾಯಿತು. ೮-೧೦ ಅಡಿ ಎತ್ತರದ ಹಿಮರೂಪೀ ಅಮರನಾಥ ಅತ್ಯಂತ ಕಠಿಣ ಯಾತ್ರೆ ಮುಗಿಸಿ ಬಂದ ಯಾತ್ರಿಕರನ್ನೆಲ್ಲ ಮನದಣಿಯೆ ಹರಸುತ್ತಿದ್ದ. ಗುಹೆಯ ತಂಪು ಸನ್ನಿಧಿ, ಶೀತಲ ವಾತಾವರಣ ದೇಹವನ್ನಷ್ಟೇ ಅಲ್ಲ, ಹೃದಯ-ಮನಸ್ಸನ್ನೆಲ್ಲ ಧನ್ಯತೆಯಿಂದ ತೊಯ್ಯಿಸಿತು. ಭಾವಭರಿತನಾದ ನಾನು ಅಮರನಾಥನಿಗೆ ನಮಸ್ಕರಿಸಿ, ಅವನಿಗೆ ನನ್ನೆಲ್ಲ ಪ್ರಾರ್ಥನೆಗಳನ್ನು ಸಲ್ಲಿಸುವಷ್ಟರಲ್ಲಿ - ಮಿಲಿಟರಿಯವರು, 'ಬಾಬಾಜಿ, ಮುಂದೆ ಸರಿಯಿರಿ' ಎನ್ನತೊಡಗಿದರು. ಆ ಕ್ಷಣದಲ್ಲಿ ನಾನು ಪವಿತ್ರ ಪಾರಿವಾಳಗಳನ್ನು ನೋಡದೆ ಹೋದೆ. 'ಅವುಗಳು ಅಲ್ಲೇ ಇದ್ದವು; ಅಮರನಾಥ ಲಿಂಗದ ಮೇಲೆಯೇ ಕುಳಿತಿದ್ದವು' ಎಂದು ನಮ್ಮ ಗುಂಪಿನ ಇತರರು ಹೇಳಿದರು. ಅಂತೂ ಕೊನೆಗೆ ಅಮರನಾಥನ ದರ್ಶನಭಾಗ್ಯ ಒದಗಿತಲ್ಲ ಎಂಬ ಧನ್ಯತಾಭಾವ ಹೊಂದಿ, ಹೆಚ್ಚು ತಡಮಾಡದೆ ನಾವೆಲ್ಲ ಮರಳಿ ಬಾಲ್‌ತಾಲ್ ದಾರಿಯಿಂದ ಇಳಿಯತೊಡಗಿದೆವು.



ನಮ್ಮ ತಂಡ - ಅಮರನಾಥನ ಸನ್ನಿಧಿಯಲ್ಲಿ

ಬಾಲ್‌ತಾಲ್ ದಾರಿಯಲ್ಲಿ ಒಂದೇ ಸಮನೆ ಇಳಿಜಾರು, ನಡುನಡುವೆ ಹೋಗುವ-ಬರುವ ಯಾತ್ರಿಕರ, ಕುದುರೆಗಳ, 'ಪಲ್ಲಕ್ಕಿ'ಗಳ ತಿಕ್ಕಾಟದಲ್ಲಿ 'ಟ್ರಾಫಿಕ್ ಜಾಮ್' ಉಂಟಾಗುತ್ತಿತ್ತು. ಎಲ್ಲಕ್ಕಿಂತ ಹೆಚ್ಚಾಗಿ ಕೆಸರುಕೊಚ್ಚೆಯ ಮೇಲೆ ನಡೆಯುವುದೇ (ಅಥವಾ 'ಜಾರುವುದು' ಎನ್ನಬೇಕು) ದೊಡ್ಡ ಸವಾಲಾಗಿತ್ತು. ಬೆಳಿಗ್ಗೆ ಹತ್ತು ಗಂಟೆಯ ಹೊತ್ತಿಗೆ ಹೊರಟವರು ಮಧ್ಯಾಹ್ನ ಮೂರರ ಹೊತ್ತಿಗೆ ಬಾಲ್‌ತಾಲ್ ತಲುಪಿದೆವು. ಅಲ್ಲಿಂದ ಮತ್ತೆ ಕಾರಿನಲ್ಲಿ ಹೊರಟು, ಸಂಜೆ ಆರಕ್ಕೆ ಸುರಕ್ಷಿತವಾಗಿ ಶ್ರೀನಗರ ತಲುಪಿದೆವು.

ಅಮರನಾಥ ಯಾತ್ರೆಯ ಬಗ್ಗೆ ಸಾಕಷ್ಟು ಓದಿದ್ದೆ; ಆದರೆ ನೇರ ಅನುಭವ ತುಂಬ ವಿಭಿನ್ನವಾದದ್ದು, ವಿಶಿಷ್ಟವಾದದ್ದು. ಕಷ್ಟಪಟ್ಟರೂ ಅದರಲ್ಲಿ ಧನ್ಯತೆಯಿದೆ. ಹಿಮದ, ಕೊಚ್ಚೆ-ಕೆಸರಿನ ಮಾರ್ಗದಲ್ಲಿ ಕೋಲೂರಿ ಸಾಗಿದ್ದರಿಂದ, ನನ್ನ ಬಲಭುಜಕ್ಕೆ ಒತ್ತಡ ಹೆಚ್ಚಿ ಉಂಟಾದ ನೋವು, ಯಾತ್ರೆ ಮುಗಿಸಿ ಇಪ್ಪತ್ತೈದು ದಿನಗಳಾದರೂ ಸಂಪೂರ್ಣ ಮಾಯವಾಗಲಿಲ್ಲ. ಭುಜದಲ್ಲಿ ನೋವಾದಾಗಲೆಲ್ಲ ಅಮರನಾಥನ ದರ್ಶನದ ನೆನಪಾಗಿ, ಧನ್ಯತೆಯ ಭಾವ ಮೂಡುತ್ತದೆ. ಜೀವನವೇ ಹೀಗಲ್ಲವೆ? ಒಂದೊಂದು ನೋವಿನ, ದುಃಖದ ಹಿಂದೆ ಅದಾವುದೋ ನಲಿವಿದೆ; ಅಂತೆಯೇ ಪ್ರತಿಯೊಂದು ದಿವ್ಯ ಅನುಭವದ ಹಿಂದೆ ಅದೆಷ್ಟೋ ಹೆಜ್ಜೆಗಳ ಶ್ರಮವಿದೆ. ದೂರ, ಬಹುದೂರ ಸಾಕ್ಷಿಯಾಗಿ ನಿಂತು ಎಲ್ಲವನ್ನೂ ಗಮನಿಸುತ್ತಿರುವ ಅಮರನಾಥನಿಗೆ ಎಲ್ಲವೂ ಒಂದು ಲೀಲೆ; ನಮಗೆ ಮಾತ್ರ ಅವನ ಕೃಪಾಕಿರಣವೊಂದೇ ದಾರಿದೀಪ.

ಅಮರನಾಥದಲ್ಲಿ ಸ್ವಾಮಿ ವಿವೇಕಾನಂದರು

ಸ್ವಾಮಿ ವಿವೇಕಾನಂದರು ೧೮೯೮ರ ಆಗಸ್ಟ್ ೨ರಂದು ಅಮರನಾಥ ದರ್ಶನ ಮಾಡಿದರು. ಆ ಸಂದರ್ಭದಲ್ಲಿ ಅವರೊಂದಿಗಿದ್ದ ಸೋದರಿ ನಿವೇದಿತಾ ಬರೆಯುತ್ತಾಳೆ: ''ಯಾತ್ರಿಕರು ಏನು ಮಾಡಬೇಕೊ ಅದನ್ನೆಲ್ಲ ಸ್ವಾಮೀಜಿ ನೆರವೇರಿಸಿದರು. ಜಪ ಮಾಡಿದರು, ಉಪವಾಸವಿದ್ದರು, ಹತ್ತಿರ ಹರಿಯುತ್ತಿದ್ದ ಹಿಮನದಿಯಲ್ಲಿ ಸ್ನಾನ ಮಾಡಿದರು. ಗುಹೆಯನ್ನು ಪ್ರವೇಶ ಮಾಡಿದ ಮೇಲೆ ಅವರಿಗೆ ಶಿವನೇ ಕಂಡಂತೆ ಇತ್ತು . ಯಾತ್ರಿಕರ ಗುಜುಗುಜು ಗುಂಪು, ಮೇಲೆ ಹಾರಾಡುತ್ತಿದ್ದ ಪಾರಿವಾಳಗಳು, ಇವುಗಳ ನಡುವೆ ಸ್ವಾಮೀಜಿ ಶಿವನಿಗೆ ನಮಿಸಿದರು. ಅನಂತರ ಎಲ್ಲಿ ಭಾವಪರವಶನಾಗುವೆನೋ ಎಂದು ಅಂಜಿ ಎದ್ದು ಮೌನವಾಗಿ ಹೊರಟುಬಂದರು. ಆ ಅಲ್ಪ ಸಮಯದಲ್ಲಿ ಶಿವ ಇವರಿಗೆ ಇಚ್ಛಾಮರಣವನ್ನು ಅನುಗ್ರಹಿಸಿದ ಎಂದು ಹೇಳುತ್ತಿದ್ದರು.'' ಅಮರನಾಥ ದರ್ಶನದ ಬಳಿಕ ಸ್ವಾಮೀಜಿ ಹೇಳಿದರು:

''ಆ ಮೂರ್ತಿ ಸಾಕ್ಷಾತ್ ಭಗವಂತನೇ ಆಗಿತ್ತು . ಅಲ್ಲಿ ಕೇವಲ ಪೂಜೆಯ ವಾತಾವರಣವೇ ತುಂಬಿಹೋಗಿತ್ತು . ಅಷ್ಟೊಂದು ಸುಂದರವಾದದ್ದನ್ನು , ಅಷ್ಟೊಂದು ಸ್ಫೂರ್ತಿದಾಯಕವಾದದ್ದನ್ನು ನಾನು ಬೇರೆಲ್ಲೂ ಕಂಡಿಲ್ಲ.''

''ಅಮರನಾಥ ಗುಹೆಯನ್ನು ಮೊದಲು ಹೇಗೆ ಕಂಡುಹಿಡಿದರು ಎಂಬುದನ್ನು ನಾನು ಚೆನ್ನಾಗಿ ಕಲ್ಪಿಸಿಕೊಳ್ಳಬಲ್ಲೆ. ಬೇಸಿಗೆಯಲ್ಲಿ ಒಂದು ಸಲ ಕುರಿಗಳು ಮಂದೆಯಿಂದ ತಪ್ಪಿಸಿಕೊಂಡಿರಬಹುದು. ಕುರುಬರು ಅದನ್ನು ಹುಡುಕಿಕೊಂಡು ಇಲ್ಲಿಗೆ ಬಂದಿರಬಹುದು. ಅನಿರೀಕ್ಷಿತವಾಗಿ ಎದುರಾದ ಕರ್ಪೂರದಂತೆ ಬಿಳಿಬಣ್ಣದ, ಹಲವು ಶತಮಾನಗಳಿಂದ ಮಾನವನ ಕಣ್ಣಿಗೆ ಬೀಳದೆ, ಗುಹೆಯ ಮೇಲ್ಭಾಗದಿಂದ ಅಭಿಷೇಕದಂತೆ ನೀರ ಹನಿ ಸುರಿಯುತ್ತಿರುವ, ಗಟ್ಟಿಯಾದ ಹಿಮಲಿಂಗವನ್ನು ಕಂಡಾಗ ಅವರಿಗೆ ಯಾವ ಭಾವನೆ ಮೂಡಿರಬಹುದು! ಅನಂತರ ಅವರು ಮನೆಗೆ ಹಿಂದಿರುಗಿ, ಸಾಕ್ಷಾತ್ ಮಹಾದೇವನೇ ತಮಗೆ ಕಾಣಿಸಿಕೊಂಡನೆಂದು ಕಣಿವೆಯ ಇತರ ಕುರುಬರಿಗೆ ಹೇಳಿರಬಹುದು.''

ಸ್ವಾಮಿ ನಿತ್ಯಸ್ಥಾನಂದ

ವಿಶ್ವಾಶ್ವತ್ಥ



ಈ ಸಂಸಾರವನ್ನು ಅನೇಕ ವಿಷಯಗಳಿಗೆ ಹೋಲಿಸಿ ವಿವರಿಸುವುದು ವಾಡಿಕೆ. ಸಂಸಾರವನ್ನು ತಿಮಿಂಗಿಲ ಮೊಸಳೆಗಳಿಂದ ಕೂಡಿದ ಸಾಗರ ಅಥವಾ ನದಿಗೆ ಹೋಲಿಸುವುದು ಸಾಮಾನ್ಯ. ಸಂಸಾರ ಸಾಗರ, ಭವಸಾಗರ, ಭವನದಿ ಇತ್ಯಾದಿ ಶಬ್ದಗಳು ಸುಪರಿಚಿತ. ಅನೇಕ ಹಿಂಸ್ರಪಶುಗಳಿಂದ ಕೂಡಿದ ಘೋರ ಅರಣ್ಯಕ್ಕೆ ಸಂಸಾರವನ್ನು ಹೋಲಿಸುವುದೂ ಉಂಟು. ಸಂಸಾರವನ್ನು ಬಲೆಗೂ (ಸಂಸಾರ ಜಾಲ) ಹೋಲಿಸಲಾಗಿದೆ. ಸಂಸಾರವು ಒಂದು ಸುಳಿಯೂ ಹೌದು. ಸಂಸಾರಪಂಕ ಎಂಬ ಉಕ್ತಿಯೂ ಪ್ರಚಲಿತ. ಈ ಸಂಸಾರವನ್ನು ಒಂದು ನರಕ ಎಂದು ಕರೆಯುವವರೂ ಇದ್ದಾರೆ. ಹೀಗೆ ಅನೇಕ ಹೋಲಿಕೆಗಳಿವೆ. ಆದರೆ ಇವೆಲ್ಲವುಗಳಿಗಿಂತ ಸಂಸಾರ ವೃಕ್ಷ ಎನ್ನುವುದು ಹೆಚ್ಚು ಸೂಕ್ತವಾಗಿದೆ. ಏಕೆಂದರೆ ವೃಕ್ಷಕ್ಕೂ ಸಂಸಾರಕ್ಕೂ ಅನೇಕ ಸಾದೃಶ್ಯಗಳನ್ನು ಗುರುತಿಸಬಹುದು. ಶ್ರೀಕೃಷ್ಣನು ಇಲ್ಲಿ ಸಂಸಾರವನ್ನು ಅಶ್ವತ್ಥಕ್ಕೆ ಹೋಲಿಸಿ ವಿವರಿಸುತ್ತಾನೆ.

ಅಶ್ವತ್ಥವೆಂದರೆ **ನ ಶ್ವಃ ಅಪಿ ಸ್ಥಾತಾ ಇತಿ ಅಶ್ವತ್ಥ** – ''ನಾಳೆಯವರೆಗೂ ಇಲ್ಲದೆ ಇರುವುದು ಯಾವುದೋ ಅದು ಅಶ್ವತ್ಥ.'' ಅಂದರೆ ಅಶಾಶ್ವತವಾದುದು ಎಂದರ್ಥ. ಆದರೆ ಅಧ್ಯಾಯದ ಪ್ರಾರಂಭದ ಶ್ಲೋಕದಲ್ಲಿ 'ಈ ವೃಕ್ಷವು ಅವ್ಯಯವಾದುದು' ಎಂದು ಹೇಳಲಾಗಿದೆ. ಇಲ್ಲಿ ಅವ್ಯಯವೆಂದರೆ ಕ್ಷೀಣಿಸದೆ ಇರುವಂತಹುದು. ಕಠೋಪನಿಷತ್ತಿನಲ್ಲಿ ಬರುವ ಇದೇ ರೂಪಕದಲ್ಲಿ ಈ ಅಶ್ವತ್ಥವು ಸನಾತನವಾದುದು ಎಂದು ಹೇಳಲಾಗಿದೆ. ಸಂಸಾರವು ಯಾವಾಗಲೂ ಇರುತ್ತದೆ, ಮತ್ತು ಕ್ಷೀಣಿಸುವುದೂ ಇಲ್ಲ, ಆದರೆ ನಿರಂತರವಾಗಿ ಬದಲಾಗುತ್ತಿರುತ್ತದೆ – ಜಗತ್ತಿನ ಸ್ವಭಾವವೇ ಬದಲಾವಣೆ. ಆದರೆ ಯಾರಿಗೆ ಈ ಸಂಸಾರದ ಬಗ್ಗೆ ವಿರಕ್ತಿಯುಂಟಾಗುತ್ತದೆಯೋ ಅವರ ಪಾಲಿಗೆ ಇದು ಕ್ಷೀಣಿಸುತ್ತಾ ಹೋಗುತ್ತದೆ. ವ್ಯಕ್ತಿಯು ಇದರಿಂದ ಪಾರಾಗಬಹುದೇ ಹೊರತು ಇದು ಮಾತ್ರ ನಾಶವಾಗುವುದಿಲ್ಲ. ಅದು ಇದ್ದರೆ ತಾನೆ ನಾಶವಾಗುವುದು! ಇಲ್ಲದ ವಸ್ತುವನ್ನು ನಾಶಮಾಡುವುದು ಹೇಗೆ? ಇರುವ ವಸ್ತುವನ್ನು ನಾಶಮಾಡಲಾಗುವುದಿಲ್ಲ ಹಾಗೂ ಇಲ್ಲದ ವಸ್ತುವಿಗೆ ನಾಶವಿಲ್ಲ. ಇಲ್ಲದ ವಸ್ತುವು ಇದೆ ಎಂಬ ಭ್ರಮೆಯನ್ನು ನಾವು ನಾಶಮಾಡಬೇಕಾಗಿದೆ. ನಾವು ಹಗ್ಗದಲ್ಲಿ ಹಾವನ್ನು ನೋಡುತ್ತೇವೆ. ಆ ಹಾವು ಸತ್ಯವಲ್ಲ, ಅದೊಂದು ಭ್ರಮೆ. ಆದರೆ ಆ ಹಾವನ್ನು ಕೋಲಿನಿಂದ ಸಾಯಿಸಲಾಗುತ್ತದೆಯೆ? ಅದನ್ನು ಯಾವುದೇ ಕ್ರಿಯೆಯಿಂದಲೂ ನಾಶಮಾಡಲಾಗುವುದಿಲ್ಲ. ಹಗ್ಗದ ಜ್ಞಾನದೊಂದಿಗೆ ಹಾವಿನ ಭ್ರಮೆ ನಾಶವಾಗುತ್ತದೆ, ಅಷ್ಟೆ.

ಈ ಸಂಸಾರವೃಕ್ಷವು ಭ್ರಮೆ ಎಂಬುದನ್ನು ಶ್ರೀಕೃಷ್ಣನು ಇದೇ ಅಧ್ಯಾಯದ ಮೂರನೆಯ ಶ್ಲೋಕದಲ್ಲಿ ವ್ಯಕ್ತಪಡಿಸಿದ್ದಾನೆ:

ನ ರೂಪಮಸ್ಯೇಹ
ತಥೋಪಲಭ್ಯತೇ ।
ನಾಂತೋ ನ ಚಾದಿ-
ರ್ನ ಚ ಸಂಪ್ರತಿಷ್ಠಾ ॥

'ಈ ಸಂಸಾರದ ಸ್ವರೂಪವು ನಮ್ಮ ಅರಿವಿಗೆ ಬರುವುದಿಲ್ಲ. ಇದರ ಆದಿಯಾಗಲಿ ಮಧ್ಯವಾಗಲಿ ಅಂತವಾಗಲಿ ಕಾಣುವುದಿಲ್ಲ.' ದೃಶ್ಯಜಗತ್ತಿನ ವಾಸ್ತವತೆಯನ್ನು ಅರಸುತ್ತ ಹೋದರೆ ಅದರ ಅವಸ್ತುತ್ವವು ನಮ್ಮ ಅರಿವಿಗೆ ಬರುತ್ತದೆ. ಈ ಅನ್ವೇಷಣೆಯು ನಮ್ಮನ್ನು ಭೌತಿಕದಿಂದ ಅಭೌತಿಕಕ್ಕೆ ಒಯ್ಯುತ್ತದೆ. ಸ್ವಾಮಿ ವಿವೇಕಾನಂದರ ಭಾಷೆಯಲ್ಲಿ ಭೌತಿಕವು ಅಭೌತಿಕದಲ್ಲಿ ಕರಗುತ್ತದೆ. ಅಂದರೆ ವಾಸ್ತವಿಕವಾಗಿ ಏನೂ ಅರಿಯುವುದಕ್ಕೆ ಉಳಿಯದಿದ್ದಾಗ ನಮ್ಮ ಗಮನವು ಅರಿಯುವವನ ಕಡೆ ತಿರುಗುತ್ತದೆ. ಬೋಧ್ಯವಸ್ತುಗಳೆಲ್ಲ ಕರಗಿಹೋಗಿ ಬೋಧಸ್ವರೂಪನಾದ ಆತ್ಮನೊಬ್ಬನು ಮಾತ್ರ ಉಳಿಯುತ್ತಾನೆ, ಏಕೆಂದರೆ ಅರಿಯುವವನನ್ನು ಅಳಿಸಲಾಗುವುದಿಲ್ಲ. ಅರಿಯುವವನನ್ನೇ ಅಲ್ಲಗಳೆದರೆ, ಅಲ್ಲಗಳೆಯುವವನೇ ಅರಿಯುವವನಾಗುತ್ತಾನೆ. ವಿದ್ಯಾರಣ್ಯರು ತಮ್ಮ ***ಪಂಚದಶಿ*** ಯಲ್ಲಿ ಇದನ್ನು ಒಂದು ಉದಾಹರಣೆಯ ಮೂಲಕ ವಿವರಿಸುತ್ತಾರೆ: ಒಬ್ಬನು ತನಗೆ ನಾಲಿಗೆಯೇ ಇಲ್ಲ ಎಂದು ಹೇಳಿದನಂತೆ. 'ನಾಲಿಗೆಯೇ ಇಲ್ಲ' ಎಂಬ ಮಾತೇ ಅವನಿಗೆ ನಾಲಿಗೆ ಇರುವುದನ್ನು ಸೂಚಿಸುತ್ತದೆ. ಹಾಗೆಯೇ ತಾನಿಲ್ಲ ಎಂಬ ಮಾತೇ ತಾನಿರುವುದನ್ನು ಸೂಚಿಸುತ್ತದೆ. ಮತ್ತೆ ತಾನಿಲ್ಲದಿರುವುದು ಯಾರಿಗೂ ರುಚಿಸದು. ಹಾಗಾದರೆ ತಾನಿಲ್ಲವಾಗುವುದೇ ಆತ್ಯಂತಿಕ ಗುರಿಯಲ್ಲವೇ ಎಂದು ಕೇಳಬಹುದು. ನಿಜ, ದೇಹೇಂದ್ರಿಯ ಮನಸ್ಸುಗಳಿಂದ ಪ್ರತ್ಯೇಕವಾದ ತಾನೆಂಬ ಅರಿವಿನಲ್ಲಿ ತನ್ನತನವಿರುವುದಿಲ್ಲ, ಅದರಲ್ಲಿ ವೈಯಕ್ತಿಕತೆ ಇರುವುದಿಲ್ಲ – ಅದು ಸಮಷ್ಟಿ ಚೈತನ್ಯದೊಡನೆ ಒಂದಾಗಿ ಬಿಡುತ್ತದೆ – ಉಪ್ಪಿನ ಗೊಂಬೆಯು ಸಮುದ್ರದಲ್ಲಿ ಕರಗುವಂತೆ. ಆ ಸ್ಥಿತಿಯನ್ನೇ ಶ್ರೀಕೃಷ್ಣನು ನಾಲ್ಕನೆಯ ಶ್ಲೋಕದಲ್ಲಿ **ಯಸ್ಮಿನ್ ಗತಾ ನ ನಿವರ್ತಂತಿ ಭೂಯಃ** – 'ಯಾವುದನ್ನು ತಲುಪಿದವರು ಹಿಂತಿರುಗುವುದಿಲ್ಲವೋ' ಎಂಬ ಮಾತಿನಲ್ಲಿ ಹೇಳಿರುತ್ತಾನೆ.

ಈಗ ಸದ್ಯಕ್ಕೆ ಸಂಸಾರವೃಕ್ಷಕ್ಕೆ ಹಿಂದಿರುಗೋಣ! ನಮಗೆ ತಿಳಿದಿರುವಂತೆ ಎಲ್ಲ ವೃಕ್ಷಗಳೂ ಕೆಳಗಿನಿಂದ ಮೇಲೆ ಬೆಳೆಯುತ್ತವೆ. ಆದರೆ ಈ ಸಂಸಾರವೃಕ್ಷವು ಮೇಲಿನಿಂದ ಕೆಳಕ್ಕೆ ಬೆಳೆಯುತ್ತದಂತೆ! ಸಂಸಾರವೇ ತಲೆಕೆಳಗು ತಾನೆ! ಇದರ ಮೂಲವೂ ಮೇಲಿದೆಯಂತೆ **(ಊರ್ಧ್ವಮೂಲಂ)**, ಅಂದರೆ ಇದರ ಮೂಲ ಭಗವಂತನಲ್ಲಿದೆ ಎಂದರ್ಥ. ಭಗವಂತನು ಪರಮಶ್ರೇಷ್ಠ ಸತ್ಯವಾಗಿರುವುದರಿಂದ

ಅವನು ಮೇಲಿರುವನೆಂದು ಭಾವಿಸುತ್ತೇವೆ. ನಿಜವಾಗಿಯೂ ಭಗವಂತನ ವಿಷಯದಲ್ಲಿ ಮೇಲೆ ಕೆಳಗೆ ಎಂಬುದಿಲ್ಲ – ಅವನು ಸರ್ವವ್ಯಾಪಿ. ನಾವು ಆಧ್ಯಾತ್ಮಿಕ ಜೀವನದಲ್ಲಿ ಮುಂದುವರಿಯುವುದೆಂದರೆ ಉನ್ನತೋನ್ನತವಾಗಿ ಮೇಲೇರಿ ಭಗವಂತನನ್ನು ಪಡೆಯುವುದು, ಜಗತ್ತಿನ ಮೂಲಕ್ಕೆ ಹೊಗುವುದು. ಈ ದೃಷ್ಟಿಯಿಂದಲೂ ಇದು '**ಊರ್ಧ್ವಮೂಲಂ**' ಎಂದು ಹೇಳಿರುವುದು ಔಚಿತ್ಯಪೂರ್ಣವಾಗಿದೆ. ಈ ಸಂಸಾರದ ಮೂಲ ಮೇಲೆಲ್ಲೋ ನಮ್ಮ ದೃಷ್ಟಿಗೆ ನಿಲುಕದ, ನಮ್ಮ ಕಲ್ಪನೆಗೆ ಎಟುಕದ ರಹಸ್ಯಾತ್ಮಕ ನೆಲೆಯಲ್ಲಿದೆ. ಈ ದೃಷ್ಟಿಯಿಂದಲೂ ಇದು 'ಊರ್ಧ್ವಮೂಲ' ಎಂದು ಹೇಳಬಹುದು. ಸಂಸಾರಮೂಲದ ರಹಸ್ಯವನ್ನು ಬಯಲು ಮಾಡಲು ಅನಾದಿ ಕಾಲದಿಂದಲೂ ತತ್ತ್ವಜ್ಞಾನಿಗಳು ಪ್ರಯತ್ನಿಸುತ್ತಲೇ ಇದ್ದಾರೆ. ಮತ್ತು ಈ ಪ್ರಯತ್ನದ ಫಲವಾಗಿ ಅನೇಕ ಸಿದ್ಧಾಂತಗಳು ಹುಟ್ಟಿಕೊಂಡಿವೆ. ಈ ರಹಸ್ಯವನ್ನು ಬಿಡಿಸಲಾಗುವುದಿಲ್ಲ ಎಂದು ಅದ್ವೈತಿಗಳು ಜಗತ್ತೇ ಮಿಥ್ಯ ಎಂದು ಸಾರಿಬಿಟ್ಟರು! ಬೌದ್ಧರು ಜಗತ್ತಿಗೆ ಮೂಲವೇ ಇಲ್ಲ ಎಂದು ಕೈತೊಳೆದುಕೊಂಡುಬಿಟ್ಟರು! ಶ್ರೀವಿದ್ಯಾರಣ್ಯರು ಇದೇ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ:

ನ ಜಾನಾಮಿ ಕಿಮಪ್ಯೇತದಿತ್ಯಂತೇ ಶರಣಂ ತವ ।
ಅತ ಏವ ಮಹಾಂತೋಽಸ್ಯ ಪ್ರವದಂತೀಂದ್ರಜಾಲತಾಮ್ ॥

(ಪಂಚದಶಿ, ಚಿತ್ರದೀಪ, ೧೪೬)

'ಕೊನೆಗೆ 'ನಾನು ಇದನ್ನು ಸ್ವಲ್ಪವೂ ಅರಿಯೆನು, ನಿನಗೆ ಶರಣು' ಎಂದು ಹೇಳಬೇಕಾಗುತ್ತದೆ. ಆದ್ದರಿಂದಲೇ ದೊಡ್ಡ ಮುನಿಗಳು ಈ ಜಗತ್ತು ಇಂದ್ರಜಾಲವೆಂದು ಹೇಳುತ್ತಾರೆ.'

ಈ ಸಂಸಾರ ವೃಕ್ಷವು ಕೆಳಮುಖವಾಗಿ ಜಗತ್ತಿನ ರೂಪದಲ್ಲಿ ಶಾಖೋಪಶಾಖೆಯಾಗಿ ಹರಡಿಕೊಂಡಿದೆ **(ಅಧಃಶಾಖಂ)**. ಈ ಸಂಸಾರವೃಕ್ಷದಲ್ಲಿ ಮೇಲೇರುತ್ತ ಹೋಗುವುದೆಂದರೆ ಅಧೋಗತಿಯನ್ನು ಹೊಂದುವುದು. ವೃಕ್ಷದ ಹೂವುಹಣ್ಣುಗಳು ಅದರ ತುದಿ ಭಾಗದಲ್ಲಿರುತ್ತವೆ, ಮತ್ತು ಇವು ಇಂದ್ರಿಯವಿಷಯಗಳನ್ನು ಪ್ರತಿನಿಧಿಸುತ್ತವೆ.

ಇವುಗಳನ್ನು ನಾವು ಅರಸುತ್ತ ಹೋದರೆ ನಾವು ಅಧೋಗತಿಯನ್ನು ಹೊಂದುತ್ತೇವೆ. ಹೀಗೆ ಫಲಪುಷ್ಪಗಳನ್ನು ಅರಸುತ್ತ ಹೋಗಿ ಕೊಂಬೆ ಮುರಿದು ಕೆಳಗೆ ಬೀಳುತ್ತೇವೆ. ಮತ್ತೆ ಮೇಲೇರುತ್ತೇವೆ, ಮತ್ತೆ ಬೀಳುತ್ತೇವೆ. ಹೀಗೆ ಬಿದ್ದು ಎದ್ದು ಕೊನೆಗೊಮ್ಮೆ ಸಂಸಾರವನ್ನೇ ಒದ್ದುಬಿಡುತ್ತೇವೆ – ಇದರ ಸಹವಾಸವೇ ಬೇಡವೆಂದು. ಇದೇ ವೈರಾಗ್ಯ. ಈ ವೈರಾಗ್ಯ ಆಯುಧದಿಂದ **(ಅಸಂಗಶಸ್ತ್ರ)** ಸಂಸಾರವೃಕ್ಷವನ್ನು ಕತ್ತರಿಸಬೇಕೆಂದು ಶ್ರೀಕೃಷ್ಣನು ಹೇಳುತ್ತಾನೆ.

ಈ ವೃಕ್ಷದ ಎಲೆಗಳೇ ವೇದಗಳು. ಎಲೆಗಳು ವೃಕ್ಷಕ್ಕೆ ಆಹಾರವನ್ನು ನೀಡುವಂತೆ ವೇದಗಳು ಈ ಸಂಸಾರವೃಕ್ಷಕ್ಕೆ ಆಧಾರ – ಧರ್ಮಾಧರ್ಮ ಕರ್ಮಫಲಗಳು ವೇದಗಳಲ್ಲಿ ಉಕ್ತವಾಗಿರುವುದರಿಂದ – ಎಂದು ಶ್ರೀಶಂಕರಾಚಾರ್ಯರು ಈ ಹೇಳಿಕೆಗೆ ವಿವರಣೆಯನ್ನು ನೀಡಿದ್ದಾರೆ. ಧರ್ಮಾಧರ್ಮ ಆಚರಣೆಗಳು ಸುಖದುಃಖಾದಿ ಅನೇಕ ಫಲಗಳನ್ನು ನೀಡುತ್ತವೆ ಮತ್ತು ಇವುಗಳೇ ಸಂಸಾರವೃದ್ಧಿಗೆ ಕಾರಣವಾಗಿರುತ್ತವೆ. ಧರ್ಮಾಧರ್ಮ ಆಚರಣೆಗಳಿಂದ ಮನಸ್ಸಿನಲ್ಲಿ ಸಂಸ್ಕಾರಗಳು ಉಂಟಾಗುತ್ತವೆ. ಈ ಸಂಸ್ಕಾರಗಳು ತಮಗನುಗುಣವಾದ ಫಲ ನೀಡುತ್ತವೆ, ಈ ಫಲಗಳನ್ನು ಅನುಭವಿಸಲು ಕರ್ಮ ಮತ್ತು ಈ ಕರ್ಮಗಳಿಂದ ಸಂಸ್ಕಾರ. ಹೀಗೆ ಸಂಸಾರ ಚಕ್ರ ಮುಂದುವರಿಯುತ್ತದೆ. ಸಂಸಾರವೆಂದರೆ ಚೆನ್ನಾಗಿ ಚಲಿಸುವುದು **(ಸಮ್ಯಕ್ ಸರತೀತಿ)**. ಈ ಸಂಸಾರ ಚಲನೆಗೆ ಸಂಸ್ಕಾರಗಳ ಶಕ್ತಿ ಬೇಕು. ಸಂಸಾರಕ್ಕೆ 'ಕ' ಅನ್ನು ಅಂದರೆ ಕರ್ಮವನ್ನು ಸೇರಿಸಿದರೆ ಸಂಸ್ಕಾರವಾಗುತ್ತದೆ. ಅಂದರೆ ಸಂಸಾರಕ್ಕೂ ಕರ್ಮಕ್ಕೂ ಬಹಳ ನಿಕಟ ಸಂಬಂಧವಿದೆ. ಇನ್ನೊಂದು ಅರ್ಥದಲ್ಲಿ ಸಂಸಾರ ವೆಂದರೆ ಸಮ್ಯಕ್ ಸಾರ – ಸರಿಯಾದ ಸಾರ. ನಿಸ್ಸಾರವಾದ ಈ ಸಂಸಾರದಲ್ಲಿ ಅದರ ಹಿಂದಿರುವ ನಿಜವಾದ ಸಾರವಸ್ತುವೇ ಭಗವಂತ. ನಿಸ್ಸಾರವಾದ ಸಂಸಾರವನ್ನು ಸಾರವತ್ತನ್ನಾಗಿ ಮಾಡುವುದೇ ಆಧ್ಯಾತ್ಮಿಕ ಕಲೆ.

ಎರಡನೆಯ ಶ್ಲೋಕದಲ್ಲಿ ಶ್ರೀಕೃಷ್ಣನು ಈ ಸಂಸಾರ ವೃಕ್ಷದ ಶಾಖೆಗಳು ಮೇಲೆ ಕೆಳಗೆ ಎಲ್ಲೆಲ್ಲಿಯೂ ಹರಡಿಕೊಂಡಿವೆ – ಆಲದ ಮರದ ಕೊಂಬೆಗಳಂತೆ ಎಂದು ಹೇಳುತ್ತಾನೆ. ಈ ಹೇಳಿಕೆ ಸಂಸಾರವು ಎಷ್ಟು ಜಟಿಲವಾದುದು ಎಂಬುದನ್ನು ಸೂಚಿಸುತ್ತದೆ. ಪ್ರಕೃತಿಯ ಮೂರು ಗುಣಗಳಿಂದ ಈ ವೃಕ್ಷದ ಕೊಂಬೆಗಳು ಬೆಳೆಯುತ್ತದೆ **(ಗುಣಪ್ರವೃದ್ಧಾಃ)**. ವೃಕ್ಷವು ಬೆಳೆಯುವುದಕ್ಕೆ ಬೆಳಕು, ನೀರು ಮತ್ತು ಗೊಬ್ಬರ ಈ ಮೂರು ಆವಶ್ಯಕ. ಸತ್ತ್ವಗುಣವು ಬೆಳಕನ್ನೂ, ರಜೋಗುಣವು ನೀರನ್ನೂ ತಮೋಗುಣವು ಗೊಬ್ಬರವನ್ನು ಪ್ರತಿನಿಧಿಸುತ್ತವೆ. ಇಂದ್ರಿಯ ವಿಷಯಗಳು ಈ ವೃಕ್ಷದ ಚಿಗುರುಗಳಂತೆ **(ವಿಷಯಪ್ರವಾಲಾಃ)**. ವೃಕ್ಷದ ಚಿಗುರುಗಳು ತುಂಬ ಸುಂದರವಾಗಿ ಕಾಣುವಂತೆ ಇಂದ್ರಿಯವಿಷಯಗಳೂ ತುಂಬ ಆಕರ್ಷಕವಾಗಿರುತ್ತವೆ. ಈ ಚಿಗುರುಗಳಿಂದಲೇ ವೃಕ್ಷಗಳು ಬೆಳೆಯುತ್ತ ಹೋಗುವಂತೆ, ವಿಷಯ ಸುಖದಿಂದಲೇ ಸಂಸಾರವು ಬೆಳೆಯುತ್ತ ಹೋಗುವುದು. ಚಿಗುರನ್ನು ನಾವು ಕತ್ತರಿಸುತ್ತ ಹೋಗಬೇಕು, ಆಗ ವೃಕ್ಷವು ಕ್ರಮೇಣ ಬಾಡುತ್ತದೆ. ಇದರಂತೆಯೇ ನಾವು ವಿಷಯಸುಖವನ್ನು ಮೊಟಕುಗೊಳಿಸುತ್ತ ಹೋದರೆ ಸಂಸಾರ ವೃಕ್ಷವು ಕ್ರಮೇಣ ಕ್ಷೀಣಿಸುತ್ತ ಬರುತ್ತದೆ.

ಇದರ ಬೇರುಗಳು ಕೆಳಗೆ ಮನುಷ್ಯ ಲೋಕದಲ್ಲಿ ಹರಡಿಕೊಂಡಿವೆಯಂತೆ. ನಾವು ಮಾಡುವ ಧರ್ಮಾಧರ್ಮಾದಿ ಕರ್ಮಗಳೇ ಈ ಬೇರುಗಳು, ಈ ಕರ್ಮಸಂಸ್ಕಾರಗಳೇ ಸಂಸಾರವೃಕ್ಷಕ್ಕೆ ಆಧಾರ, ಮತ್ತು ಮನುಷ್ಯಲೋಕವೇ ನಮ್ಮ ಕರ್ಮಕ್ಷೇತ್ರ. ಇಲ್ಲಿ ನಾವು ಮಾಡಿದ ಕರ್ಮಗಳಿಗೆ ಅನುಗುಣವಾಗಿ ಉನ್ನತ ಅಥವಾ ಅಧಮ ಲೋಕಗಳನ್ನು ಪಡೆಯುತ್ತೇವೆ. ಮತ್ತೆ ನಮ್ಮ ಕರ್ಮವನ್ನೆಲ್ಲ ಸವೆಸಿ ಆತ್ಯಂತಿಕ ಮುಕ್ತಿಯನ್ನು ಪಡೆಯುವುದೂ ಈ ಲೋಕದಲ್ಲಿಯೇ.

ಆದ್ದರಿಂದ ನಾವು ಇಲ್ಲಿಯೇ ಮುಕ್ತಿಯನ್ನು ಪಡೆಯಬೇಕೆಂದು ಶ್ರುತಿ ಮತ್ತು ಸ್ಮೃತಿ ಮತ್ತೆ ಮತ್ತೆ ಒತ್ತಿಹೇಳುತ್ತವೆ. ಅನಾಸಕ್ತ ಕರ್ಮದಿಂದ ಕರ್ಮಬಂಧನವು ಕಳಚುತ್ತದೆ – ಹೊಸ ಸಂಸ್ಕಾರಗಳು ಉಂಟಾಗದೆ ಇರುವುದರಿಂದ. ಆದ್ದರಿಂದಲೇ ಶ್ರೀಕೃಷ್ಣನು ಅಸಂಗ ಶಸ್ತ್ರದಿಂದ ಈ ವೃಕ್ಷವನ್ನು ಕತ್ತರಿಸಬೇಕೆಂದು ಹೇಳಿರುವುದು. ಆದರೆ ಈ ಆಯುಧವು ಹರಿತವಾಗಿರಬೇಕು, ಅಂದರೆ ವೈರಾಗ್ಯವು ತೀವ್ರವಾಗಿರಬೇಕು. ಅದನ್ನು ವಿವೇಕದ ಕಲ್ಲಿನ ಮೇಲೆ ಉಜ್ಜಿ ಇನ್ನೂ ಹರಿತಗೊಳಿಸಬೇಕು. ದೃಢವಾಗಿ ಅದನ್ನು ಕತ್ತರಿಸಬೇಕು, ಅಂದರೆ ದೃಢವಾದ ಶ್ರದ್ಧೆ ಇರಬೇಕು.

ಸಂಸಾರವನ್ನು ವೃಕ್ಷಕ್ಕೆ ಹೋಲಿಸುವುದು ಬಹಳ ರೂಢಿಯಲ್ಲಿದೆ. ಶ್ರೀಶಂಕರಾಚಾರ್ಯರು ***ವಿವೇಕಚೂಡಾಮಣಿ*** ಯಲ್ಲಿ ಒಂದು ರೀತಿಯ ಸಂಸಾರವೃಕ್ಷದ ವಿವರಣೆಯನ್ನು ನೀಡುತ್ತಾರೆ:

ಬೀಜಂ ಸಂಸೃತಿ-ಭೂಮಿಜಸ್ಯ ತು ತಮೋದೇಹಾತ್ಮಧೀರಂಕುರೋ
ರಾಗಃ ಪಲ್ಲವಮಂಬು ಕರ್ಮ ತು ವಪುಃ ಸ್ಕಂಧೋಽಸವಃ ಶಾಖಿಕಾಃ।
ಅಗ್ರಾಣೀಂದ್ರಿಯಸಂಹತಿಶ್ಚ ವಿಷಯಾಃ ಪುಷ್ಪಾಣಿ ದುಃಖಂ ಫಲಂ
ನಾನಾಕರ್ಮಸಮುದ್ಭವಂ ಬಹುವಿಧಂ ಭೋಕ್ತಾಽತ್ರ ಜೀವಃ ಖಗಃ ॥

'ಸಂಸಾರವೆಂಬ ವೃಕ್ಷಕ್ಕೆ ಅಜ್ಞಾನವೇ ಬೀಜವು. ದೇಹಾತ್ಮಬುದ್ಧಿಯೇ ಮೊಳಕೆಯು. ವಿಷಯಾಸಕ್ತಿಯೇ ಚಿಗುರು. ಕರ್ಮವೇ ನೀರು. ಶರೀರವೇ ಮಧ್ಯಭಾಗವು. ಪ್ರಾಣಗಳೇ ಕೊಂಬೆಗಳು. ಇಂದ್ರಿಯಸಮೂಹವೇ ಕೊಂಬೆಯ ತುದಿಗಳು. ಇಂದ್ರಿಯ ವಿಷಯಗಳೇ ಪುಷ್ಪಗಳು. ಬಗೆಬಗೆಯ ಕರ್ಮದಿಂದ ಉತ್ಪನ್ನವಾದ ಬಹುವಿಧವಾದ ದುಃಖವೇ ಫಲವು. ಇಲ್ಲಿ ಫಲವನ್ನು ಅನುಭವಿಸುವ ಜೀವವೇ ಪಕ್ಷಿಯು.'

ಬೀಜದಲ್ಲಿ ಇಡೀ ವೃಕ್ಷವೇ ಸುಪ್ತಾವಸ್ಥೆಯಲ್ಲಿ ಅಡಗಿರುವಂತೆ, ಮತ್ತೆ ಅದೇ ವೃಕ್ಷರೂಪದಲ್ಲಿ ಹೊರಬರುವಂತೆ, ಅವಿದ್ಯೆಯೇ ಈ ಸಂಸಾರಕ್ಕೆ ಮೂಲ, ಇದರಿಂದಲೇ ಇಡೀ ಜಗದ್ವಿಕ್ಷೇಪ ಪ್ರಾರಂಭವಾಗುತ್ತದೆ. ಈ ಅವಿದ್ಯೆಯ ದೆಸೆಯಿಂದ ಆತ್ಮನು ತನ್ನ ಸ್ವರೂಪವನ್ನು ಮರೆತು ದೇಹೇಂದ್ರಿಯ ಮನಸ್ಸುಗಳೊಡನೆ ಒಂದಾಗುತ್ತಾನೆ. ಈ ಒಂದಾಗುವಿಕೆಯೇ ಮೊಳಕೆ. ಈ ದೇಹಾತ್ಮಬುದ್ಧಿಯಿಂದ ವಿಷಯಾಸಕ್ತಿಯು ಚಿಗುರೊಡೆಯುತ್ತದೆ. ಆಗ ವಿಷಯಸುಖವನ್ನು ಅನುಭವಿಸಲು ಕರ್ಮ ಮಾಡುತ್ತೇವೆ. ನೀರು ಮರಕ್ಕೆ ಪುಷ್ಟಿಯನ್ನು ನೀಡುವಂತೆ, ಕರ್ಮವು ವಿಷಯಾಸಕ್ತಿಯ ಚಿಗುರನ್ನು ಅಧಿಕಗೊಳಿಸಿ ಸಂಸಾರವೃಕ್ಷವು ಹುಲಸಾಗಿ ಬೆಳೆಯಲು ಕಾರಣವಾಗುತ್ತದೆ. ಹೀಗೆ ಬೆಳೆದು ಹೆಮ್ಮರವಾದ ಈ ವೃಕ್ಷದ ಪ್ರಧಾನವಾದ ಕಾಂಡ ಭಾಗವೇ ಶರೀರ. ಈ ಶರೀರವನ್ನು ಆಶ್ರಯಿಸಿಯೇ ತಾನೆ ಇಡೀ ಸಂಸಾರ ನಿಂತಿರುವುದು. ಈ ಶರೀರದಲ್ಲಿ ಪ್ರಾಣವು ನರಮಂಡಲಗಳ ರೂಪದಲ್ಲಿ ಶಾಖೋಪಶಾಖವಾಗಿ ಕವಲೊಡೆದು ಶರೀರ ಕ್ರಿಯೆಗಳನ್ನು ನಿಯಂತ್ರಿಸುತ್ತಿರುವುದು. ಈ ಪ್ರಾಣವು ಇಂದ್ರಿಯಗಳೆಂಬ ತನ್ನ ಹೊರತುದಿಗಳಿಂದ ಸಂವೇದನೆಗಳನ್ನು ಸ್ವೀಕರಿಸುತ್ತಿರುವುದು. ಇಂದ್ರಿಯಗಳು ಪ್ರಾಣಕ್ರಿಯೆಯ ಒಂದಂಶ ಅಷ್ಟೆ. ಆದ್ದರಿಂದಲೇ ಇಂದ್ರಿಯಗಳನ್ನು ಪ್ರಾಣಗಳೆಂದು ಕರೆಯಲಾಗಿದೆ. ರೂಪ, ರಸಾದಿ ಇಂದ್ರಿಯ ವಿಷಯಗಳು ಬಹು ಆಕರ್ಷಕವಾಗಿರುವುದರಿಂದ ಅವುಗಳನ್ನು ಪುಷ್ಪಗಳು ಎಂದು ಕರೆಯಲಾಗಿದೆ. ಇಂದ್ರಿಯ ಸುಖವನ್ನು ಅನುಭವಿಸಲು ನಾವು ಕರ್ಮಗಳಲ್ಲಿ ತೊಡಗುತ್ತೇವೆ, ಇವು ಸಂಸ್ಕಾರಗಳನ್ನು ಉಂಟುಮಾಡುತ್ತವೆ, ಸಂಸ್ಕಾರಗಳು ಇಂದ್ರಿಯ ಸುಖಕ್ಕೆ ಪ್ರೇರಣೆಯನ್ನು ನೀಡಿ ಕರ್ಮ ಮಾಡಿಸುತ್ತವೆ, ಮತ್ತೆ ಇವುಗಳಿಂದ ಸಂಸ್ಕಾರ – ಹೀಗೆ ಕರ್ಮಬಂಧನವು ವೃದ್ಧಿಯಾಗುತ್ತ ಹೋಗುತ್ತದೆ. ಇದರ ಫಲವೇ ದುಃಖ. ಇದನ್ನು ಅನುಭವಿಸುತ್ತ ಮರದ ಮೇಲೆ ಕುಳಿತಿರುವ ಹಕ್ಕಿಯೇ ಜೀವಾತ್ಮ.

*ಕಠೋಪನಿಷತ್ತಿ*ನ ಆರನೆಯ ವಲ್ಲಿಯ ಮೊದಲನೇ ಶ್ಲೋಕದಲ್ಲಿ ಇದೇ ರೂಪಕವು ಬರುತ್ತದೆ:

ಊರ್ಧ್ವಮೂಲಮವಾಕ್ ಶಾಖಾ ಏಷೋಽಶ್ವತ್ಥಃ ಸನಾತನಃ ।

'ಮೂಲವು ಮೇಲಿರುವ ಶಾಖೆಗಳು ಕೆಳಗಿರುವ ಈ ಅಶ್ವತ್ಥವು ಸನಾತನವಾದುದು.' ಇದಕ್ಕೆ ಭಾಷ್ಯವನ್ನು ಬರೆಯುತ್ತ ಶ್ರೀ ಶಂಕರಾಚಾರ್ಯರು ತುಂಬ ವಿಸ್ತಾರವಾಗಿ ಈ ಸಂಸಾರವೃಕ್ಷವನ್ನು ವಿವರಿಸಿದ್ದಾರೆ. ಇದನ್ನು 'ವೃಕ್ಷ' ಎಂದು ಏಕೆ ಕರೆಯುತ್ತಾರೆ ಎಂಬುದಕ್ಕೆ ಅವರು ಹೇಳುತ್ತಾರೆ – **ವೃಕ್ಷಶ್ಚ ವ್ರಶ್ಚನಾತ್** – ಇದು ಕತ್ತರಿಸಲ್ಪಡುವುದರಿಂದ ಇದನ್ನು ವೃಕ್ಷ ಎಂದು ಕರೆಯಲಾಗಿದೆ. ಈ ವೃಕ್ಷವನ್ನು ಅಸಂಗಶಸ್ತ್ರದಿಂದ ಕತ್ತರಿಸಬೇಕೆಂದು ಶ್ರೀಕೃಷ್ಣನು ಹೇಳುತ್ತಾನೆ. ವೈರಾಗ್ಯವೆಂಬ ಕತ್ತಿಯ ಮೂಲಕ ಮುಳ್ಳು, ಪೊದೆ ಮುಂತಾದವುಗಳನ್ನು ಕತ್ತರಿಸುತ್ತ, ಈ ಗುರಿಯನ್ನು ತಲುಪಬೇಕು. ಅನಂತರ ಮತ್ತೆ ಈ ಸಂಸಾರಕ್ಕೆ ಬರಬೇಕಾಗಿಲ್ಲ.


ಈ ಗುರಿಯನ್ನು ತಲುಪಲು ಅವಶ್ಯಕವಾದ ಕೆಲವು ಗುಣಗಳನ್ನು ಶ್ರೀಕೃಷ್ಣನು ಐದನೆಯ ಶ್ಲೋಕದಲ್ಲಿ ಪ್ರಸ್ತಾಪಿಸುತ್ತಾನೆ. ಮೊದಲನೆಯ ಗುಣ ನಿರ್ಮಾನ, ಅಂದರೆ ಮಾನ್ಯತೆಯನ್ನು ಬಯಸದಿರುವುದು. ಬಾಹ್ಯ ವಿಷಯಗಳನ್ನು ತ್ಯಾಗ ಮಾಡುವುದು ಸುಲಭ. ಮಾನ್ಯತೆಯನ್ನು ತ್ಯಾಗಮಾಡುವುದು ಬಹಳ ಕಷ್ಟ – ಇದು ಅಹಂಕಾರದ ಹಸಿವು. ನಮ್ಮ ಅಹಂಕಾರವು ಇತರರ ಗೌರವವನ್ನು ಮಾನ್ಯತೆಯನ್ನೂ ಪ್ರಶಂಸೆಯನ್ನೂ ಬಯಸುತ್ತದೆ. ಯಾವುದಾದರೂ ರೀತಿಯಲ್ಲಿ ಇತರರು ನಮ್ಮನ್ನು ಗುರುತಿಸಬೇಕೆಂದು ಬಯಸುತ್ತೇವೆ. ಸರಿಮಾರ್ಗದಿಂದಾಗದಿದ್ದರೂ ದುರ್ಮಾರ್ಗದಿಂದಾದರೂ ಜನರ ಗಮನಕ್ಕೆ ಬರಬೇಕೆಂದು ಬಯಸುವವರಿದ್ದಾರೆ. **ಯೇನ ಕೇನ ಪ್ರಕಾರೇಣ ಪ್ರಸಿದ್ಧ ಪುರುಷೋ ಭವ** – 'ಯಾವುದೇ ರೀತಿಯಲ್ಲಾದರೂ ಪ್ರಸಿದ್ಧಿಯನ್ನು ಪಡೆ' ಎಂಬ ಮಾತಿದೆ. ಶ್ರೀಚೈತನ್ಯರ ಹಿತನುಡಿ ಇಂತಿದೆ: **ಅಮಾನಿನಾ ಮಾನದೇವ ಕೀರ್ತನೀಯಃ ಸದಾ ಹರಿಃ** – 'ತಾನು ಮಾನವನ್ನು ಬಯಸದೆ, ಇತರರಿಗೆ ಮಾನ್ಯತೆಯನ್ನು

ನೀಡುತ್ತ ಯಾವಾಗಲೂ ಶ್ರೀಹರಿಯನ್ನು ಕೀರ್ತಿಸಬೇಕು.' ನಾವು ಕೀರ್ತಿಯನ್ನು ಬಯಸದೆ ಹರಿಯನ್ನು ಕೀರ್ತಿಸಬೇಕು. ಹೆಸರು ಕೀರ್ತಿಯೆಂಬುದು ಒಂದು ಮತ್ತಿನಂತೆ. ಅದಿಲ್ಲದೇ ಇರುವಾಗ ವ್ಯಕ್ತಿಯು ನೆಮ್ಮದಿಯಿಂದ ಇರುತ್ತಾನೆ. ಅದು ಒಮ್ಮೆ ಸ್ವಲ್ಪ ಸಿಕ್ಕಿತು ಎಂದರೆ ಮತ್ತೇರುತ್ತದೆ. ಅನಂತರ ಎಷ್ಟು ಸಿಕ್ಕಿದರೂ ತೃಪ್ತಿಯೇ ಇಲ್ಲ! ಆಗ ವ್ಯಕ್ತಿಯು ತನ್ನ ನೆಮ್ಮದಿಯನ್ನು ಕಳೆದುಕೊಳ್ಳುತ್ತಾನೆ.

ಎರಡನೆಯ ಗುಣ ನಿರ್ಮೋಹ – ಸಂಸಾರದ ಆಕರ್ಷಣೆಯ ಮೋಹಕ್ಕೆ ನಾವು ವಶರಾಗಬಾರದು. ವಿಷಯಸುಖದ ಮೋಹ, ಬಂಧುಮಿತ್ರರ ಮೋಹ, ಹೆಸರು ಕೀರ್ತಿಯ ಮೋಹ, ಸಂಪ್ರದಾಯ ನಂಬಿಕೆಗಳ ಮೋಹ, ಮತೀಯ ಮೋಹ, ಸ್ಥಾನೈಶ್ವರ್ಯಗಳ ಮೋಹ, ವ್ಯಕ್ತಿತ್ವ ಮೋಹ – ಹೀಗೆ ಹಲವು ಬಗೆಯ, ಹಲವು ಸ್ತರದ ಮೋಹಗಳಿವೆ. ಭಗವದಾಕರ್ಷಣೆಯ ಬಲದಿಂದ ಈ ಮೋಹಗಳಿಂದ ಪಾರಾಗಬಹುದು. ಮೂರನೆಯ ಗುಣ ಸಂಗದೋಷವನ್ನು ಗೆಲ್ಲುವುದು. ಈ ಎಲ್ಲ ಗುಣಗಳೂ ಒಂದಕ್ಕೊಂದು ಪೂರಕ. ಶ್ರೀರಾಮಕೃಷ್ಣರು ಹೇಳುವಂತೆ, ಈ ಸಂಸಾರದಲ್ಲಿ ವಾಸಿಸುವುದೆಂದರೆ ಕಾಡಿಗೆಯ ಕೋಣೆಯಲ್ಲಿ ಇರುವಂತೆ. ನಾವು ಎಷ್ಟೇ ಎಚ್ಚರಿಕೆಯಿಂದಿದ್ದರೂ ಸ್ವಲ್ಪವಾದರೂ ಕಾಡಿಗೆ ಬಟ್ಟೆಗೆ ಅಂಟಿಕೊಳ್ಳುತ್ತದೆ. ಆದರೆ ನಿರ್ಲಿಪ್ತಭಾವದಿಂದದ್ದರೆ, ತಾವರೆಯ ಎಲೆಯಂತಿದ್ದರೆ ಸಂಗದೋಷದಿಂದ ಪಾರಾಗಬಹುದು. ಈ ನಿರ್ಲಿಪ್ತತೆಯು ಬರಬೇಕಾದರೆ ಉನ್ನತ ಆಧ್ಯಾತ್ಮಿಕ ಆದರ್ಶದ ಕಡೆಗೆ ಮನಸ್ಸು ವಾಲಿರಬೇಕು. ಆದ್ದರಿಂದಲೇ ನಿತ್ಯವೂ ಅಧ್ಯಾತ್ಮದಲ್ಲಿಯೇ ಮನಸ್ಸುಳ್ಳವರಾಗಿರಬೇಕು (**ಅಧ್ಯಾತ್ಮನಿತ್ಯಾಃ**) ಎಂದು ಶ್ರೀಕೃಷ್ಣನು ಹೇಳುತ್ತಾನೆ. ಶ್ರೀರಾಮಕೃಷ್ಣರು ಹೇಳುವಂತೆ ಪರಪುರುಷನಲ್ಲಿ ಆಸಕ್ತಳಾದ ಮಹಿಳೆಯು ಮನೆಕೆಲಸಗಳನ್ನೆಲ್ಲ ಯಾಂತ್ರಿಕವಾಗಿ ನಿರ್ಲಿಪ್ತಳಾಗಿ ಮಾಡುತ್ತಾಳೆ, ಆಕೆಯ ಮನಸ್ಸೆಲ್ಲ ಆ ವ್ಯಕ್ತಿಯ ಮೇಲೆಯೇ ಇರುತ್ತದೆ. ಆಧ್ಯಾತ್ಮಿಕ ಸಾಧಕನು ಈ ರೀತಿ ನಿರ್ಲಿಪ್ತತೆಯಿಂದ ಇರಬೇಕೆಂದು ಶ್ರೀರಾಮಕೃಷ್ಣರು ಹೇಳುತ್ತಾರೆ. ಇಂತಹ ನಿರ್ಲಿಪ್ತತೆ ಬರಬೇಕಾದರೆ ಸಾಧಕನು ಆಸೆಗಳಿಂದ ದೂರವಾಗಿರಬೇಕು (**ವಿನಿವೃತ್ತಕಾಮಾಃ**). ಸುಖದುಃಖಗಳಿಗೆ ಆಸೆಗಳೇ ಕಾರಣವಾಗಿರುವುದರಿಂದ, ಆಸೆಗಳೇ ಇಲ್ಲದಿರುವಾಗ ಸುಖದುಃಖ ದ್ವಂದ್ವಗಳಿಂದಲೂ ಸಾಧಕನು ಮುಕ್ತನಾಗಿರುತ್ತಾನೆ (**ದ್ವಂದ್ವೈರ್ವಿಮುಕ್ತಾಃ ಸುಖದುಃಖಸಂಜ್ಞೈಃ**).

ಈ ಎಲ್ಲ ಗುಣಗಳು ಇದ್ದರೆ ಸಂಸಾರವೃಕ್ಷವನ್ನು ಕತ್ತರಿಸಿ ಮೋಕ್ಷ ಸಾಮ್ರಾಜ್ಯವನ್ನು ಪಡೆಯಬಹುದು. ✤

ಯುವಚೇತನ



ಒಂದು ಪ್ರಚಂಡ ಆಧ್ಯಾತ್ಮಿಕ ತರಂಗ ಬರುತ್ತಿದೆ. ಯಾರು ನೀಚರಾಗಿರುವರೋ ಅವರು ಉತ್ತಮರಾಗುತ್ತಾರೆ. ಯಾರು ಅಜ್ಞಾನಿಗಳೋ ಅವರು ಮಹಾಪಂಡಿತರ ಗುರುಗಳಾಗುತ್ತಾರೆ. ಉತ್ತಿಷ್ಠತ! ಜಾಗ್ರತ! ಪ್ರಾಪ್ಯ ವರಾನ್ನಿಬೋಧತ ! ಏಳಿ, ಜಾಗ್ರತರಾಗಿ, ಗುರಿ ಸೇರುವವರೆಗೂ ನಿಲ್ಲಬೇಡಿ. ವಿಕಾಸವೇ ಜೀವನ, ಸಂಕೋಚವೇ ಮರಣ. ತನ್ನ ಸ್ವಂತ ಸುಖವನ್ನು ನೋಡಿಕೊಳ್ಳುತ್ತ ಯಾರು ಸ್ವಾರ್ಥಪರರಾಗಿ, ಸೋಮಾರಿಗಳಾಗಿ ಕಾಲ ಕಳೆಯುತ್ತಿರುವರೋ ಅವರಿಗೆ ನರಕದಲ್ಲಿಯೂ ಸ್ಥಳವಿಲ್ಲ.

ಏಳಿ ಜಾಗ್ರತರಾಗಿ. ಆಧ್ಯಾತ್ಮಿಕ ಮಹಾತರಂಗ ಒಂದು ಬರುತ್ತಿದೆ. ಮುಂದೆ ನಡೆಯಿರಿ. ಸ್ತ್ರೀಯರು ಪುರುಷರು ಚಂಡಾಲನ ಪರಿಯಂತರ ಎಲ್ಲರೂ ಮುಂದೆ ಸಾಗಿ. ಅವರೆದುರಿಗೆ ಎಲ್ಲರೂ ಪವಿತ್ರರು. ಮುಂದೆ ! ಮುಂದೆ ! ನುಗ್ಗಿ ನಡೆಯಿರಿ. ಮುಂದೆ ! ಗೌರವ, ಕೀರ್ತಿ, ಭಕ್ತಿ, ಮುಕ್ತಿಗಳನ್ನು ಲಕ್ಷಿಸುವುದಕ್ಕೆ ಸಮಯವಿಲ್ಲ.

(ಸ್ವಾಮಿ ವಿವೇಕಾನಂದರ ಕೃತಿಶ್ರೇಣಿ, ಭಾಗ ೪, ಪು.೨೨೨-೨೩)

ಮುಂದುವರಿಯಿರಿ. ಒಂದು ಶೀಲವನ್ನು ಜೀವನದಲ್ಲಿ ರೂಢಿಸಬೇಕಾದರೆ ಅನೇಕ ವರ್ಷಗಳ ಹೋರಾಟ ಬೇಕು. ನಿರಾಶನಾಗದಿರು. ಸತ್ಯದ ಒಂದೇ ಒಂದು ನುಡಿ ಕೂಡ ನಾಶವಾಗುವುದಿಲ್ಲ. ಅನೇಕ ಶತಮಾನಗಳು ಅದು ಕಸದ ಗುಡ್ಡೆಯಲ್ಲಿ ಹುದುಗಿಕೊಂಡಿರಬಹುದು. ಆದರೆ ಇಂದೋ ನಾಳೆಯೋ ಎಂದಾದರೊಂದು ದಿನ ಅದು ಪ್ರಕಾಶಕ್ಕೆ ಬಂದೇ ಬರುವುದು. ಸತ್ಯಕ್ಕೆ ಚ್ಯುತಿಯಿಲ್ಲ, ಶೀಲಕ್ಕೆ ಚ್ಯುತಿಯಿಲ್ಲ, ಪಾವಿತ್ರ್ಯಕ್ಕೆ ಚ್ಯುತಿಯಿಲ್ಲ. ನನಗೆ ಒಬ್ಬ ವಿಶ್ವಸನೀಯ ಮನುಷ್ಯ ಸಾಕು, ಕೆಲಸಕ್ಕೆ ಬಾರದ ಒಂದು ಗುಂಪು ಬೇಕಾಗಿಲ್ಲ. ನನ್ನ ಮಗು! ಧೈರ್ಯವಾಗಿ ನಿಲ್ಲು. ನಿನಗೆ ಸಹಾಯ ಮಾಡುವುದಕ್ಕೆ ಬರುವ ಯಾರಿಗೂ ಕಾದು ಕುಳಿತುಕೊಳ್ಳಬೇಡ. ಎಲ್ಲ ಮಾನವರ ಸಹಾಯಕ್ಕಿಂತ ಮೇಲಲ್ಲವೆ ಭಗವಂತ? ಪವಿತ್ರನಾಗು. ದೇವರಲ್ಲಿ ಭಕ್ತಿ ಇಡು. ಯಾವಾಗಲೂ ಆತನನ್ನು ನಂಬು. ನೀನು ಸರಿಯಾದ ಹಾದಿಯಲ್ಲಿ ಹೋಗುವೆ. ನಿನ್ನನ್ನು ಯಾವುದೂ ಕದಲಿಸಲಾಗದು.

(ಸ್ವಾಮಿ ವಿವೇಕಾನಂದರ ಕೃತಿಶ್ರೇಣಿ, ಭಾಗ ೪, ಪು.೨೩೨)

ಸ್ವಾಮಿ ಅಖಂಡಾನಂದರ ಸ್ಮೃತಿಸಂಚಯ

ಬಂಗಾಳಿ ಮೂಲ: **ಸ್ವಾಮಿ ನಿರಾಮಯಾನಂದ** ಕನ್ನಡಕ್ಕೆ: **ಕುಮಾರಿ ಪಿ.ಉಷಾ**

ಭಾಗ ೧೧

ಬಾಬಾ ಹೇಳಿದರು, 'Imitation of Christ' is a great book. It helps a spiritual life of renunciation. We had that book in our first monastery. It's a very nice book.' *('ಕ್ರಿಸ್ತನ ಅನುಕರಣೆ' ಒಂದು ಶ್ರೇಷ್ಠ ಗ್ರಂಥ. ಅದು ತ್ಯಾಗಿಗಳ ಆಧ್ಯಾತ್ಮಿಕ ಜೀವನಕ್ಕೆ ಸಹಾಯಕ. ನಮ್ಮ ಮೊದಲನೆಯ ಮಠದಲ್ಲಿ ಆ ಗ್ರಂಥವಿತ್ತು. ಅದು ಬಹಳ ಒಳ್ಳೆಯ ಪುಸ್ತಕ.')* ತರುವಾಯ ಬಾಬಾ ಏನನ್ನೋ ಜ್ಞಾಪಿಸಿಕೊಂಡು ಫಿಲಿಪ್‌ನನ್ನು ತಮ್ಮ ಕೋಣೆಯೊಳಕ್ಕೆ ಕರೆದುಕೊಂಡು ಹೋಗಿ, ಮೋಂಬತ್ತಿಯ ಬೆಳಕಿನಲ್ಲಿ ಅವನನ್ನು ಚೆನ್ನಾಗಿ ನೋಡಿ, ಕೆಲವು ಪ್ರಶ್ನೆಗಳನ್ನು ಕೇಳಿದರು. ನಂತರ ಸಂತೋಷದಿಂದ ಇಬ್ಬರೂ ಹೊರಗೆ ಬಂದರು. ಫಿಲಿಪ್, ತಾವು ಹಿಂದೆ ಸ್ವಪ್ನದಲ್ಲಿ ಬಾಬಾರನ್ನು ನೋಡಿದ್ದಾಗಿ ಹೇಳಿದ.

ಈ ಘಟನೆಯ ಕೆಲವು ದಿನಗಳ ನಂತರ ಶ್ರೀ ಶ್ರೀ ಜಗದ್ಧಾತ್ರೀ ಪೂಜೆಯ ಶುಭದಿನದಂದು ಹೋಮ ಮಾಡಿ, ಬಾಬಾ ಫಿಲಿಪ್‌ಗೆ ಬ್ರಹ್ಮಚರ್ಯ ದೀಕ್ಷೆಯನ್ನಿತ್ತು 'ಪರಮಚೈತನ್ಯ' ಎಂದು ನಾಮಕರಣ ಮಾಡಿದರು. ಕ್ಷೌರ ಮಾಡಿಸಿಕೊಂಡು, ಬೋಳುತಲೆಯ ಫಿಲಿಪ್ ಶುಭ್ರ ಧೋತಿ – ಉತ್ತರೀಯವನ್ನು ಉಟ್ಟುಕೊಂಡು, ಬ್ರಹ್ಮಚಾರಿಯ ವೇಷದಲ್ಲಿ ವಿಶಿಷ್ಟವಾಗಿ ಕಾಣಿಸುತ್ತಿದ್ದ. ಈಗತಾನೆ ಹುಟ್ಟಿದ ಹಸುಗೂಸಿನ ಚಂಚಲತೆ ಹಾಗೂ ಆನಂದದಿಂದ ಕೂಡಿದ ಆತ ಆಶ್ರಮವನ್ನೆಲ್ಲ ಸುತ್ತಾಡುತ್ತಾ 'I am baba's youngest child' ಎಂದು ಮತ್ತೆ ಮತ್ತೆ ಹೇಳುತ್ತಿದ್ದ. ಸಂಜೆ ಅವನು ಠಾಕೂರರ ಮಂದಿರದ ಬಳಿ ಕೈಜೋಡಿಸಿ ಮೌನವಾಗಿ ಕುಳಿತಿರುತ್ತಿದ್ದ; ಕೆಲವೊಮ್ಮೆ ಯಾವುದಾದರೂ ಮರದ ಕೆಳಗೆ ಕುಳಿತು ಧ್ಯಾನ ಮಾಡುತ್ತಿದ್ದ. 'I must realize myself while in India. This is a great country. How you love so much, I wonder! So much love I have never found anywhere' ಎನ್ನುತ್ತಿದ್ದ. *('ಭಾರತದಲ್ಲಿರುವಾಗಲೇ ನಾನು ಆತ್ಮಜ್ಞಾನವನ್ನು ಪಡೆಯಬೇಕು. ಇದೊಂದು ಮಹಾನ್ ದೇಶ. ನೀವು ಎಷ್ಟೊಂದು ಪ್ರೀತಿಸುತ್ತೀರಿ, ಎಂಬುದನ್ನು ಕಂಡು ನನಗೆ ಆಶ್ಚರ್ಯವಾಗುತ್ತದೆ. ಇಂತಹ ಪ್ರೀತಿಯನ್ನು ನಾನೆಂದೂ, ಎಲ್ಲೂ ಪಡೆದಿಲ್ಲ.')*

ಫಿಲಿಪ್ ಬಳಿ ಸರಿಯಾದ ಹಾಸಿಗೆಯಿರಲಿಲ್ಲ. ಒಂದು ಕಂಬಳಿಯ ಮೇಲೆ ಉತ್ತರೀಯವನ್ನು ಹಾಸಿ, ತಲೆಗೆ ಕೈಯನ್ನಿಟ್ಟುಕೊಂಡು ಮಲಗುತ್ತಿದ್ದ. ಅವನು ಒಂದು ಉದ್ದವಾದ ಬಟ್ಟೆಯ ಉತ್ತರೀಯವನ್ನು ಹೊದ್ದುಕೊಳ್ಳುತ್ತಿದ್ದ. ಬೆಚ್ಚನೆಯ ಉಡುಪುಗಳ ಮಧ್ಯದಲ್ಲಿ ಕೋಟ್ ಮತ್ತು ಪ್ಯಾಂಟ್ ಇತ್ತು.

ಒಂದು ದಿನ ಬೆಳಿಗ್ಗೆ ಹತ್ತಿಯ ಶರ್ಟನ್ನು ಹಾಕಿಕೊಂಡು ಫಿಲಿಪ್ ಕೋಣೆಯಲ್ಲಿ ಮಂಚದ ಮೇಲೆ ಕೂತು ಧ್ಯಾನಮಾಡುತ್ತಿದ್ದ. ಹಿಂದಿನಿಂದ ಬಾಬಾ ಬಂದು ತಮ್ಮ ಹೊಸದಾದ ಬಿಳಿಯ ಉಣ್ಣೆಯ ಶಾಲನ್ನು ಫಿಲಿಪ್‌ಗೆ ಹೊದಿಸಿ ನಗತೊಡಗಿದರು. ಅವರ ತಲೆಗೂದಲು ಜಡೆಯಂತೆ ನೇತಾಡುತ್ತಿದ್ದು, ಬಾಬಾ ತುಂಬ ವಿಶಿಷ್ಟವಾಗಿ ಕಾಣಿಸುತ್ತಿದ್ದರು.

ಅಂದು ಸಂಜೆ ಫಿಲಿಪ್ ಮೃದುಸ್ವರದಲ್ಲಿ ಭಕ್ತನಿಗೆ ಹೇಳತೊಡಗಿದ: ''Do you know who baba is? Baba is Shiva, isn't it?'' ಭಕ್ತನು ವಿಸ್ಮಯಗೊಂಡು ಆನಂದದಿಂದ ಮೌನವಾಗಿ ಹೌದೆಂಬಂತೆ ಸ್ವಲ್ಪ ತಲೆಯನ್ನಾಡಿಸಿದ.

ಒಂದು ಸಂಜೆ ಬಾಬಾ ಹಿಂದಿನ ಕತೆಗಳನ್ನು ಹೇಳುತ್ತಾ ಸಾಧನೆ, ತ್ಯಾಗ, ವೈರಾಗ್ಯಗಳ ವಿಷಯವಾಗಿ ಅನೇಕ ವಿಚಾರಗಳನ್ನು ಹೇಳಿದರು: ''ಹರಿದ್ವಾರ, ಹೃಷೀಕೇಶಗಳಲ್ಲಿ ಮಧುಕರಿ ಭಿಕ್ಷೆ ಮಾಡುತ್ತಿದ್ದೆ. ಛತ್ರದಲ್ಲಿ ಗಂಟೆ ಹೊಡೆದು ಬಹಳ ಹೊತ್ತಾದ ನಂತರವೇ ಹೋಗುತ್ತಿದ್ದೆ. ಮಾಯಿ ಹೇಳುತ್ತಿದ್ದಳು, 'ಗಂಟೆ ಕೇಳಿಸಲಿಲ್ಲವೆ?' ನಾನೆನ್ನುತ್ತಿದ್ದೆ, 'ಗಂಟೆಯನ್ನು ಕೇಳಲೇ, ಧ್ಯಾನ ಮಾಡಲೇ ಮಾಯಿ?' ಆಗ ಆಕೆ, 'ಏನಿಲ್ಲ, ಈಗ ಸ್ವಲ್ಪ ಕಾಯಬೇಕಾಗುತ್ತದಷ್ಟೆ' ಎನ್ನುತ್ತಿದ್ದಳು.

''ನಾವು ಪರ್ವತದಲ್ಲಿದ್ದಾಗ ಎಲ್ಲವನ್ನೂ ಮರೆಯುತ್ತಿದ್ದೆವು. ಆದರೆ ಠಾಕೂರರು ನಮ್ಮನ್ನು ಈ ಸಂಸಾರದಲ್ಲಿ ತೊಡಗಿಸಿರುವಾಗ, ಸಂಸಾರಿಗಳೂ ಸೋಲುವಂತೆ ಕೆಲಸ ಮಾಡಬೇಕು. ಸಣ್ಣಪುಟ್ಟ ಕೆಲಸಗಳನ್ನೂ ಮಾಡಬೇಕು – ನೀನೇ ನೋಡುತ್ತಿರುವೆಯಲ್ಲ?''

ಯಾವುದೋ ಒಂದು ವಿಷಯಕ್ಕೆ ಒಬ್ಬ ಹೇಳಿದ, 'ನೆನಪಿರುವುದಿಲ್ಲ' ಎಂದು. ಬಾಬಾ ದನಿಯೇರಿಸಿ, ''ನನಗೂ ನೆನಪಿರುತ್ತಿರಲಿಲ್ಲ. ಟಿಬೆಟ್ಟಿನಲ್ಲಿ ಬಂಗಾಳಿ ಮರೆತುಬಿಟ್ಟಿದ್ದೆ. ನಂತರ ನಿಧಾನವಾಗಿ ನೆನಪಿಗೆ ಬರುತ್ತಿತ್ತು. ಹಾಗೆಯೇ ಜ್ಞಾಪಿಸಿಕೊಂಡರೆ ಜ್ಞಾಪಕವಿರುತ್ತದೆ.''

ವೈರಾಗ್ಯದ ವಿಷಯ ಬಂದಾಗ ಬಾಬಾ ಹೇಳಿದರು: '' **'ಯದಹರೇವ ವಿರಜೇತ್ ತದಹರೇವ ಪ್ರವ್ರಜೇತ್'** ಎಂದು ಬೃಹದಾರಣ್ಯಕ ಉಪನಿಷತ್‌ನಲ್ಲಿದೆ. ವೈರಾಗ್ಯ ತಳೆಯುವುದಕ್ಕೆ ದಿನ, ಕ್ಷಣಗಳಿಲ್ಲ. ವಯಸ್ಸನ್ನು ಯಾರೂ ಹಿಡಿದಿಟ್ಟುಕೊಳ್ಳಲಾರರು. **'ನಿರ್ಗಚ್ಛತಿ ಜಗಜ್ಜಾಲಾತ್ ಪಿಂಜರಾದಿವ ಕೇಸರೀ'** ಎಂದು *ವಿವೇಕ ಚೂಡಾಮಣಿ* ಯಲ್ಲಿ ಆಚಾರ್ಯ ಶಂಕರರು ಹೇಳುತ್ತಾರೆ. ಇವೆಲ್ಲ ವೈರಾಗ್ಯದ ಬಗ್ಗೆ ಹೇಳಿರುವ ಮಾತುಗಳು. ವೈರಾಗ್ಯವುಂಟಾದರೆ ಎಲ್ಲವನ್ನೂ ತ್ಯಜಿಸಿ ಹೊರಟುಹೋಗುತ್ತಾನೆ; ಯಾವ ದಿಕ್ಕಿನಲ್ಲೇ ಆಗಲಿ, ಪೂರ್ವ, ಪಶ್ಚಿಮ, ಉತ್ತರ – ಯಾವ ದಿಕ್ಕಿಗಾದರೂ ಸರಿ.

ಮತ್ತೆ ಹೀಗೆ ಹೇಳಿದೆ, **'...ಭಿಕ್ಷಾಚರ್ಯಮ್ ಚರಂತಿ'** ಭಿಕ್ಷೆಗೆ ನಿಯಮವಿದೆ, ಭಿಕ್ಷೆಗೆ ಯಾವಾಗೆಂದರೆ ಆವಾಗ ಹೋಗುವುದಲ್ಲ. ಮನೆಯಲ್ಲಿ ಎಲ್ಲರ ಊಟವೂ ಆದ ನಂತರ ಹೋಗಬೇಕು. ಅಗ್ನಿಯನ್ನಾರಿಸಿ, ಎಂಜಲು ಎತ್ತಿಯಾಗಿದೆ; ಆಗ ಎಷ್ಟು ಸಿಕ್ಕಿತೋ ಅಷ್ಟರಲ್ಲಿ ಸಂತುಷ್ಟನಾಗಬೇಕು.''

ಸಂಜೆಯ ನಂತರ ಬಾಬಾ ಬೂಕರ್ ವಾಷಿಂಗ್ಟನ್‌ನ ವಿಷಯ ಹೇಳುತ್ತಿದ್ದಾರೆ: ''ಅವನಿಗೆ ಆಂಗ್ಲ ತಂದೆ, ನೀಗ್ರೋ ತಾಯಿ. 'Up from slavery' ಓದಿದ್ದೀಯಾ? ಅವನ ಸೇವೆ ಹಾಗೂ ಶಿಕ್ಷಣದ ವಿಚಾರ: ಆತ ತನ್ನ ಕೈಯಿಂದಲೇ ಇಟ್ಟಿಗೆಗಳನ್ನು ತಯಾರಿಸಿ ಶಾಲೆಯ ಕಟ್ಟಡ ನಿರ್ಮಿಸಿದ. ಇಟ್ಟಿಗೆಯ ಆವಿಗೆ ಸುಡಲಾಗುತ್ತಿಲ್ಲ – ಮತ್ತೆ ಮತ್ತೆ ಸೋಲು. ಕೊನೆಗೆ ಎಲ್ಲವೂ ಆಗಿಬಿಟ್ಟಿತು. ಆತನೊಬ್ಬ mission (ಮಹಾನ್ ಉದ್ದೇಶ) ಇಟ್ಟುಕೊಂಡು ಜನ್ಮ ತಳೆದವನು. ಅವನನ್ನು ಏನು ತಾನೆ ತಡೆಯಬಲ್ಲುದು? ಅಥವಾ ಕುಗ್ಗಿಸಬಲ್ಲುದು? ಅವನು ನಿಶ್ಚಲ. ಶರತ್ ಮಹಾರಾಜರು ಆ ಪುಸ್ತಕವನ್ನು ನನಗೆ ಕೊಟ್ಟು, 'ತಮ್ಮಾ, ಮಹುಲಾದ ಗುಡಿಸಿಲಿನಲ್ಲಿ ನಿನ್ನ ಸೇವಾ ಕಾರ್ಯ ಹೇಗೆ ಆರಂಭವಾಯಿತೋ, ಇದೂ ಹಾಗೆಯೇ' ಎಂದರು.

''ಒಮ್ಮೆ ಪ್ರೆಸಿಡೆಂಟ್ ರೂಸ್‌ವೆಲ್ಟ್ ಜತೆ ಅವನು ಊಟ ಮಾಡುತ್ತಿದ್ದ. ಅದಕ್ಕೆ ಎಲ್ಲರೂ ರೂಸ್‌ವೆಲ್ಟ್‌ರನ್ನು ಹೊಡೆಯಲು ಹೋದರು.

''ಇಲ್ಲಿ ಒಬ್ಬ ವಿದೇಶೀ ಮ್ಯಾಜಿಸ್ಟ್ರೇಟ್ ನನಗೆಂದ, 'ನೀವು ಮನುಷ್ಯರನ್ನು ಕೀಳಾಗಿ ನೋಡುತ್ತೀರಿ.' ನಾನು ಅವನ ಮುಖದ ಮೇಲೆ ಹೇಳಿದೆ, 'ನೀವು ಆ ರೀತಿ ಮಾಡುವುದಿಲ್ಲವೆ?' ಬಳಿಕ ಮೇಲಿನ ದೃಷ್ಟಾಂತವನ್ನು ಹೇಳಿದೆ. ಆಗ ಅವನು ಸುಮ್ಮನಾದ. ಕೊನೆಗೆಂದ, 'Christianity is not yet ripe in America' (ಕ್ರೈಸ್ತಧರ್ಮ ಅಮೇರಿಕಾದಲ್ಲಿ ಇನ್ನೂ ಪರಿಪಕ್ವವಾಗಿಲ್ಲ). ಏನೇ ಇರಲಿ, ಅಂದಿನಿಂದ ಆತ ನನ್ನ ಮಿತ್ರನಾದ. ನಾನು ನಿಜವನ್ನೇ ಹೇಳಿಬಿಡುತ್ತೇನಲ್ಲ! ಅದು ಆಂಗ್ಲರ ಸ್ವಭಾವ. ಬಂಗಾಳಿಗೇನಾದರೂ ನಿಜವನ್ನು ಹೇಳು, ಜೀವನ ಪರ್ಯಂತ ಅವನು ನಿನ್ನ ಶತ್ರುವಾಗುತ್ತಾನೆ.

* * *

''ಜಪಾನ್ ಅದೆಷ್ಟು ಸುಂದರ! 'ಚಿತ್ರವನ್ನು ರಚಿಸಿದಂತೆ' ಎಂದು ಸ್ವಾಮೀಜಿ ಬರೆಯುತ್ತಾರೆ. ಪಟ್ಟಣ, ಗ್ರಾಮಗಳಿಗೆ ವ್ಯತ್ಯಾಸವಿಲ್ಲ – ಎಲ್ಲ ಒಂದೇ ರೀತಿ. ರಸ್ತೆಗಳೆಲ್ಲ ನಾಜೂಕಾಗಿವೆ. ಅವುಗಳ ಇಬ್ಬದಿಯಲ್ಲೂ ಸುಂದರವಾದ ಪುಟ್ಟ ಪುಟ್ಟ ಮನೆಗಳು – ಸುತ್ತಲೂ ಹೂದೋಟಗಳು. ಹೂವಿನ ಟಬ್‌ನಲ್ಲಿ ಹೂಗಳು, ಹಣ್ಣಿನ ಮರಗಳಲ್ಲಿ ಹಣ್ಣುಗಳು.''

* * *

ಮತ್ತೆ ಬಾಬಾ ಹಿಂದಿನ ಪ್ರಸಂಗಕ್ಕೆ ಮರಳಿದರು. ''ನಮ್ಮ ರಾಜರುಗಳಿಗಿಂತ ಆಂಗ್ಲರ ಆಳ್ವಿಕೆಯೇ ಎಷ್ಟೋ ಮೇಲು. ಇವರ ಆಳ್ವಿಕೆಯನ್ನು ಕುರಿತು ಟೀಕೆ ಮಾಡಬಹುದು. ಎಷ್ಟೋ ಜನ ಮಾಡುತ್ತಾರೆ ಕೂಡ. ಆದರೆ ಅವರ ಬಗ್ಗೆ ಸ್ವಲ್ಪವೇನಾದರೂ ಹೇಳಿದರೆ ಗುಪ್ತಚರರು ಇರುತ್ತಾರೆ, ರಿಪೋರ್ಟ್ ಆಗಿಬಿಡುತ್ತದೆ. ಆಮೇಲೆ ವಿಚಾರಣೆ, ಚರ್ಚೆ ಏನೂ ಇಲ್ಲ. ಅಂಧಕೂಪದಲ್ಲಿ ಮೃತ್ಯುವಿನ ದಿನಗಳನ್ನೆಣಿಸುವುದು ಅಷ್ಟೆ. ಇದು ಈಗ ಹೆಚ್ಚಾಗಿದೆ. ಮೊದಲು ಇಷ್ಟೊಂದು ಇರಲಿಲ್ಲ. ಬ್ರಿಟಿಷ್ ರಿಜೆಂಟ್ ಇದ್ದೇ ಇದ್ದಾರೆ, ಅವರಿಗೆ ಎಲ್ಲ ಗೊತ್ತಿದೆ, ಅವರು ಎಲ್ಲವನ್ನೂ ನೋಡಿರುತ್ತಾರೆ.''

ಕೆಲವು ದಿನಗಳಿಂದ ಬಾಬಾರಿಗೆ ಕೆಲವರು ಸೇವಕರು ಹಳ್ಳಿಗಳಿಗೆ ಹೋಗಿ ಮಾಯಾಲಾಂದ್ರದ ಸಹಾಯದಿಂದ ಹಳ್ಳಿಗರಿಗೆ ವಿಷಯಗಳನ್ನು ತಿಳಿಸಿಕೊಡಬೇಕೆಂಬ ಇಚ್ಛೆಯಾಗಿದೆ. ಮೊದಲು ಹೋಗಬೇಕಾದುದು ಅಡವಾನಿ ಗ್ರಾಮದ ಶೋಕಸಂತಪ್ತನಾದ ಮುಸಲ್ಮಾನ ಭಕ್ತನ ಮನೆಗೆ. ಅದಕ್ಕಾಗಿ ಮಾಯಾಲಾಂದ್ರವನ್ನು ಸಿದ್ಧಗೊಳಿಸಲಾಗಿದೆ. ಅಮೆರಿಕನ್ ಬ್ರಹ್ಮಚಾರಿ ಇಂಜಿನಿಯರ್ ಎಲ್ಲವನ್ನೂ ತಯಾರು ಮಾಡಿದ್ದಾನೆ. ಇಂದು ಸಂಜೆ ಹಾಲ್‌ನ ಪಶ್ಚಿಮ ಗೋಡೆಯಲ್ಲಿ ಪರದೆಯನ್ನು ಹಾಕಲಾಗಿದೆ. ಬ್ರಹ್ಮಚಾರಿ ನಿರ್ಭಯ ಚೈತನ್ಯ ಸ್ಲೈಡನ್ನು ಹಾಕಿ ವಿವರಿಸುತ್ತಿದ್ದಾರೆ. ಹಾಲ್‌ನ ಪೂರ್ವಕ್ಕೆ ಬಾಬಾ ಬೆತ್ತದ ಕುರ್ಚಿಯಲ್ಲಿ ಕುಳಿತಿದ್ದಾರೆ, ಇಬ್ಬರು ಸೇವಕರು ಅವರ ಎರಡೂ ಕಾಲಿನ ಗಂಟುಗಳಿಗೆ ಔಷಧಿ ಹಚ್ಚಿ ಮಾಲಿಷ್ ಮಾಡುತ್ತಿದ್ದಾರೆ.

ಲಾಟೀನನ್ನು ಪರೀಕ್ಷಿಸಲು ಮೊದಲು ಸ್ವಾಮಿ ವಿವೇಕಾನಂದರ ಭಾವಚಿತ್ರವನ್ನು ಪರದೆಯ ಮೇಲೆ ತೋರಿಸಲಾಯಿತು. ಬಹಳ ಚೆನ್ನಾಗಿ ಫೋಕಸ್ ಆದಾಗ ಬಾಬಾ ಅತ್ಯಂತ ಸಂತೋಷದಿಂದ, ''ನೋಡಿದೆಯಾ, ಎಂಥ ಅದ್ಭುತ ಮೂರ್ತಿ!'' ಎಂದರು. ಬಾಬಾ ಅವರ ಧೃಡವಾದ ನಿಲುವು ಹಾಗೂ ತೇಜೋಮಯವಾದ ಮುಖಭಾವವನ್ನು ಗಮನಿಸಿದ ಎಲ್ಲರಿಗೂ ಅನ್ನಿಸಿತು, ಸ್ವಾಮೀಜಿಯವರ ಭಾವವನ್ನು ಅವರು ತುಂಬಿಕೊಂಡಿದ್ದರಿಂದಲೇ ಅವರಿಬ್ಬರ ಮುಖಮಂಡಲದಲ್ಲಿ ಅಷ್ಟೊಂದು ಹೋಲಿಕೆ ಕಂಡುಬರುತ್ತಿದೆ ಎಂದು.

ಸ್ವಲ್ಪ ಸಮಯದ ನಂತರ ಬಾಬಾ ಹೇಳಿದರು: ''ನೋಡು, ಸ್ವಾಮೀಜಿಯನ್ನು ಕಾಣುವುದು, ಠಾಕೂರರನ್ನು ಕಾಣುವುದು ಸುಲಭವಲ್ಲ. ಈ ಕಾಲದ ಜನರು ಸ್ವಾಮೀಜಿಯವರ ಮೂಲಕವೇ ಠಾಕೂರರನ್ನು ಅರಿತುಕೊಳ್ಳುವರು. ಜನ ಸ್ವಾಮೀಜಿಯವರ ವಿಚಾರಧಾರೆಯನ್ನೇ ಮೊದಲು ಸ್ವೀಕರಿಸುತ್ತಾರೆ, ಹೆಚ್ಚಾಗಿ ಸ್ವೀಕರಿಸುತ್ತಿದ್ದಾರೆ – ಇದನ್ನು ನೀನೇ ನೋಡುತ್ತಿರುವೆಯಲ್ಲ. ಸೇವಾಕಾರ್ಯಗಳು, ದೇಶಪ್ರೇಮ ಇವುಗಳ ಮೂಲಕವೇ ನೆಲ ಹಸನಾಗಿದೆ. ಅನಂತರವೇ spiritual (ಆಧ್ಯಾತ್ಮಿಕತೆ).'' ಅತ್ತ ಸ್ವಾಮೀಜಿಯ 'ಸ್ವದೇಶಮಂತ್ರ' ತೆರೆಯ ಮೇಲೆ ಕಾಣಿಸುತ್ತಿದೆ...ಓದಲಾಗುತ್ತಿದೆ – 'ಹೇ ಭಾರತವೆ, ಮರೆಯಬೇಡ...' ಇತ್ಯಾದಿ. ಓದು ಮುಗಿದ ಮೇಲೆ ಎಲ್ಲರೂ ಮೌನ, ಗಂಭೀರ ಭಾವವನ್ನು ತಳೆದರು. ನಂತರ ಬಾಬಾ ಹೇಳಿದರು, ''ಸ್ವಾಮೀಜಿಯವರು ಹೇಳಿದ 'ಸ್ವದೇಶಪ್ರೇಮ' ಸುಲಭವಲ್ಲ. ಇದು patriotism ಅಲ್ಲ; ಇದು ದೇಶಾತ್ಮಬೋಧೆ. ಜನರಿಗಿರುವುದು ದೇಹಾತ್ಮಬೋಧೆ. ಆದ್ದರಿಂದ ಅವರು ದೇಹದ ಸೇವೆ

ಯಲ್ಲಿಯೇ ಮುಳುಗಿದ್ದಾರೆ. ಇದು ದೇಶಾತ್ಮಬೋಧೆ – ಇಡೀ ದೇಶದ ಭೂತ, ಭವಿಷ್ಯತ್, ವರ್ತಮಾನದ ಚಿಂತೆ ಇಲ್ಲಿನದು. ಇದಕ್ಕೆ ಕೊನೆಯಲ್ಲ, ಇದರ ನಂತರ ವಿಶ್ವಾತ್ಮಬೋಧೆ ಅಂದರೆ ಎಲ್ಲರಿಗೋಸ್ಕರ ಚಿಂತಿಸುವ ಮನೋಭಾವ ಬರುತ್ತದೆ.''

ದೀರ್ಘಕಾಲದ ಮೌನ ಕಳೆದ ನಂತರ ಒಬ್ಬ ಕೇಳಿದ, ''ಇಷ್ಟು ದಿನಗಳಿಂದ ಎಷ್ಟೊಂದು ಕೆಲಸಗಳಾಗುತ್ತಿವೆ; ಜನಸಾಮಾನ್ಯರ ಉದ್ಧಾರವಾಗುತ್ತಿದೆಯೆ?'' ಬಾಬಾ ಹೇಳಿದರು, ''ಏನೇನು ಕೆಲಸ ಕಾರ್ಯಗಳು ಆಗಬೇಕಿತ್ತು ಎಂಬುದಕ್ಕೆ ಹೋಲಿಸಿದರೆ, ಏನು ಕೆಲಸ ವಾಗುತ್ತಿದೆ? ಈ ವಿಶಾಲ mass (ಜನಸಂಖ್ಯೆ) ಎಂಬುದು ಸ್ವಾಮೀಜಿ ಹೇಳುತ್ತಿದ್ದ sleeping leviathan (ನಿದ್ರೆಗೈದ ಜಲ ಚರ) ಎಂಬಂತೆ. ಇದನ್ನು ಎಚ್ಚರಗೊಳಿಸುವುದು ಅಪ್ರಯೋಜಕವೆ? ನಿಧಾನವಾಗಿ In spirit of sympathy and service (ಸಹಾನುಭೂತಿ–ಸೇವಾಭಾವದಿಂದ) ಅದನ್ನು ಸ್ಪರ್ಶಿಸಬೇಕು. ಆಗ ಅದು ಇದ್ದಕ್ಕಿದ್ದಂತೆಯೆ ಚೇತನಗೊಳ್ಳುತ್ತದೆ – ಆಗಾಗ ಹಾಗೆ mass response (ಜನಜಾಗೃತಿ) ಉಂಟಾಗುತ್ತಿದೆ. ಯಾರನ್ನು politician (ರಾಜಕಾರಣಿ) ಎಂದು ಕರೆಯುತ್ತಾರೋ ಅವರಿಗೆ ವಿಶೇಷವಾದ, ಯಾವುದೇ ನಿರ್ದಿಷ್ಟ ಬೆಲೆ ಎಂಬುದು ಇರುವುದಿಲ್ಲ. Mass awakening (ಜನಜಾಗೃತಿ) ಎಂಬುದು slow and sure (ನಿಧಾನ ಹಾಗೂ ನಿಶ್ಚಯವಾಗಿ) ನಡೆಯುತ್ತದೆ – ಜಪಾನ್, ರಷ್ಯಾ, ತುರ್ಕಿ ಹಾಗೂ ಚೀನಾ ದೇಶಗಳಲ್ಲಿ ಸನ್–ಯತ್–ಸೇನ್ ಹಾಗೂ ಕೆಮಾಲ್ ಪಾಷಾ ಮೊದಲಾದವರಿಂದ ಆದ ಹಾಗೆ. ಸ್ವಾಮೀಜಿಯವರ ಗುರಿ ಕೂಡ mass education (ಸಾರ್ವಜನಿಕ ಶಿಕ್ಷಣ). ಅದಕ್ಕೆ ಅವರು ಅಡಿಪಾಯ ಹಾಕಿ ಹೋಗಿದ್ದಾರೆ; ಅದು ಕ್ರಮೇಣ ಆಗುತ್ತದೆ. ಶವವನ್ನು ಸಚೇತನಗೊಳಿಸುವುದು ಅಷ್ಟು ಸುಲಭವೆ? ಸಾವಿರ ವರ್ಷಗಳ slaves (ಗುಲಾಮರು)?

''ಆದರೆ ನಾವೇ ಮೊದಲಿಗರು – ಗ್ರಾಮಗ್ರಾಮಗಳಲ್ಲಿ ಪ್ರತಿಯೊಂದು ಗುಡಿಸಲನ್ನೂ ಸುತ್ತಿದ್ದೇವೆ. ಸಂನ್ಯಾಸಿಗಳಾಗಿ, ಧರ್ಮದ ಮಾತುಗಳನ್ನಾಡದೆ, ಸಾಮಾನ್ಯ ಜ್ಞಾನದ ವಿಷಯಗಳನ್ನು ಹೇಳುತ್ತಾ ಹೋಗಿದ್ದೇವೆ. ನೀರನ್ನು ಶುದ್ಧೀಕರಿಸಿ ಕುಡಿಯಬೇಕು, ವಿನಾಶಕಾರಿ ರೋಗಗಳು ಇರುವಾಗ ಸಾಧ್ಯವಾದರೆ ನೀರನ್ನು ಕುದಿಸಬೇಕು ಇತ್ಯಾದಿ ಆರೋಗ್ಯ ರಕ್ಷಣೆಯ ಮಾತುಗಳು; ಆರ್ಥಿಕ ಸ್ಥಿತಿಯನ್ನು ಸ್ವಲ್ಪ ಮಟ್ಟಿಗಾದರೂ ಸುಧಾರಿಸುವ ಬಗೆ, ಊಟ–ವಸ್ತ್ರಗಳ ವ್ಯವಸ್ಥೆ ಮಾಡುವ ಬಗೆ, ಇತ್ಯಾದಿ. ಕಷ್ಟಕಾಲಕ್ಕಾಗಿ ಕಿಂಚಿತ್ತಾದರೂ ಉಳಿತಾಯ ಮಾಡಬೇಕು ಎಂಬುದಾಗಿಯೂ ಹೇಳಿದ್ದೇವೆ. ಆಶ್ರಮದಲ್ಲಿ ಎಷ್ಟು ಮಂದಿ ಕೋಸು ಬೆಳೆಯುವುದನ್ನು ಕಲಿತರು! ರೇಷ್ಮೆ ಸಾಕಣೆಗೆ ಮೊದಲ ಪ್ರೇರಣೆ ಕೊಟ್ಟವರು ನಾವೇ. ಆಶ್ರಮ ದಲ್ಲಿ ಎಷ್ಟು ದಿನ ಈ ಕೆಲಸ ನಡೆಯಿತು! ಕೆಲಸದವರು ಅವರ ಕೂಲಿ ಯಲ್ಲಿ ಉಳಿದದ್ದನ್ನು ಕಷ್ಟಕಾಲಕ್ಕೆಂದು ನನ್ನ ಬಳಿ ಜಮೆ ಮಾಡು ತ್ತಿದ್ದರು. ಈಗಲೂ ಅನೇಕರ ಸಂಬಳದಲ್ಲಿ ಸ್ವಲ್ಪ ಜಮಾ ಇಟ್ಟು ಕೊಳ್ಳುತ್ತೇನೆ – 'ಜಮಾ ಆಗಲಿ ಬಿಡು, ಕೆಲಸ ಮಾಡಲಾಗದ ದಿನ ತೆಗೆದುಕೊ' ಎನ್ನುತ್ತೇನೆ.

''ಶರತ್ ಚಟರ್ಜಿಯ ತಮ್ಮ ವೇದಾನಂದ ಅನೇಕ ದಿನ ಇಲ್ಲಿದ್ದ. ಶರತ್ ಬಾಬು ಒಮ್ಮೆ ನನ್ನನ್ನು ಭೇಟಿಯಾಗಲು ಬಲರಾಮ ಮಂದಿರಕ್ಕೆ ಬಂದರು. ಅವರು ಮಹಾರಾಜ್ (ಸ್ವಾಮಿ ಬ್ರಹ್ಮಾನಂದ) ರನ್ನು ಭೇಟಿಯಾಗಿ, ' ಸ್ವಾಮಿ ಅಖಂಡಾನಂದರು ಇಲ್ಲಿದ್ದಾರೆಯೆ?' ಎಂದು ಕೇಳಿದರು. ಬಳಿಕ ನನ್ನ ಬಳಿಗೆ ಬಂದು, 'ನಾನು ಸಾಧು–ಸಂನ್ಯಾಸಿಗಳನ್ನು ನೋಡಲು ಬಂದಿಲ್ಲ. ನೀವು ಮನುಷ್ಯರನ್ನು ಪ್ರೀತಿಸುತ್ತೀರೆಂದೂ, ಗುಡಿಸಲುಗಳಿಗೆ ಹೋಗುತ್ತೀರೆಂದೂ ಕೇಳಿ ದ್ದೇನೆ; ಆದ್ದರಿಂದ ತಮ್ಮನ್ನು ನೋಡಲು ಬಂದೆ. ನೀವು ಯಾವ ಭಾವದಿಂದ ಕೆಲಸ ಮಾಡುತ್ತೀರೋ, ಅದೇ ಭಾವದಿಂದ ನಾನು ಅಂಥ ಭಾವವನ್ನು ಹರಡಲು ಪುಸ್ತಕಗಳನ್ನು ಬರೆದಿದ್ದೇನೆ, ಕತೆಗಳನ್ನು ಬರೆದಿದ್ದೇನೆ' ಎಂದರು. ನಂತರ ಅವರ ಅನೇಕ ಪುಸ್ತಕಗಳನ್ನು ಕಳು ಹಿಸಿದರು. ಕೆಲವು ನನಗೆ ಹಿಡಿಸಿದವು – 'ಪಲ್ಲೀಸಮಾಜ', 'ಪಂಡಿತ ಮಹಾಶಯ' ಇವು. ಮಿಕ್ಕವು 'ಮೂಲಂಗಿ ತೇಗಿದ ವಾಸನೆ'ಯಿಂದ (ಪ್ರಾಪಂಚಿಕತೆಯಿಂದ) ಕೂಡಿದವು.''

* * *

ಭಕ್ತನೊಬ್ಬನ ಪತ್ರಕ್ಕೆ ಉತ್ತರವಾಗಿ ಸ್ವಾಮಿ ಅಖಂಡಾನಂದರು, ''ಎಷ್ಟು ಸಾಧ್ಯವೋ ಅಷ್ಟು , ಯಾವಾಗ ಸಾಧ್ಯವೋ ಆಗ ಜಪ ಮಾಡು. ಅದಕ್ಕೆ ಸಮಯ–ಅಸಮಯ, ಸ್ಥಾನ–ಅಸ್ಥಾನವೆಂದಿಲ್ಲ. ಧ್ಯಾನ ಸಹಜವಾಗಿ ನಡೆಯುತ್ತಿದೆಯೆ?

''ಮನಸ್ಸು ಚಂಚಲವಾಗಿಯೇ ಇರುತ್ತದೆ. ಗೀತೆಯಲ್ಲಿ ಹೇಳಿದ ಮಾತು ಗೊತ್ತಲ್ಲವೆ? **'ಚಂಚಲಂ ಹಿ ಮನಃ ಕೃಷ್ಣ'** – ಅದಕ್ಕೆ ಉತ್ತರ: **'ಅಭ್ಯಾಸೇನ ತು ಕೌಂತೇಯ ವೈರಾಗ್ಯೇನ ಚ ಗೃಹ್ಯತೇ।'** ಅಭ್ಯಾಸ, ತೀವ್ರ ವೈರಾಗ್ಯಗಳಿಲ್ಲದೆ ಏನೂ ಸಾಧ್ಯವಿಲ್ಲ. ಅತ್ತಿತ್ತ ಹೋಗುವುದೇ ಮನಸ್ಸಿನ ಸ್ವಭಾವ. ಕಠೋಪನಿಷತ್ತಿನಲ್ಲಿಲ್ಲವೆ, **'ಪರಾಂಚಿ ಖಾನಿ ವ್ಯತೃಣತ್ ಸ್ವಯಂಭೂಃ'** ಅಂತ? ನಮ್ಮ ಇಂದ್ರಿಯಗಳೆಲ್ಲವೂ ಬಹಿ ರ್ಮುಖವಾಗಿವೆ, ಹೊರಗಿನದನ್ನು ಅವಲಂಬಿಸಿಯೇ ಅವುಗಳನ್ನು ಅಂತರ್ಮುಖವಾಗಿಸಿಕೊಳ್ಳಬೇಕು. ಅದಕ್ಕಾಗಿಯೇ ನೈವೇದ್ಯ, ಧೂಪ–ದೀಪ, ಹೂವು–ಹಣ್ಣುಗಳು ಹೀಗೆ ಎಷ್ಟೊಂದಿವೆ! ಮನ ಸ್ಸನ್ನು ಆತನ ಕಾರ್ಯಕ್ಕಾಗಿ, ಆತನ ಬಳಿ ಮನಸ್ಸನ್ನು engage ಮಾಡಲು (ನಿಯುಕ್ತಗೊಳಿಸಲು) ಇವೆಲ್ಲ ಅಗತ್ಯ. ಮನುಷ್ಯನ ಮನಸ್ಸು ಭೋಗವನ್ನು ಅನುಭವಿಸಲು ಇಚ್ಛಿಸುತ್ತದೆ. ಅದನ್ನು divineನ (ದಿವ್ಯತೆ) ಕಡೆಗೆ ಅನುಗೊಳಿಸಬೇಕು. ಇಷ್ಟದೇವತೆಯನ್ನು ಒಲಿಸಿಕೊಳ್ಳುವ ಆಸೆಯಾದರೆ ಎಂದೂ ಅನಿಷ್ಟಗಳಾಗುವುದಿಲ್ಲ. ಶುಭಸಂಸ್ಕಾರಗಳು ಆಗುತ್ತಿರುತ್ತವೆ.

''ನೀನೇಕೆ ಧ್ಯಾನ ಮಾಡುವುದಿಲ್ಲ? ಒಂದು ವಿಷಯದ ಮೇಲೆ ಧ್ಯಾನ ಮಾಡಬೇಕು. ಬಹಳ ಹೊತ್ತು ಆರತಿ ಮಾಡುವಂತೆ, ದೀಪ ದಾರತಿ ಮುಗಿದ ಮೇಲೆ ಕರ್ಪೂರದಾರತಿ ಮಾಡು, ಚಾಮರ

ಬೇಸು; ಮುಗಿಸಲು ಇಷ್ಟವೇ ಇಲ್ಲವೆಂಬಂತೆ ನಿರಂತರ ಮಾಡು. ಬಹಳ ಸಮಯದ ನಂತರ, ಇನ್ನುಮೇಲೆ ಅದು ಇಷ್ಟವಾಗದಿದ್ದರೆ ಬಗೆಬಗೆಯ ಹೂಗಳ ಪುಷ್ಪಾಂಜಲಿಯನ್ನು ಅರ್ಪಿಸುತ್ತಿರುವಂತೆ ಭಾವಿಸು. ಹಲವು ಬಣ್ಣಗಳ ಹಾರವನ್ನು ತೊಡಿಸಿ, ಬೇರೆ ಬೇರೆ ತಿನಿಸುಗಳನ್ನು ನೈವೇದ್ಯ ಮಾಡುತ್ತಿರುವೆ, ಹೀಗೆ ಅವಿಚ್ಛಿನ್ನ ಭಾವನೆಗಳ ಧಾರೆ – ಇದೇ ಧ್ಯಾನ.

''ಮನಸ್ಸಿನಲ್ಲಿ ಕೊಳೆ ಏಳುವುದು ಸಹಜವೆ, ಕೋಣೆಯೊಳಗೆ ಧೂಳೇಳುತ್ತಿರುವಂತೆ. ಗುಡಿಸಿ, ನೀರು ಸಿಂಪಡಿಸಿ ಕೋಣೆಯನ್ನು ಒರೆಸಿ ಆ ಧೂಳನ್ನು ತೆಗೆದು ಶುಚಿಗೊಳಿಸಬೇಕು. ಕೆಲವು ಭಾವನೆಗಳನ್ನು ಹಠದಿಂದ ಗುಡಿಸಿ, ಮನಸ್ಸಿನಿಂದ ಹೊರಹಾಕಬೇಕು. ಕೆಲವನ್ನು ಕಂಬನಿಗರೆದು, ಪ್ರಾರ್ಥನೆಯ ಸಹಾಯದಿಂದ ದೂರ ತಳ್ಳಬೇಕು, ನೀರು ಸಿಂಪಡಿಸಿದರೆ ಧೂಳೆಲ್ಲ ಕೆಳಗೆ ಬರುವಂತೆ. 'ಪ್ರಭು, ನನ್ನ ಮನಸ್ಸಿನಲ್ಲಿ ಇಂಥ ಭಾವನೆಗಳೇಕೆ ಬರುತ್ತವೆ? ಈ ಭಾವನೆಗಳಿದ್ದರೆ ನೀನು ಬರಲಾರೆ. ನನ್ನ ಮನಸ್ಸನ್ನು ಶುದ್ಧಗೊಳಿಸು, ಪವಿತ್ರಗೊಳಿಸು. ಬಾ, ದರ್ಶನ ನೀಡು' ಎಂದು ಕಣ್ಣೀರು ಸುರಿಸುತ್ತಾ ಹೇಳಬೇಕು. ಠಾಕೂರರು ನಮಗೆ ಈ ರೀತಿ ಕಲಿಸಿಕೊಟ್ಟಿದ್ದರು.

''ರಾತ್ರಿಹೊತ್ತು ಜಪಮಾಡಲು ಆಸೆಯಿದೆಯೆ? ನಿದ್ರೆ ಬರುವುದೆ? ನಿದ್ರೆ ಬಂದರೆ ಮಲಗು. ಹೆಚ್ಚು ಜಪಮಾಡಲು ಆಸೆಯಾದರೆ ಎದ್ದು ಕುಳಿತುಕೊ, ಬಿರುಸಾಗಿ ನಡೆದಾಡು, ಜಪಕ್ಕೆ ಕುಳಿತಾಗ ನಿದ್ದೆ ಬಂದರೆ ಓಡಾಡುತ್ತ ಜಪಮಾಡು.

''ರಾತ್ರಿ ಸ್ವಲ್ಪ ಕಡಿಮೆ ತಿನ್ನಬೇಕು. ಸರ್ವದಾ ಪ್ರಾರ್ಥನೆಯ ಭಾವವನ್ನಿಟ್ಟುಕೊಳ್ಳಬೇಕು. ಉಚ್ಚ ಚಿಂತನೆಯ ಧಾರೆ ಸದಾ ಇರಬೇಕು. 'ನಾನು ಈ ಜೀವನದಲ್ಲೇ ಭಗವಂತನನ್ನು ನೋಡಬೇಕು' ಎಂಬ ಭಾವ ಅಗತ್ಯವಾಗಿರಬೇಕು. ಭಗವಂತನನ್ನು ಎಲ್ಲ ಬಗೆಯಿಂದಲೂ ಕರೆದು ಬೇಸತ್ತು ಹೋದಾಗ, 'ಅಮ್ಮಾ, ನಿನ್ನನ್ನು ಹೇಗೆ ತಾನೆ ಕರೆಯಲಿ? ಒಂದು ಕರೆಯಲ್ಲಿಯೇ ನಿನ್ನ ದರ್ಶನವನ್ನು ಪಡೆಯಲಾಗುವಂಥ ಕರೆಯನ್ನು ಕರೆಯಲು ಕಲಿಸಮ್ಮಾ,' ಎಂದು ಕೇಳಿಕೊಳ್ಳಬೇಕು.''

ಮಾತಿನ ಮಧ್ಯದಲ್ಲಿ ಶಿವ ಭಂಗಿ ಸೇದುವ ವಿಚಾರ ಬಂತು. ಬಾಬಾ ಹೇಳಿದರು, ''ಶಿವ ಗಾಂಜಾ ತಿನ್ನುತ್ತಾನೆ, ಭಂಗಿ ಸೇದುತ್ತಾನೆ ಎಂದೆಲ್ಲ ಜನರು ಹೇಳುತ್ತಾರೆ. ನಿಜವಾಗಿಯೂ ಅವನು ಇವನ್ನೆಲ್ಲ ಸೇವಿಸುತ್ತಾನೆಯೆ? ಖಂಡಿತ ಇಲ್ಲ, ತಿಂದರೂ ಏನೀಗ? ಯಾರಿಗೆ ಸಮುದ್ರಮಥನದ ವಿಷವನ್ನು ಕುಡಿಯಲು ಸಾಧ್ಯವೋ, ಅವನಿಗೆ ಇವೆಲ್ಲಾ ಏನು ಮಹಾ? ಇವೆಲ್ಲ ಅತ್ಯಂತ ತುಚ್ಛ, ನಿಜ ಸಂಗತಿ ಏನು ಗೊತ್ತೆ ? ಈ ವಿಷ ಕುಡಿದದ್ದನ್ನು, ದತ್ತೂರದ ಭಂಗಿ ಕುಡಿದದ್ದನ್ನು symbolise (ಸಂಕೇತವನ್ನಾಗಿ) ಮಾಡಿದ್ದಾರೆ.

* * *

ದೀಕ್ಷೆಯನ್ನು ಕುರಿತು ಬಾಬಾ ಹೇಳುತ್ತಿದ್ದಾರೆ: ''ಇನ್ನೇನು ದೀಕ್ಷೆ ಕೊಡಲಿ? ಯಾರಿಗೆ ಯಾರು ಬೇಕೋ ಅವರ ಹತ್ತಿರ ಕರೆದುಕೊಂಡು ಹೋಗಿ ಬಿಡುತ್ತೇನೆ. ಯಾರಿಗೆ ತಾಯಿ ಬೇಕೋ ಅವನಿಗೆ ತಾಯಿಯನ್ನು ತೋರಿಸುತ್ತೇನೆ. ತಂದೆ ಬೇಕಾದವರಿಗೆ ತಂದೆಯನ್ನು ಕೊಡುತ್ತೇನೆ. ಠಾಕೂರರೇ ತಂದೆ, ಅವರೇ ತಾಯಿ. ಇದಲ್ಲವೇ ದೀಕ್ಷೆ?''

ಅನಂತರ ತಮಾಷೆಗೆ, ''ಅರೆ, ನೀವೂ ದೀಕ್ಷೆ ಕೊಡಬಲ್ಲಿರಿ. ನೀನೂ ಮೂರು ಸಲ ಟಿಬೆಟ್ಟಿಗೆ ಹೋಗಿದ್ದೀಯಾ. ಅದೇರೀತಿ ಕೈಲಾಸ-ಕೇದಾರ ಮುಂತಾಗಿ ಇನ್ನೂ ಎಷ್ಟೋ ಸ್ಥಳಗಳಗೆ ಹೋಗಿದ್ದೀಯಾ'' ಎಂದರು.

* * *

ಇಲ್ಲಿ ಅನೇಕ ದಿನಗಳ ಘಟನೆಗಳನ್ನು ಒಂದೆಡೆ ಸಂಕ್ಷೇಪವಾಗಿ ಬರೆಯಲಾಗಿದೆ:

ದುರ್ಗಾಪೂಜೆಯ ಸಂದರ್ಭದಲ್ಲಿ ಪತ್ನೀವಿಯೋಗದಿಂದ ದುಃಖಿತರಾಗಿದ್ದ ಭಕ್ತರೊಬ್ಬರು ಮಕ್ಕಳ ಸಮೇತ ಆಶ್ರಮಕ್ಕೆ ಬಂದಿದ್ದರು. ಬಾಬಾ ಅವರೊಂದಿಗೆ ಆನಂದದಿಂದ ಸುಮಾರು ಎರಡು ತಿಂಗಳು ಕಳೆದರು. ಒಮ್ಮೊಮ್ಮೆ ಠಾಕೂರರ ಬಗ್ಗೆ ಮಾತುಕತೆ, ಒಮ್ಮೊಮ್ಮೆ ತಮ್ಮ ಸ್ಮೃತಿಕಥೆ, ಕೆಲವೊಮ್ಮೆ ತಮಾಷೆಯ ಮಾತುಗಳು, ಒಂದಾದ ಮೇಲೊಂದು ಉತ್ಸವಗಳು, ದುರ್ಗಾಪೂಜೆಯ ಬಳಿಕ ಕಾಳೀಪೂಜೆ, ಅನಂತರ ಜಗದ್ಧಾತ್ರೀ ಪೂಜೆ, ಇತ್ಯಾದಿ ಚಟುವಟಿಕೆಗಳಿಂದ ಆಶ್ರಮ ಮರ್ತ್ಯಲೋಕದಿಂದ ಆಚೆಗೆ, ಯಾವುದೋ ದೇವಭೂಮಿ ಅಥವ ಸಾಕ್ಷಾತ್ ಕೈಲಾಸವೆಂಬಂತೆ ಕಾಣಿಸುತ್ತಿತ್ತು .

ದುರ್ಗಾಪೂಜೆಯ ಕೆಲವು ದಿನ ಬಾಬಾ ಭಾವೋನ್ಮತ್ತರಾಗಿದ್ದರು, ವಿಶೇಷವಾಗಿ ದಶಮಿಯ ದಿನದಿಂದು. ಕಾಳೀಪೂಜೆ ರಾತ್ರಿಯೆಲ್ಲ ಜರುಗಿತು; ಮಾರನೆಯ ದಿನ ಬೆಳಗ್ಗೆ ಬಾಬಾ ಜಗದ್ಧಾತ್ರೀ ಪೂಜೆ ಮಾಡುವ ಇಚ್ಛೆಯನ್ನು ಪ್ರಕಟಪಡಿಸಿದರು. ಮೂರು ಪೂಜೆಗಳಿಗೆ ಮೂರು ಬಗೆಯ ಬಣ್ಣದ ಬಟ್ಟೆ ಅಗತ್ಯ. ಕುಮಾರಿ ಪೂಜೆಯನ್ನು ಸ್ವತಃ ಬಾಬಾ ಅವರೇ ಮಾಡುವರು. 'ಇಷ್ಟೊಂದು ಖರ್ಚು ಯಾರು ಕೊಡುತ್ತಾರೆ?' ಎಂದು ಕೇಳಿದಾಗ ಬಾಬಾ ಮೇಲೆ ಹೇಳಿದ ಅದೇ ಭಕ್ತನನ್ನು ತೋರಿಸಿದರು. ಪೂಜೆಯನ್ನು ಬಹಳ ಸುಂದರವಾಗಿ ಅಣಿಗೊಳಿಸಲಾಗಿತ್ತು . ಬಾಬಾ ಕೂಡ ಬಾಲಕನಂತೆ ಮಾತೃಪೂಜೆಯ ಆನಂದಸಾಗರದಲ್ಲಿ ನಲಿದಾಡಿದರು. ಪೂಜಾ ದಿನದಂದು ೧೦-೧೧ ಗಂಟೆಗೆ ಅದೇ ಭಕ್ತನ ೮ ವರ್ಷದ ಬಾಲಕಿಗೆ ಫಲಪುಷ್ಪಗಳನ್ನರ್ಪಿಸಿ ಬಾಬಾ ಕುಮಾರೀಪೂಜೆ ಮಾಡಿದರು.

ಇನ್ನೊಂದು ಉಲ್ಲೇಖನೀಯ ಘಟನೆ: ಇದೇ ಸಂದರ್ಭದಲ್ಲಿ ಸಂಜೆಯಾಗುತ್ತಿದ್ದಂತೆ ಬಾಬಾ ಒಂದೊಂದು ದಿನ ಒಂದೊಂದು ವೇಷ ಧರಿಸುತ್ತಿದ್ದರು. ಕೊರಳಿಗೆ ದೊಡ್ಡ ದೊಡ್ಡ ರುದ್ರಾಕ್ಷಿ, ಕೈಯಲ್ಲಿ ದಂಡ ಕಮಂಡಲು ಹಿಡಿದ ನೇಪಾಳೀ ಬಾಬಾ; ನೀಲಿ ನಿಲುವಂಗಿ ತೊಟ್ಟು ಕೈಯಲ್ಲಿ ಚಿಕ್ಕ ಹೂಜಿಯನ್ನಿಟ್ಟುಕೊಂಡ ಮುಸಲ್ಮಾನ ಫಕೀರ; ಬರ್ಮಾದಿಂದ ತಂದ ಪೋಷಾಕು ಹಾಗು ಛತ್ರಿಯೊಂದಿಗೆ ಬೌದ್ಧ ಪೂಜಾರಿ. ಒಂದು ದಿನ ಸೀರೆ (ಹಾಗೂ ಬಹುಶಃ ಬಳೆ) ಯನ್ನು ಉಟ್ಟ ತಾಯಿ ಯಶೋದೆ. ಎಲ್ಲವೂ ಎಲ್ಲರ (ವಿಶೇಷವಾಗಿ ತಾಯಿ

ಯನ್ನು ಕಳೆದುಕೊಂಡ ಮಕ್ಕಳ) ಸಂತೋಷಕ್ಕಾಗಿಯೋ ಎಂಬಂತೆ, ಅಥವಾ ಅವರ ಜೀವನದ ಯಾವುದೋ ರಹಸ್ಯದಿಂದ ತುಂಬಿ ಕೊಂಡಿತ್ತೋ ಎಂಬಂತೆ, ಅದು ಯಾರಿಗೂ ತಿಳಿಯದ ವಿಷಯ. ಎಲ್ಲರೂ ಹೊಟ್ಟೆಹುಣ್ಣಾಗುವಂತೆ ನಗುತ್ತಿದ್ದರು. ನೇಪಾಳಿ ಬಾಬಾ ಗಂಭೀರ ಭಾವದಿಂದ 'ಹಿಮಾಲಯದಿಂದ ಬಂದಿದ್ದೇನೆ' ಎನ್ನುತ್ತ ಎಲ್ಲರ ತಲೆಯ ಮೇಲೆ ರುದ್ರಾಕ್ಷಿಯನ್ನು ಸ್ಪರ್ಶಿಸಿ, ಎಲ್ಲರನ್ನೂ ಆಶೀರ್ವದಿಸಿದರು. ಭಕ್ತನ ೭-೮ ಮಕ್ಕಳು ಹಾಗೂ ಆಶ್ರಮದ ೭-೮ ಅನಾಥ ಬಾಲಕರು ಸಂಜೆ ಬಾಬಾರ ಸುತ್ತಲೂ ಕುಳಿತಿದ್ದರು. ಬಾಬಾ ಹಠಾತ್ತಾನೆ ಭಕ್ತನಿಗೆ, ''ನಿನಗೂ ಎಂಟು, ನನಗೂ ಎಂಟು. ಏನು ಹೇಳು ನೋಡೋಣ? ನಿನ್ನ ಒಬ್ಬ ಹುಡುಗನನ್ನು ನನಗೆ ಕೊಡು'' ಎಂದರು. ಭಕ್ತನು ಬಾಣ ತಗುಲಿದ ಜಿಂಕೆ ತನ್ನ ಮರಿಗಳತ್ತ ನೋಡುವಂತೆ ತನ್ನ ಮಕ್ಕಳ ಕಡೆಗೆ ತಿರುಗಿದರು. ಮಹಾರಾಜ್ ತಕ್ಷಣ, ''ಇರಲಿ ಬಿಡಪ್ಪ, ಅವರು ನಿನ್ನಲ್ಲೇ ಇರಲಿ'' ಎಂದರು. ನಂತರ ಹುಡುಗರತ್ತ ತಿರುಗಿ ನೋಡುತ್ತ, ''ನಿಮ್ಮಲ್ಲಿ ಯಾರಾದರೂ ಸಾಧುವಾಗುತ್ತೀರೇನು?'' ಎಂದು ಕೇಳಿದರು. ಭಕ್ತನ ಹಿರಿಯ ಮಗ ಕತ್ತಲಲ್ಲಿ ಓಡಾಡಲು ಹೆದರುತ್ತಿದ್ದ. ಅದಕ್ಕೆ ಬಾಬಾ, ''ನೀನು ಠಾಕೂರರ ಹೆಸರನ್ನು ಕೇಳಿರುವೆ. ಮತ್ತೆ ಭಯವೇಕೆ?'' ಎಂದರು. ಒಂದು ದಿನ ಬಾಬಾ ಆಶ್ರಮದ ಹುಡುಗರು ಹಾಗು ಆ ಭಕ್ತನ ಮಕ್ಕಳೊಂದಿಗೆ ಫೋಟೋ ತೆಗೆಸಿಕೊಂಡರು. ಇದು ಅವರ ಕೊನೆಯ ಫೋಟೋ ಆಗಿತ್ತು!

ಒಂದೂವರೆ ತಿಂಗಳು ಹೀಗೆ ಕಳೆದು, ಶೋಕದ ಚಿಹ್ನೆಗಳನ್ನೆಲ್ಲ ಒರೆಸಿಕೊಂಡು, ಆನಂದಭರಿತರಾಗಿ ಆ ಭಕ್ತರು ಹೊರಟುಹೋದರು.

ಆ ದಿನ ಸಂಜೆ ಬಾಬಾ ಎಲ್ಲರನ್ನೂ ಕರೆದು, '' ಪ್ರತಿದಿನ ಆರತಿಯ ನಂತರ ಎಲ್ಲರೂ ಇಲ್ಲಿಗೆ ಬನ್ನಿ. ನಾನು ಅನೇಕ ವಿಷಯಗಳನ್ನು ಹೇಳುತ್ತೇನೆ'' ಎನ್ನುತ್ತ ಹೇಳತೊಡಗಿದರು:

''ಸಾಧುಸಂಗ ಅತ್ಯಂತ ಆವಶ್ಯಕ. ನಾವೇನು ಕಡಿಮೆ ಸಾಧುಸಂಗವನ್ನು ಮಾಡಿದ್ದೇವೆಯೆ? ಎಲ್ಲಿ ಯಾವಾಗ ಅನುಕೂಲವಿತ್ತೋ ಅಲ್ಲೆಲ್ಲ ಮಾಡಿದ್ದೇವೆ. ಸಾಧುಸಂಗವಿಲ್ಲದೆ ಏನಾದರೂ ಸಾಧ್ಯವೇ? **'ತುಲಸೀ ಯೇ ಜಗಮೆ ಪಾಂಚೋ ರತನ್ ಹೈ ಸಾರ್। ಸಾಧು ಸಂಗ, ಹರಿಕಥಾ ದಯಾ ದೀನ ಉಪಕಾರ॥'** (ತುಲಸೀದಾಸನೆನ್ನುತ್ತಾನೆ, ಈ ಪ್ರಪಂಚದಲ್ಲಿ ಐದು ಅಮೂಲ್ಯ ರತ್ನಗಳಿವೆ: ಸಾಧುಸಂಗ, ಹರಿಯ ಗುಣಗಾನ, ದಯೆ, ದೈನ್ಯತೆ ಹಾಗೂ ಪರೋಪಕಾರ) ಸ್ವಾಮೀಜಿ ಹೇಳುತ್ತಿದ್ದರು, 'ಸಾಧುಸಂಗದಿಂದಲೇ ಮೊದಲು ಧರ್ಮಭಾವ ನಮ್ಮಲ್ಲಿ ಜಾಗೃತವಾಗುವುದು. ಸಂಸಾರದಲ್ಲಿ ಸುಖಭೋಗ, ವಾಸನೆಗಳ ರಸದಲ್ಲಿ ಎಲ್ಲರೂ ನೆನೆದುಹೋಗಿದ್ದಾರೆ. ಅದು ಉರಿದು ಹೋಗುವುದಾದರೂ ಹೇಗೆ? ಆ ವಾಸನೆಗಳು ಒಣಗಲು ಮೊದಲು ತುಸು ಶಾಖ ಅಗತ್ಯ. ಆದರೆ ಚಕಮಕಿ ಕಲ್ಲಾದರೆ ಬೇರೆಮಾತು. ಸಾವಿರ ವರ್ಷ ನೀರಿನಲ್ಲಿದ್ದರೂ ಅದನ್ನೆತ್ತಿ ತಿಕ್ಕಿದರೆ, ತಕ್ಷಣವೇ ಬೆಂಕಿ ಉರಿಯುತ್ತದೆ. ಆದರೆ ಅಂಥವರು ಎಲ್ಲಿದ್ದಾರೆ? ಎಷ್ಟು ಮಂದಿ ಇದ್ದಾರೆ?' ಅಂತ.''

ಕೆಲವು ಕ್ಷಣ ಸುಮ್ಮನಿದ್ದು ಬಾಬಾ ಮತ್ತೆ ಹೇಳತೊಡಗಿದರು: ''ನೋಡು, ಮಹತ್ಕಾರ್ಯಗಳೆಲ್ಲವೂ ತ್ಯಾಗವನ್ನೇ ಅವಲಂಬಿಸಿವೆ. ನಾನೆಂದಿಗೂ ಬಹರಂಪುರಕ್ಕೆ ಹೋಗಿ ನಾಲ್ಕಾಣೆಗೆ ತಿಂಡಿ ಖರೀದಿಸಿ ತಿಂದಿಲ್ಲ. ಹೆಚ್ಚೆಂದರೆ ಎಳನೀರು ಕುಡಿದು, ಗಾಡಿಯವನಿಗೆ ಊಟ ಮಾಡಿಸಿ, ತಡವಾಗಿ ಬಂದು ಮಧ್ಯಾಹ್ನ ಊಟ ಮಾಡುತ್ತಿದ್ದೆ. ಅಲ್ಲಿ ಐದು ಬಗೆಯ ಪದಾರ್ಥಗಳಿಂದ ಅಡುಗೆ ಮಾಡುವರೆಂದು ಮೊದಲೇ ಹೇಳಿಬಿಡುತ್ತಿದ್ದೆ, 'ಬರೀ ಅನ್ನ ಮಾತ್ರ ಸಾಕು; ಇದಕ್ಕಿಂತ ಹೆಚ್ಚು ಮಾಡಿದರೆ ಇನ್ನು ಮೇಲೆ ಬರಲಾರೆ' ಅಂತ. ಇಷ್ಟವಿಲ್ಲದಿದ್ದರೂ ಅವರು ಈ ನಿಬಂಧನೆಗೆ ಒಳಗಾಗಿ ಹಾಗೇ ಮಾಡುತ್ತಿದ್ದರು. ಎಷ್ಟೋ ಸಲ ಅವರು, 'ಇದು ಸರಿಯಲ್ಲ , ಒಂದು ದಿನ ನಮ್ಮ ಇಚ್ಛೆಗೆ ಅನುಗುಣವಾಗಿ ನೀವು ಊಟ ಮಾಡಬೇಕು' ಎನ್ನುತ್ತಿದ್ದರು. ನಾನೆಂದೂ ಆಶ್ರಮದ ಹಣದಿಂದ ನನಗಾಗಿ ಬಟ್ಟೆಯನ್ನು ಕೊಂಡುಕೊಳ್ಳುತ್ತಿರಲಿಲ್ಲ. ಮಹಾರಾಜ್ (ಸ್ವಾಮಿ ಬ್ರಹ್ಮಾನಂದರು) ನನಗಾಗಿ ಕಳುಹಿಸಿ ಕೊಡುತ್ತಿದ್ದರು. ಅನಂತರ ಬಹಳ ಬದಲಾವಣೆಗಳಾಗಿವೆ. ಎಂದೂ ನಾನು ಒಳ್ಳೆಯ ಹಾಸಿಗೆಯ ಮೇಲೆ ಮಲಗಿಲ್ಲ. ಮಂಡಿಗೆ ಮಂಡಿ ತಿಕ್ಕಿದಾಗ ಕಷ್ಟವೆನಿಸುತ್ತಿತ್ತು. ದಿಂಬೊಂದು ಬೇಕಾಗುತ್ತಿತ್ತು. ಅದೂ ಇದ್ದರೆ ಇತ್ತು, ಇಲ್ಲದಿದ್ದರೆ ಇಲ್ಲ. ದಿಂಬಿಗೂ ಚೀಲವಿರಲಿಲ್ಲ. ಒಂದು ಹಳೆಯ ಬಟ್ಟೆ ಸುತ್ತಲಾಗಿತ್ತು, ಅದೂ ಹರಿದಲ್ಲಿ ಗಂಟು ಹಾಕಿರುತ್ತಿತ್ತು. ನಾನು ಎಲ್ಲರಿಗೂ ಉಣಿಸಿದ್ದೇನೆ, ಉಡಿಸಿದ್ದೇನೆ. ಎಲ್ಲರನ್ನೂ ಸಾಧ್ಯವಾದಷ್ಟು ಮಟ್ಟಿಗೆ ಸುಖವಾಗಿಡಲು ಪ್ರಯತ್ನಿಸಿದ್ದೇನೆ. ಈಗಿನ ಈ ಕೋಣೆ, ಮಂಚ, ಹಾಸಿಗೆ, ದಿಂಬು, ಅಂಗಿ ಇವನ್ನೆಲ್ಲ ನೋಡಿದರೆ ಅದೊಂದೂ ಅರ್ಥವಾಗದು.

''ನೋಡು, ಮ- ಬಹರಂಪುರದಲ್ಲಿ ಆಶ್ರಮಕ್ಕಾಗಿ ಅಕ್ಕಿ ಸಂಗ್ರಹಿಸುತ್ತಿದ್ದ. ಬೆಳಗ್ಗೆ ಸ್ವಲ್ಪ ಕಡಲೆಪುರಿ ತಿಂದು, ಸಂಜೆಯವರೆಗೆ ಅದರಲ್ಲೇ ಇರುತ್ತಿದ್ದ. ಸಂಜೆ ಒಲೆಯ ಹೊಗೆಗೆ ಕಣ್ಣಲ್ಲಿ, ಮೂಗಿನಲ್ಲಿ ನೀರು ಸುರಿಸುತ್ತಾ, ಭಿಕ್ಷೆಯ ಅಕ್ಕಿಯೊಂದಿಗೆ ಒಂದು ಆಲೂಗಡ್ಡೆ ಬೇಯಿಸಿ ತಿನ್ನುತ್ತಿದ್ದ. ಅವನ ಕಷ್ಟವನ್ನು ನೋಡಿದ ಕಾಲೇಜಿನ ಹುಡುಗರು, 'ನಾವು ಅನ್ನ ಸಂಗ್ರಹಿಸುತ್ತೇವೆ, ಎಲ್ಲ ವ್ಯವಸ್ಥೆ ಮಾಡುತ್ತೇವೆ. ನೀವು ನಮಗೆ ಪಾತ್ರೆ ಕೊಟ್ಟು ಹೋಗಿ' ಎನ್ನುತ್ತಿದ್ದರು. ನೋಡು, ಇಂಥ ತ್ಯಾಗವನ್ನು ನೋಡಿ ಅವರೂ ಸ್ಫೂರ್ತಿಪಡೆದು ಆ ರೀತಿ ಮುಂದುವರೆದರು.

''ಪುರಿಯಲ್ಲಿ ನನಗೆ ಮಾತೆ ಲಕ್ಷ್ಮಿಯ ವಿಶೇಷ ದರ್ಶನವುಂಟಾಯಿತು. ನಾನಾಬಗೆಯ ವೈಭೋಗಗಳೊಂದಿಗೆ ಆಕೆಯನ್ನು ಕಂಡೆ. ಇದರ ಬಗ್ಗೆ ಮಹಾರಾಜ್ ಅವರಿಗೆ (ಸ್ವಾಮಿ ಬ್ರಹ್ಮಾನಂದರು) ಹೇಳಿದಾಗ ಅವರು, 'ನಿನಗಿನ್ನು ಚಿಂತೆಯಿಲ್ಲ. ತಾಯಿ ಲಕ್ಷ್ಮಿಯ ಕೃಪೆಯಿಂದ ಆಶ್ರಮಕ್ಕೆ ಇನ್ನು ಯಾವ ಕೊರತೆಯೂ ಇರಲಾರದು' ಎಂದರು. ನಿಜ, ಅಂದಿನಿಂದ ಎಂದಿಗೂ, ಯಾವುದರ ಕೊರತೆಯೂ ಇಲ್ಲಿ ಉಂಟಾಗಿಲ್ಲ. ಬೇಕಾದಾಗ ಬೇಕಾದದ್ದು ಒದಗಿದೆ.''

(ಮುಂದುವರಿಯುವುದು)

ಶಿಕ್ಷಣ ಮತ್ತು ನೈತಿಕತೆ



ಡಾ. ಹೆಚ್. ಪಾಂಡುರಂಗ ವಿಠಲ

ಆಧುನಿಕ ಭಾರತದಲ್ಲಿ ಸಾರ್ವಜನಿಕ ಶಿಕ್ಷಣದಲ್ಲಿ ನೈತಿಕ ಮೌಲ್ಯಗಳ ಅಳವಡಿಕೆಯನ್ನು ಕುರಿತು ಗಂಭೀರವಾಗಿ ಚಿಂತಿಸಿ, ಸರಿಯಾದ ಶಿಕ್ಷಣ ನೀತಿಯನ್ನು ರೂಪಿಸುವ ಕಾರ್ಯ ಅತ್ಯಂತ ತುರ್ತಾಗಿ ಆಗಬೇಕಾಗಿದೆ. ಈ ಕುರಿತು ಈ ಲೇಖನವನ್ನು ಬರೆದಿರುವ ಲೇಖಕರು ಕನ್ನಡ ಪ್ರಾಧ್ಯಾಪಕರು ಹಾಗೂ ಆಶ್ರಮದ ಭಕ್ತರು.

'ಶಿಕ್ಷಣ ತನ್ನ ಕಾಲಿನ ಮೇಲೆ ತಾನು ನಿಂತು ಜೀವನ ಸಂಗ್ರಾಮವನ್ನು ಎದುರಿಸುವ ಸಾಮರ್ಥ್ಯವನ್ನು ನೀಡಬೇಕು, ಮನುಷ್ಯನ ಒಳಗಿಂದ ಚಾರಿತ್ರ್ಯಬಲ, ಪರಸೇವಾತತ್ಪರತೆ, ಸಿಂಹಸದೃಶ ಸಾಹಸಗಳನ್ನು ಹೊರತರಬೇಕು. ಅದು ಒಂದಿನಿತೂ ಜೀರ್ಣವಾಗದೆ ದಿಕ್ಕುಗೆಟ್ಟು ಓಡುತ್ತಿರುವ ತಲೆಯಲ್ಲಿ ತುಂಬಿಕೊಂಡ ವಿಷಯಗಳ ಮೊತ್ತವಲ್ಲ. ಕೇವಲ ಐದು ವಿಷಯಗಳನ್ನು ತಿಳಿದುಕೊಂಡು, ಅವನ್ನು ನಿಮ್ಮ ಜೀವನದಲ್ಲಿ, ನಿಮ್ಮ ಶೀಲದಲ್ಲಿ ಅನುಷ್ಠಾನಕ್ಕೆ ತಂದರೆ ಇಡಿಯ ಪುಸ್ತಕ ಭಂಡಾರವನ್ನೇ ಕಂಠಪಾಠ ಮಾಡಿದವನಿಗಿಂತ ಹೆಚ್ಚು ವಿದ್ಯೆ ನಿಮ್ಮಲ್ಲಿದ್ದಂತಾಗುವುದು. ವಿದ್ಯಾಭ್ಯಾಸವೆಂದರೆ ಮನುಷ್ಯನಲ್ಲಿ ಈಗಾಗಲೇ ಸುಪ್ತವಾಗಿರುವ ಪರಿಪೂರ್ಣತೆಯನ್ನು ಹೊರತರುವುದು. ಮಗುವು ತನಗೆ ತಾನೇ ಶಿಕ್ಷಣ ನೀಡಿಕೊಳ್ಳುತ್ತದೆ. ತನ್ನ ಸ್ವಭಾವಕ್ಕೆ ಅನುಗುಣವಾಗಿ ಬೆಳೆಯಲು ನೀವು ಅಡ್ಡಿ ಆತಂಕಗಳನ್ನು ನಿವಾರಿಸಿ ಸಹಾಯ ಮಾಡಬಹುದು ಅಷ್ಟೆ' ಎನ್ನುತ್ತಾರೆ ಸ್ವಾಮಿ ವಿವೇಕಾನಂದರು. ಶಿಕ್ಷಣ ನಮ್ಮನ್ನು ಸ್ವಾವಲಂಬಿಯಾಗಿಸಬೇಕು.

ವಿದ್ಯಾಭ್ಯಾಸದ ಜೀವಾಳವೇ ಧರ್ಮ. ತಾವು ಬದುಕಿರುವುದೇ ಧನ್ಯತೆ ಎಂದು ಅನ್ನಿಸುವಂತೆ ಮಕ್ಕಳಿಗೆ ಚಿಕ್ಕಂದಿನಿಂದಲೇ ಜೀವನದ ಬಗ್ಗೆ ಪವಿತ್ರ ಭಾವನೆಯನ್ನು ಮೂಡಿಸಬೇಕು. ಒಳ್ಳೆಯ ಕೆಲಸದಿಂದ ಸುಪ್ತ ದೈವಿಕತೆಯ ಆವಿರ್ಭಾವವಾಗುತ್ತದೆ, ವಿದ್ಯೆಯ ಎಲ್ಲ ಭಾಗಗಳೂ ದಿವ್ಯಜೀವನದ ಅಂಗಗಳೇ ಎಂದು ತಿಳಿಸಬೇಕು. ಪುರುಷಸಿಂಹರನ್ನಾಗಿಸುವ ವಿದ್ಯಾಭ್ಯಾಸದ ಮೂಲಭೂತ ಕಾರ್ಯವೇ ಶೀಲ ನಿರ್ಮಾಣ; ಆಗಮಾತ್ರವೇ ನಂಬಿಕೆ ಮತ್ತು ಶ್ರದ್ಧೆ ಬರುವುದು. ಶಿಕ್ಷಣದ ಬಗೆಗೆ ವಿವೇಕಾನಂದರು ಹೇಳುವ ಇನ್ನೊಂದು ಮುಖ್ಯ ಅಂಶ ಏಕಾಗ್ರತೆ, ಬರಿಯ ವಿಷಯಸಂಗ್ರಹವಲ್ಲ. ಇದು ಜ್ಞಾನಾರ್ಜನೆಗೆ ಇರುವ ಏಕಮಾತ್ರ ಮಾರ್ಗ. 'ಪುನಃ ವಿದ್ಯಾಭ್ಯಾಸ ಪ್ರಾರಂಭಿಸುವಂತಿದ್ದರೆ ನಾನು ಮೊದಲು ಮನಸ್ಸನ್ನು ಏಕಾಗ್ರಗೊಳಿಸುವುದು ಹೇಗೆ ಮತ್ತು ಅದನ್ನು ಹೇಗೆ ಹಿಂದಕ್ಕೆ ಸೆಳೆಯುವುದು ಎಂಬುದನ್ನು ಕಲಿತುಕೊಂಡು, ಅನಂತರ ಅಂತಹ ಒಂದು ಸರಿಯಾದ ಉಪಕರಣದಿಂದ ನನ್ನ ಇಚ್ಛಾಪ್ರಕಾರ ವಿಷಯಗಳನ್ನು ಸಂಗ್ರಹಿಸುತ್ತೇನೆ' ಎನ್ನುತ್ತಾರೆ ಅವರು. ಪಾರಮಾರ್ಥಿಕ ಮತ್ತು ಲೌಕಿಕ ಶಿಕ್ಷಣಗಳೆರಡೂ ನಮ್ಮ ಅಧೀನದಲ್ಲಿರಬೇಕು, ಅವು ರಾಷ್ಟ್ರೀಯ ಸ್ವರೂಪವನ್ನು ಪಡೆದಿರಬೇಕು ಎಂಬುದು ವಿವೇಕಾನಂದರ ಆಸೆ.

ಆದರೆ ವಿವೇಕಾನಂದರ ಶಿಕ್ಷಣದ ಕಲ್ಪನೆ ನಮ್ಮ ದೇಶದಲ್ಲಿ ಜಾರಿಗೆ ಬರಲಿಲ್ಲ. ಕಾರಣ, ವಿದ್ಯಾಭ್ಯಾಸವನ್ನು ಕಡೆಗಣಿಸಲಾಗಿದೆ. ಶಿಕ್ಷಕ ಸಮುದಾಯಕ್ಕೆ ಭಾರತದ ಆಧ್ಯಾತ್ಮಿಕ ಪರಂಪರೆಯ ಬಗ್ಗೆ ಉಪೇಕ್ಷೆ. ಜನತೆಗೆ ನಿಜವಾದ ವಿದ್ಯೆಯ ಶಕ್ತಿಯ ಅರಿವಾಗಿಲ್ಲ – ಒಳ್ಳೆಯ ಇಂಗ್ಲಿಷ್ ಶಾಲೆಗೆ ಸೇರಿಸಿದರೆ ಪವಾಡ ನಡೆದು ತಮ್ಮ ಮಕ್ಕಳು ರಾಶಿ ಹಣ ಸಂಪಾದಿಸುತ್ತಾರೆ ಎಂಬ ಭ್ರಮೆ. ಸಹಮಾನವರ ಬಗ್ಗೆ, ಪರಿಸರದ ಬಗ್ಗೆ ಸ್ವಲ್ಪವೂ ಕಾಳಜಿ, ಜವಾಬ್ದಾರಿ ಇಲ್ಲದ ತಾಂತ್ರಿಕ ಪರಿಣತಿ ಪಡೆದ ಶಿಕ್ಷಿತರನ್ನು ತಯಾರು ಮಾಡಿದರೆ ಸಾಲದು; ಅವರು ಹೃದಯವಂತರೂ ಆಗಿರಬೇಕು ಎಂಬ ಹಂಬಲದಿಂದ ನೈತಿಕ ಆಧ್ಯಾತ್ಮಿಕ ಮೌಲ್ಯಗಳ ಶಿಕ್ಷಣವನ್ನು ಸೇರಿಸುವ ಪ್ರಯತ್ನ ಮಾಡಿದರು. ಧರ್ಮ ನಿರಪೇಕ್ಷ ವಾತಾವರಣದಲ್ಲಿ ಇದು ಪ್ರಾಯೋಗಿಕವಾಗದೆ ಹೋಯಿತು.

ಇದಕ್ಕೆ ಕಾರಣ, ಮಕ್ಕಳು ಶಿಕ್ಷಕನನ್ನು ನೋಡಿ ಮೌಲ್ಯಗಳನ್ನು ಕಲಿಯುತ್ತವೆಯೆ ಹೊರತು ಆತ ಹೇಳಿದ್ದನ್ನು ಕೇಳಿಸಿಕೊಂಡು ಕಲಿಯುವುದಿಲ್ಲ. ಶ್ರೀರಾಮಕೃಷ್ಣರು ಹೇಳಿದ ಕತೆ ನೆನಪಿಸಿಕೊಳ್ಳಿ. ಜೋನಿ ಬೆಲ್ಲದ ಗುಡಾಣವನ್ನು ಬಳಿ ಇಟ್ಟುಕೊಂಡ ವೈದ್ಯನು ಬೆಲ್ಲ ತಿನ್ನಬೇಡ ಎಂದು ರೋಗಿಗೆ ಹೇಳಿದರೆ ಪ್ರಯೋಜನವಾಗದು. ಶಿಕ್ಷಣದ ವ್ಯವಸ್ಥೆಯಲ್ಲಿ ಸ್ಪರ್ಧೆಗೆ ಅವಕಾಶವೇ ವಿನಾ ಶ್ರದ್ಧೆಗೆ ಇಲ್ಲ. ಆದರೂ ಶಿಕ್ಷಕ ಜಾಗೃತನಾಗಿದ್ದರೆ ಆಟದ ಬಯಲಿನಲ್ಲಿ, ವಿದ್ಯಾರ್ಥಿಗಳ ಒಡನಾಟದಲ್ಲಿ ನೈತಿಕತೆಯನ್ನು ಒರೆಗೆ ಹಚ್ಚುವ ಪ್ರಸಂಗಗಳು ಬಂದೇ ಬರುತ್ತವೆ – ಅವನ್ನು ಬಳಸಿಕೊಳ್ಳಬಹುದು.

ಇನ್ನೊಂದು ಕಾರಣ, ಬುದ್ಧಿವಾದವನ್ನು ಯಾರೂ ಕೇಳಲು ಬಯಸುವುದಿಲ್ಲ ಎಂಬುದು. ಯುದ್ಧದ ಮೊದಲು ಸಂಜಯನ ದೌತ್ಯದ ಬಳಿಕ ಪಾಂಡವರ ಸಿದ್ಧತೆಗಳ ವಿವರವನ್ನು ಕೇಳಿ ಧೃತರಾಷ್ಟ್ರ ತೀರ ತಲ್ಲಣಕ್ಕೆ ಒಳಗಾಗುತ್ತಾನೆ. ವಿದುರನ ಬುದ್ಧಿವಾದ ನಾಟದೆ

ಇದ್ದಾಗ ಸನತ್ಸುಜಾತನನ್ನು ಬರಮಾಡುತ್ತಾನೆ. ಋಷಿಯ ಎಲ್ಲ ನೀತಿಗಳನ್ನು ಕೇಳಿದ ಧೃತರಾಷ್ಟ್ರ ತಲೆದೂಗುತ್ತಾನೆ, ಅಳವಡಿಸಿಕೊಳ್ಳಲು ಆಗದು. ಸ್ವಲ್ಪ ಹೊತ್ತಿನ ಅನಂತರ ಪಾಂಡವರು ಏಕೆ ಸಾಯುವುದಿಲ್ಲ ಎಂದೇ ಅವನಿಗೆ ಅನ್ನಿಸುತ್ತದೆ!

ವಿದ್ಯೆ ಹೊಟ್ಟೆಪಾಡಿಗೆ. ಮೆಕಾಲೆಯಿಂದಾಗಿ ಎಲ್ಲರೂ ಅಕ್ಷರಸ್ಥರಾಗುವುದು ಗುರಿ. ಪದವಿ, ಸ್ನಾತಕೋತ್ತರ ಪದವಿ ಇದ್ದಲ್ಲಿ ಜೀವನ ಮಾಡುವುದಕ್ಕೆ ಭಯವಿಲ್ಲ , ಇಲ್ಲದಿದ್ದರೆ ಕರಾಳ ಅಂದುಕೊಂಡಿದ್ದೇವೆ. ಮಗುವಿನ ಗ್ರಹಣಶಕ್ತಿ ಪರೀಕ್ಷಿಸಿ ಯಾವುದರಲ್ಲಿ ಮುಂದುವರಿಯಬಹುದು ಎಂದು ನೋಡುತ್ತಿಲ್ಲ. ಅಂತಸ್ತು ಕಾಪಾಡಿಕೊಳ್ಳಲು ಐಷಾರಾಮಿ ಶಾಲೆಗೆ ಕಳಿಸುತ್ತಾರೆ. ಪಠ್ಯಕ್ರಮ ಎಲ್ಲರಿಗೂ ಒಂದೇ. ಅದರಲ್ಲೂ ಮೆಥೆಡಾಲಜಿಗೇ ಗಮನ. ಮಗುವಿಗೆ ಎಷ್ಟು ತಲುಪಿತು ನೋಡುವುದಿಲ್ಲ. ರೈತನ ಮಕ್ಕಳಿಗೆ ಬೆಳೆ ಬೆಳೆದು ವಿಲೇವಾರಿ ಆಗುವ ಹಂತಗಳು ಗೊತ್ತಿಲ್ಲ; ಕೂಲಿಗಳಿಗೆ ಗೊತ್ತಿದೆ. ಏಕೆಂದರೆ, ತಮ್ಮ ಹಾಗೆ ಕೀಳಾಗದಿರಲಿ, ಮಕ್ಕಳ ಜೀವನ ಉತ್ತಮವಾಗಲಿ ಎಂಬ ಭಾವನೆ! ವೃತ್ತಿ ಅಳವಡಿಸಿಕೊಳ್ಳುವುದರಲ್ಲಿ ತರತಮ ಭಾವ.

ಇಂತಹ ಶಿಕ್ಷಣದಿಂದ 'ಉದ್ಯೋಗ ಎಂಬುದು ಪ್ರೀತಿಯಿಂದ ಮಾಡುವ ಕಾಯಕ' ಎಂಬ ಭಾವನೆ ಹೋಗಿದೆ. ಮುಂದಿನ ಜನಾಂಗಕ್ಕೆ ಏನನ್ನಾದರೂ ಮಾಡುತ್ತಿದ್ದೇವೆ ಎಂಬ ಉನ್ನತ ಭಾವ ಹೋಗಲಿ, ಆತ್ಮಸಂತೋಷ ಕೂಡ ಗುರಿ ಆಗುತ್ತಿಲ್ಲ. ಗಳಿಸುವ ದುಡ್ಡಿನ ಕಡೆಗೆ ಮಾತ್ರ ಗಮನವಾಗಿರುವುದರಿಂದ ಮಾನಸಿಕವಾಗಿ ಬೆಳವಣಿಗೆ ಇಲ್ಲ. ಮೌಲ್ಯಗಳು ಇಲ್ಲದ ಶಿಕ್ಷಣದಿಂದಾಗಿ ವಿಷಯಗಳನ್ನು ಗ್ರಹಿಸಿದರೂ, ತಾವು ಯಾರು ಎಂಬುದನ್ನೇ ವಿದ್ಯಾರ್ಥಿಗಳು ಮರೆಯುತ್ತಿದ್ದಾರೆ. ಅವರು ವ್ಯಕ್ತಿತ್ವ ಬೆಳೆಸಿಕೊಳ್ಳುತ್ತಿಲ್ಲ. ಇಲ್ಲಿ ಶಿಕ್ಷಣ ಸೋತಿತು. ಇದರ ಫಲ ಉಣ್ಣುತ್ತಿರುವವರು ತಂದೆ ತಾಯಿಯರು. ಅವರ ಬಗ್ಗೆ ಸಹಿಷ್ಣುತೆ ಕಡಿಮೆ ಆಗಿದೆ. ಎಷ್ಟೋ ಮನೆಗಳಲ್ಲಿ ಹಿರಿಯರು ಮಕ್ಕಳ ನಡುವೆ ಸಂವಹನ ಇಲ್ಲ. ೧೯೮೫ರಲ್ಲಿ ಲಕ್ಷ ಜನಸಂಖ್ಯೆಗೆ ೮ ರಿಂದ ೧೦ ವೃದ್ಧಾಶ್ರಮಗಳಿದ್ದುದು ಈಗ ಅತಿ ಹೆಚ್ಚಾಗಿ, ವ್ಯಾಪಾರೀಕರಣವೂ ಆಗಿದೆ. ತಂದೆ ತಾಯಿ ಅಮೂರ್ತ ಭಾವಗಳನ್ನು ಬೆಳೆಸುತ್ತಿಲ್ಲ. ಜಾಗತೀಕರಣ, ಉದಾರೀಕರಣ ದಿಂದಾಗಿ ಬಳಸು–ಬಿಸಾಕು ಸಂಸ್ಕೃತಿ ಬೆಳೆಯಿತು. ಮಕ್ಕಳು ಇದನ್ನು ಶಿಕ್ಷಣದಲ್ಲಿ ಅಳವಡಿಸಿಕೊಂಡರು. ಪಶ್ಚಿಮದಂತೆ ಇಲ್ಲೂ ಯೌವನವೇ ಆದರ್ಶವಾಗಿ, ವೃದ್ಧರು ತಿರಸ್ಕಾರಕ್ಕೆ ಒಳಗಾದರು.

ಶಿಕ್ಷಣದಿಂದ ಆರೋಗ್ಯಕರ ಸಮಾಜ ನಿರ್ಮಾಣ ಎನ್ನುವ ಗುರಿ ಹೊರಟೇ ಹೋಗಿದೆ. ಇತರರ ಬಗ್ಗೆ ಸೌಹಾರ್ದತೆ, ಹೊಂದಾಣಿಕೆಯ ಬದಲು ಸ್ಪರ್ಧೆಯನ್ನು ಉತ್ತೇಜಿಸಿ, ಮಕ್ಕಳಲ್ಲಿ ಸ್ವಾಭಾವಿಕವಾಗಿ ಇರುವ ಉದಾರ ಮನಸ್ಸು ಹಾಳಾಗಿ, ಯಾಂತ್ರಿಕತೆ ತಲೆ ಎತ್ತಿತು. ಜವಾಬ್ದಾರಿ ಬಾರದಿರಲಿ ಎಂಬಂತೆ ಮನೆಯಲ್ಲಿ ನಡೆದುಕೊಳ್ಳುವುದು, ಸಲಹೆ, ಬುದ್ಧಿವಾದಗಳಿಗೆ ಆಸ್ಪದ ನೀಡದಿರುವುದು ಮೊದಲಾಯಿತು. ಹಿಂದೆ ಹಿರಿಯರು ಆಕರ್ಷಣೆ ಎಂದರೇನು, ಬೇಕಾದದ್ದು – ಬೇಡವಾದದ್ದು ಯಾವುದು ಎಂದು ತರಬೇತಿ ನೀಡುತ್ತಿದ್ದರು. ಒಡಹುಟ್ಟಿದವರ ಸಂಖ್ಯೆ ಹೆಚ್ಚಿದ್ದಾಗ ಸ್ವಾರ್ಥ ಕಡಿಮೆ ಆಗುತ್ತಿತ್ತು, ನೋವು ಕೊಡುವವರ ಸಂಖ್ಯೆಯೂ ಕಡಿಮೆ ಇತ್ತು. ಈಗ? ಕರೆದರೆ ಕೊಟ್ಟರೆ ಮಕ್ಕಳು ಸಹಿಸುವುದಿಲ್ಲ.

ಶಿಕ್ಷಣ ಎಲ್ಲ ದೃಶ್ಯಮಾಧ್ಯಮಕ್ಕೆ ಬಂದುದು ದುರಂತ. ಸ್ಮಾರ್ಟ್ ಕ್ಲಾಸುಗಳಿಂದ ಕಲ್ಪನಾಶಕ್ತಿ ಕುಂಠಿತವಾಯಿತು. ಕೆಲವಾದರೂ ಅಮೂರ್ತ ರೂಪದಲ್ಲಿ ಇರಬೇಕಿತ್ತು. ಎಲ್ಲವೂ ಸುಲಭದಲ್ಲಿ ಸಿಗುತ್ತದೆ, ಎನ್ನುವ ಭಾವನೆ ಬಂತು. ಹಿಂದೆ ಇದ್ದ ಶಿಕ್ಷಣದ ಕಲ್ಪನೆಯಿಂದ ನಾವು ಬಹುದೂರ ಬಂದಿದ್ದೇವೆ. ಪಾಸಾಗುವುದು ಬಹು ಸುಲಭವಾದ್ದರಿಂದ, ಗುರುಗಳ ಬಗ್ಗೆ ಆಗಲಿ ತರಗತಿಯ ಬಗ್ಗೆ ಆಗಲಿ ಗೌರವ ಆದರಗಳಿಲ್ಲ. ಈಗ ಪದವಿ ಪಡೆದರೆ ಜೀವನ ಸಾರ್ಥಕ ಎನ್ನಿಸದು – ಬೇರೆ ವಿಚಾರ ಕಲಿತರೆ ಸಾರ್ಥಕ. ಶಿಕ್ಷಣದಿಂದಲೇ ಸ್ವಾರ್ಥ ಹೆಚ್ಚಾಗುತ್ತಿದೆ ಈ ಕಾಲದಲ್ಲಿ. ಚಿಕ್ಕ ಮಗು ನನ್ನೊಬ್ಬಳಿಗೇ ಬರೆಸಿಬಿಡಿ ಅಂತ ಕೇಳುತ್ತೆ! ಆದ್ದರಿಂದಲೇ ಟ್ಯೂಷನ್ ಮಳಿಗೆಗಳು ಹೆಚ್ಚಾಗುತ್ತ, ಶಿಕ್ಷಣ ವ್ಯಾಪಾರವಾಗಿದೆ.

ಹಾಗಾದರೆ ನೈತಿಕತೆಯನ್ನು ಮಕ್ಕಳಲ್ಲಿ ಕಲಿಸುವುದೆಂತು? ಸುಸ್ಥಿರ ಸಮಾಜದ ಬೇರುಗಳು ತಮಗಿಂತ ದೊಡ್ಡದಿದೆ ಎಂದು ಅದಕ್ಕೆ ತಲೆಬಾಗುವ ಧರ್ಮ ಅವರಲ್ಲಿ ಬರಬೇಕು. ನಮ್ಮ ವರ್ತನೆ, ಕ್ರಿಯೆಗಳು ಬೌದ್ಧಿಕ ಚಿಂತನೆಗಳಿಂದ ಉಂಟಾಗುವುದಿಲ್ಲ, ಸುಪ್ತ ಮನಸ್ಸಿನ ನಿರ್ದೇಶನದ ಮೇರೆಗೆ ನಡೆಯುವುವು ಎಂದು ತಿಳಿದು, ಕಂದಾಚಾರ ಎಂದು ತಿರಸ್ಕರಿಸಿದ, ಮನುಷ್ಯ ಸಂಬಂಧಗಳನ್ನು ಕಟ್ಟಿಕೊಡುವ ಸಾಂಪ್ರದಾಯಿಕ ಆಚರಣೆಗಳನ್ನು ಪಾಲಿಸುತ್ತ, ಸಮಾಜದೊಂದಿಗೆ ಒಂದಾಗುವುದು ಮುಖ್ಯ. ಇದಕ್ಕೆ ಬುನಾದಿ ಹಾಕುವವರು ತಂದೆತಾಯಿಯರೇ. ಚಿಕ್ಕ ವಯಸ್ಸಿನಲ್ಲಿ ಮಗುವಿಗೆ ಭಾಷೆಯನ್ನು ಹೇಳಿ ಕೊಟ್ಟಂತೆಯೇ ನಮ್ಮ ಸಂಸ್ಕೃತಿ, ಸಂಪ್ರದಾಯಗಳನ್ನು ಅದು ಆಚರಿಸುವಂತೆ ಮಾಡಬೇಕು. ಮಗುವಿಗೆ ಐದು ತುಂಬುವುದರೊಳಗೇ ಅದರ ವ್ಯಕ್ತಿತ್ವದ ಸೇಕಡಾ ೯೫ರಷ್ಟು ರೂಪುಗೊಂಡಿರುತ್ತದೆ. ದೇವರು ಧರ್ಮದ ಬಗ್ಗೆ ತನ್ನ ತಾಯಿ ತಂದೆಯರು ಹೇಳಿದ ಅಂಶಗಳು ಅರಿವಿಲ್ಲದೆಯೆ ಅದರ ಆಳಮನಸ್ಸಿನಲ್ಲಿ ದಾಖಲಾಗುತ್ತವೆ. ಮುಂದೆ ಅದರ ವರ್ತನೆಯನ್ನು ನಿರ್ಧರಿಸುವ ಹೆಚ್ಚಿನ ಕಂಡೀಷನಿಂಗ್ ಆಗುವುದು ಈಗಲೇ. ಭಾವಪರಿವರ್ತನೆ ಎಂದೂ ತಾರ್ಕಿಕವಲ್ಲ. ಮಹಾಪುರುಷರೆಲ್ಲ ತಮ್ಮನ್ನು ರೂಪಿಸಿದವರು ತಾಯಂದಿರು ಎನ್ನುತ್ತಾರೆ. ದಿವಂಗತ ಕಲಾಂ ಅವರಲ್ಲಿ ಧಾರ್ಮಿಕ ಶ್ರದ್ಧೆ ಬೆಳೆಸಲು ಅವರ ತಂದೆ ಚಿಕ್ಕಂದಿನಿಂದಲೇ ಗಮನ ಕೊಟ್ಟಿದ್ದರು. ಸಂಜೆ ಶಾಲೆ ಮುಗಿದ ನಂತರ ಸ್ವಲ್ಪ ಹೊತ್ತು ಪತ್ರಿಕೆ ಚಂದಾ ವಸೂಲಿಗೆ ಹೋಗಿ, ನಂತರ ತಂದೆಯೊಡನೆ ನಮಾಜ್ ಮಾಡಲು ತೆರಳುತ್ತಿದ್ದರು. ತಾಯಿಯೂ ಅಷ್ಟೆ. ಮಗನಿಗೆ ಧಾರ್ಮಿಕ ವಿಷಯಗಳನ್ನು ಮನದಟ್ಟು ಮಾಡಿಸುತ್ತಿದ್ದರು. ಪರಿಣಾಮ ಕಲಾಂಗೆ ಚಿಕ್ಕ ವಯಸ್ಸಿನಲ್ಲೇ

ಉತ್ತಮ ನಡವಳಿಕೆ, ಕಾರ್ಯಶ್ರದ್ಧೆ, ಕಠಿಣ ಪರಿಶ್ರಮ ಮುಂತಾದ ಗುಣಗಳು ಸಹಜವಾಗಿ ಮೈಗೂಡಿದವು.

ನಮ್ಮ ಮುಂದುವರೆದ, ಆಧುನಿಕ ತಾಯ್ತಂದೆಯರು ಮಾತೃಭಾಷೆ ತಿರಸ್ಕರಿಸಿ, ಪ್ರಾದೇಶಿಕ ಭಾಷೆಯನ್ನು ಅದೇ ಕಲಿತುಕೊಳ್ಳುವುದೆಂದು ಭಾವಿಸಿ, ತಮ್ಮ ಮಗುವಿಗೆ ಇಂಗ್ಲಿಷ್ ಕಲಿಸಲು ಪ್ರಯತ್ನಿಸುವರು. ಧರ್ಮನಿರಪೇಕ್ಷತೆ ಅವರ ಆದರ್ಶವಾದುದರಿಂದ ತಮ್ಮ ಧರ್ಮದ ಆಚರಣೆಯನ್ನು ಬಿಟ್ಟು, ನಾಗರಿಕತೆಯನ್ನು ಕಲಿಸುವರು. ಇಂಗ್ಲಿಷ್ ಅಕ್ಷರ ಕಲಿಯಲು ಮೂರು ವರ್ಷದ ಎಲ್‌ಕೆಜಿ ಮಕ್ಕಳನ್ನು ಟ್ಯೂಷನ್ನಿಗೆ ಸೇರಿಸಿ, ಮನೆಯಲ್ಲೂ ಹಿಂಸೆ ನೀಡಿ ಓದಿಸುವ ತಾಯಂದಿರು ಮಗು ಬೆಳೆದ ಮೇಲೆ ಅವರಲ್ಲಿ ಮೌಲ್ಯಗಳನ್ನು ಅಳವಡಿಸಲು ಸಾಧ್ಯವೆ? ತಾಯ್ತಂದೆಯರಿಗೆ ತಮ್ಮ ಭಾಷೆ, ಸಂಸ್ಕೃತಿಗಳ ಬಗ್ಗೆ ಇರುವ ಕೀಳರಿಮೆ, ಅವರೇ ಮೌಲ್ಯರಹಿತ ಜೀವನ ನಡೆಸುವುದನ್ನು ಕಂಡ ಮಗು, ಬೆಳೆದ ಮೇಲೆ, 'ಪ್ರಪಂಚದ ಎಲ್ಲವನ್ನೂ ನನ್ನ ಹಿಡಿತಕ್ಕೆ ಎಟುಕುವ ಸೂತ್ರಗಳಿಂದ ಕಟ್ಟಿ, ಗೊಂಬೆಯಂತೆ ಕುಣಿಸುತ್ತೇನೆ' ಎಂಬ ಹುಂಬತನದಲ್ಲಿ ವರ್ತಿಸಿ, ತನ್ನ ತಾಯ್ತಂದೆಯರನ್ನು ತಿರಸ್ಕರಿಸಿದರೆ, ಕಾರಣ ಯಾರು?

ಶೈಶವ ಹಾಗೂ ಬಾಲ್ಯದಲ್ಲಿ ನಿರಂತರವಾದ ಹಿಂಸೆ, ಒತ್ತಡ, ಕ್ರೌರ್ಯಗಳಿಗೆ ಒಳಗಾದರೆ, ಸರಿತಪ್ಪುಗಳನ್ನು ನಿರ್ಣಯಿಸಿ ಕೆಲಸ ಮಾಡುವಂತೆ ಅಥವಾ ಸುಮ್ಮನಿರುವಂತೆ ಮಾಡುವ ಮೆದುಳಿನ ಪ್ರಿಫ್ರಾಂಟಲ್ ಕಾರ್ಟೆಕ್ಸ್ ಮೇಲೆ ವ್ಯತಿರಿಕ್ತ ಪರಿಣಾಮ ಉಂಟಾಗಿ, ಅದು ಮಗುವಿನ ನಡವಳಿಕೆಯನ್ನು ಅಸ್ತವ್ಯಸ್ತ ಮಾಡಬಹುದು. ವಿಕೃತ ನಡವಳಿಕೆಯಿಂದ ಮಾತ್ರ ಹುಡುಗನಿಗೆ ಮಾನಸಿಕ ಸಮಸ್ಯೆ ಇರುವುದು ಇತರರಿಗೆ ಗೊತ್ತಾಗುತ್ತದೆ. ಉಳಿದಂತೆ ಎಲ್ಲರಂತೆ ಇರುತ್ತಾನೆ.

ಗ್ರಾಮೀಣ ಪರಿಸರದ ಶಿಕ್ಷಣ, ಮಕ್ಕಳ ಪಾಲನೆಯಲ್ಲಿ ಹೆಸರು ಮಾಡಿದ ಪ್ರೊ. ಜಿ.ಎಸ್. ಜಯದೇವ ಅವರು ಪೃಥ್ವಿ ಎಂಬ ೧೩ ವರ್ಷದ ಹುಡುಗನ ಉದಾಹರಣೆ ನೀಡುತ್ತಾರೆ. ತಂದೆ ತೀರಿದ ಬಳಿಕ ತಾಯಿ ಮರುಮದುವೆ ಆದಾಗ, ಎರಡನೆಯ ಗಂಡ ನಾಲ್ಕು ವರ್ಷದ ಇವನನ್ನು ಹೊಡೆದು ಓಡಿಸಿದ. ಕೆಲವು ದಿನ ಭಿಕ್ಷೆ ಬೇಡುತ್ತಿದ್ದ ಇವನನ್ನು ಸರ್ಕಾರದವರು ವಶಕ್ಕೆ ತೆಗೆದುಕೊಂಡು ಇವರ ಸಂಸ್ಥೆಗೆ ವರ್ಗಾಯಿಸಿದರು. ಮೊದಲು ಸಂವೇದನಾ ರಹಿತನಾಗಿದ್ದು, ಮುರುಟಿಕೊಂಡಿದ್ದ ಇವನು ಪ್ರೀತಿ, ಆರೈಕೆಗಳಿಂದ ಚುರುಕಾದ. ಅಪರೂಪಕ್ಕೊಮ್ಮೆ ಅಸ್ವಾಭಾವಿಕವಾಗಿ ಕಳ್ಳತನ ಮಾಡುತ್ತಿದ್ದ. ಒಮ್ಮೆ ದುಬಾರಿ ಕಾರಿನ ಗಾಜು ಒಡೆದ. 'ಏಕೆ ಒಡೆದೆ' ಎಂದು ಒಂದುಗಂಟೆ ಕಾಲ ಪ್ರಶ್ನಿಸಿದರೂ ಹೇಳದೆ ಇದ್ದಾಗ, ಕಾರಿನ ಒಡೆಯರ ಮನೆಯಲ್ಲೇ ನಿಂತಿರುವ ಶಿಕ್ಷೆ ನೀಡಿದರು. ಕಾರಿನವರು ಪೊಲೀಸಿಗೆ ಕೊಡದೆ, ಇವನನ್ನು ಹೋಗಲಿ ಎಂದು ಬಿಟ್ಟರು. 'ನಮ್ಮ ಕಾರಿನ ಗಾಜನ್ನು ಏಕೆ ಒಡೆದೆ?'ಎಂದು ಅವರು ಕೇಳಿದಾಗ, 'ಕಾರಿನ ಹಿಂದೆ ಪುಟ್ಟ ಆಟದ ಕಾರಿತ್ತು, ಅದಕ್ಕಾಗಿ' ಎಂದ. ಹುಡುಗನನ್ನು ಪರಿಚಿತ ಮನಶ್ಶಾಸ್ತ್ರಜ್ಞರಿಗೆ ತೋರಿಸಿದರು. ಅವರು ಕಹಿ ಬಾಲ್ಯದ ಹಿನ್ನೆಲೆಯ ಮಕ್ಕಳು ಇಂತಹ ದುಸ್ಸಾಹಸಗಳನ್ನು ಮಾಡುತ್ತಾರೆ. ಎಷ್ಟೋ ಮಕ್ಕಳು ಕೃತ್ಯಕ್ಕೆ ಕಾರಣವನ್ನು ಸೃಷ್ಟಿಸುತ್ತಾರೆ. ಗಾಜು ಒಡೆಯುವ ದೃಶ್ಯದ ಹುಟ್ಟಿಸುವ ಉದ್ರೇಕವನ್ನು ಆಶಿಸಿರಬಹುದು. ಬೇರೆ ಮಕ್ಕಳಿಗೆ ಇಂತಹ ಕೆಲಸ ಮಾಡದಂತೆ ಮೆದುಳಿನ ಪ್ರಿಫ್ರಾಂಟಲ್ ಕಾರ್ಟೆಕ್ಸ್ ಸಂದೇಶ ನೀಡುತ್ತದೆ. ೧೨-೧೩ ಪ್ರಾಯದಲ್ಲಿ ಈ ಭಾಗ ಪೂರ್ತಿ ಬೆಳೆದಿರದೆ ಇರುವುದು ಸಮಸ್ಯೆಯನ್ನು ದ್ವಿಗುಣಗೊಳಿಸುತ್ತದೆ. ಮನಶ್ಶಾಸ್ತ್ರಜ್ಞರು ಶಿಕ್ಷೆಗಿಂತ ಪಶ್ಚಾತ್ತಾಪ ಮೂಡಿಸುವುದು ಮುಖ್ಯ ಎಂದರು. ಮಾಲಿಕ 'ಕನಿಕರವಿಲ್ಲದ ಅಪರಿಚಿತ ಅನಾಮಧೇಯ ಶ್ರೀಮಂತ' ಎಂದು ಭಾವಿಸುತ್ತ ಹುಡುಗನ ಮನಸ್ಸು ತನ್ನ ಹೀನಕೃತ್ಯವನ್ನು ಮರೆಮಾಚಲು ಪ್ರಯತ್ನಿಸುವುದು ಸ್ವರಕ್ಷಣಾ ವಿಧಾನ. ಆದರೆ ಮಾಲಿಕ ಒಳ್ಳೆಯ ಮನುಷ್ಯ, ತನ್ನಿಂದ ಅವನಿಗೆ ನಷ್ಟವಾಗಿದೆ ಎಂದು ಮನವರಿಕೆ ಮಾಡಿದಾಗ ಮಾತ್ರ ಹುಡುಗ ಪಶ್ಚಾತ್ತಾಪಪಡುವನು. ಬಾಯಿಮಾತಿನ ಪಶ್ಚಾತ್ತಾಪ ನಿಷ್ಪ್ರಯೋಜಕ. ವಾಹನದ ಮಾಲಿಕನ ಮನೆಯಲ್ಲಿ ಕೆಲಸ ಮಾಡಿಕೊಟ್ಟು ನಷ್ಟ ಸ್ವಲ್ಪ ಸರಿದೂಗಿಸುವುದು ಸರಿಯಾದ ಶಿಕ್ಷೆ ಎಂದರು. ಹೀಗೆ ಮಾಡಿದರೆ ತನ್ನ ವಿಕೃತ ಸ್ವಭಾವಗಳಿಂದ ತಾನು ಮಾಡಿದ್ದು ಅಷ್ಟೇನೂ ಕೆಟ್ಟದ್ದಲ್ಲ ಎಂಬ, ಅಪರಾಧಿ ಪ್ರಜ್ಞೆಯೇ ಇಲ್ಲದ ಒರಟು ಮನೋಭಾವನೆಯಿಂದ ತನ್ನ ವರ್ತನೆಯನ್ನು ಸಮರ್ಥಿಸಿ, ರೂಢಿಸಿಕೊಳ್ಳದಂತೆ ತಡೆಯಬಹುದು. ಶಿಕ್ಷೆಯ ಸ್ವರೂಪ ಕೂಡ ಅರ್ಥವತ್ತಾಗಿರಬೇಕು.

ಪೃಥ್ವಿಯ ಎಳೆತನದ ನೆನಪುಗಳಾವುವೂ ಮಾತಿನಲ್ಲಿ ದಾಖಲಾಗಿಲ್ಲ; ತಾಯಿ ತೊರೆದದ್ದು, ಮಲತಂದೆ ಹೊಡೆದು ಓಡಿಸಿದ್ದು, ಹಸಿವಿನ ಅಭದ್ರತೆಯಲ್ಲಿ ನರಳಿದ್ದು ಇವು ಯಾವುವೂ ನೆನಪಿಲ್ಲ. ಆದರೆ ಆ ಕಹಿಗಳೆಲ್ಲ ಹರಳುಗಟ್ಟಿ, ಮನದ ಆಳದಲ್ಲಿ ಸ್ನಿಗ್ಧವಾದ ನೋವಿನ ಗಂಟುಗಳಾಗಿ ಉಳಿದುಬಿಟ್ಟಿತ್ತು. ಇಂತಹ ಕಹಿಗಳು ಜೀವನದುದ್ದಕ್ಕೂ ವಿಕೃತ ನಡವಳಿಕೆಗಳನ್ನು ಪ್ರಚೋದಿಸುತ್ತಲೇ ಇರುತ್ತವೆ. ಇದನ್ನು ಅರಿತರೆ ಮಕ್ಕಳ ಶೈಶವ, ಬಾಲ್ಯಗಳನ್ನು ಹೇಗೆ ಗೌರವಿಸಬೇಕೆಂದು ಅರ್ಥವಾಗುತ್ತದೆ. ಸಿಹಿ ಬಾಲ್ಯ ದೊರೆತರೆ ಸಮಸ್ಯಾಸಾಗರವೇ ಪರಿಹಾರವಾದಂತೆ.

ಸುಪ್ತಪ್ರಜ್ಞೆ ನಮ್ಮ ವರ್ತನೆಯನ್ನು ನಿರ್ದೇಶಿಸುತ್ತದೆ, ಬುದ್ಧಿಯಲ್ಲ. ಸುಪ್ತಪ್ರಜ್ಞೆಗೆ ಅರ್ಥವಾಗುವುದು ನಮ್ಮ ತರ್ಕವಲ್ಲ, ಭಾವನೆಗಳು. ಭಾವನೆಗಳನ್ನು ಸಾಮಾಜಿಕವಾಗಿ ನಿರ್ವಹಿಸುವ ಕಲೆ ನಮ್ಮ ಸಾಂಪ್ರದಾಯಿಕ ಆಚರಣೆಗಳಿಗೆ ಇವೆ. ಬಾಲ್ಯದಿಂದಲೇ ನಮ್ಮ ಮಕ್ಕಳನ್ನು ಇಂತಹ ಸಾಂಪ್ರದಾಯಿಕ ಆಚರಣೆಗಳಲ್ಲಿ ಭಾಗವಹಿಸುವಂತೆ ಮಾಡಿದರೆ ಅವರ ನೈತಿಕ ಜೀವನವನ್ನು ರೂಪಿಸಿದಂತೆಯೆ. ಬರಿಯ ಬುದ್ಧಿವಾದಗಳಿಂದ ಭಾವಲೋಕವನ್ನು ನಿರ್ಮಿಸುವುದು ಅಸಾಧ್ಯ.

ಸ್ವಾಮಿ ವಿವೇಕಾನಂದರು ನೈತಿಕ ಆದರ್ಶವಾಗಿ ಮಾನವನ ಸುಪ್ತದೈವಿಕತೆಯನ್ನೇ ಇಟ್ಟುಕೊಂಡು, ಅದನ್ನು ಅಭಿವ್ಯಕ್ತಗೊಳಿಸುವುದೇ ನೈತಿಕತೆ ಎಂದರು. ಸಾಂಪ್ರದಾಯಿಕ ಆತ್ಮಸಿದ್ಧಾಂತವನ್ನು ಸಾಮಾಜಿಕ ಪರಿವರ್ತನೆಯ ಅಸ್ತ್ರವನ್ನಾಗಿಸಿದರು. ಸ್ವಾರ್ಥದಿಂದ ಕೂಡಿರುವುದು ಅನೈತಿಕತೆ, ನಿಸ್ವಾರ್ಥವೇ ನೈತಿಕತೆ ಎಂಬುದು ಅವರ ಸೂತ್ರ. ನೀತಿಶಾಸ್ತ್ರವೇ ಏಕತೆಗೆ ಸಂಬಂಧಪಟ್ಟದ್ದು; ಅದರ ಅಡಿಪಾಯವೇ ಪ್ರೀತಿ. ಏಕತೆಯ ಹೊರಸೂಸುವಿಕೆಯನ್ನೇ ನಾವು ಪ್ರೀತಿ, ಸಹಾನುಭೂತಿ ಇತ್ಯಾದಿಯಾಗಿ ಕರೆಯುವುದು. ಇದೇ ನಮ್ಮ ನೀತಿಗೆ ಮತ್ತು ಧರ್ಮಕ್ಕೆಲ್ಲ ಮೂಲ. **ತತ್ ತ್ವಂ ಅಸಿ** ಎಂಬ ವೇದಾಂತದ ಅತಿ ಮುಖ್ಯವಾದ ವಾಕ್ಯದಲ್ಲಿ ಇದನ್ನು ಸಂಗ್ರಹಿಸಿ ಹೇಳಿದ್ದಾರೆ ಎನ್ನುತ್ತಾರೆ ಅವರು. ಇದು ಬರಿ ವೇದಾಂತವಾಗಿ ಉಳಿಯದೆ, ಸೇವಾರೂಪದಲ್ಲಿ ಹೊರತೋರಿದಾಗ ಮಾತ್ರ ಇದಕ್ಕೆ ಬೆಲೆ. ಹೀಗಾಗಿಯೆ ಸ್ವಾಮಿಜಿ ಭಾರತದಲ್ಲಿ ಸೇವಾಕಾರ್ಯಗಳಿಗೆ ಒತ್ತುಕೊಟ್ಟು, 'ಶಿವಜ್ಞಾನೇ ಜೀವಸೇವಾ' ಎಂಬ ತತ್ತ್ವವನ್ನು ರೂಢಿಗೆ ತಂದರು. ಹೀಗೆ, ಪ್ರಾಯೋಗಿಕವಾಗಿ ಸೇವೆಯಿಂದ ಕೂಡ ವ್ಯಕ್ತಿಯ ನೈತಿಕ ಜೀವನ ರೂಪ ಪಡೆಯುತ್ತದೆ.

ಕಷ್ಟಕ್ಕೆ ಸಿಲುಕಿದ ವಿದ್ಯಾರ್ಥಿಯೊಬ್ಬನನ್ನು ಇಡೀ ತರಗತಿ ತನು–ಮನ–ಧನಗಳಿಂದ ಬೆಂಬಲಿಸಿ, ಧನ್ಯತಾಭಾವವನ್ನು ಅನುಭವಿಸಿದ್ದನ್ನು ನೋಡಿದ್ದೇನೆ. ಎಲ್ಲರಲ್ಲಿ ಸಹಪಾಠಿಯ ಪಾಡಿನ ಬಗ್ಗೆ ಅನುಕಂಪ; ಅವರಲ್ಲಿ ಏಕತೆ ಮೂಡಿ, ಒಂದು ಗುರಿಗಾಗಿ ತಾವೆಲ್ಲ ಒಟ್ಟಾಗಿ ಪ್ರಯತ್ನಿಸುತ್ತಿದ್ದೇವೆ, ಇದರಿಂದ, ತಮ್ಮ ಜೀವನ ಹೊಸ ಅರ್ಥ ಪಡೆದುಕೊಂಡಿದೆ ಎಂದು ಅನ್ನಿಸಿತ್ತು. ತರಗತಿಯಲ್ಲಿನ ಇರುವಿಕೆ ಬೇಸರ ತರಿಸದೆ, ಚೈತನ್ಯದಾಯಕ ಅನ್ನಿಸಿತು.

ಎಳೆಯರಿಗೆ ದೇಹಭಾಷೆ ಅರ್ಥವಾಗುತ್ತದೆ; ಆದರೆ ನಮ್ಮ ಮಾತುಗಳು ಪೂರ್ತಿಯಾಗಿ ಅರ್ಥವಾಗುವುದಿಲ್ಲ. ಅವರಿಗೆ ಏನನ್ನಾದರೂ ಮಾಡಲು ಹೇಳಿ ಮಾಡಿಸಬಹುದು. ಸ್ವಲ್ಪ ವರ್ಷಗಳ ಹಿಂದೆ ಹಿರಿಯರ ಬಲವಂತಕ್ಕೆ ನಿತ್ಯಕರ್ಮಗಳು, ಸ್ತೋತ್ರಪಾಠ, ದೇವರಿಗೆ ನಮಿಸುವುದು, ಮುಖ್ಯವಾಗಿ ಮನೆಗೆಲಸದಲ್ಲಿ ಸಣ್ಣಪುಟ್ಟ ಕೆಲಸ ಮಾಡಿಕೊಟ್ಟು ಸಹಾಯ ಮಾಡುವುದು, ಗುರುಹಿರಿಯರ ಸೇವೆ ಇವುಗಳನ್ನು ಎಲ್ಲ ಮಕ್ಕಳೂ ಮಾಡಲೇಬೇಕಿತ್ತು. ಇದರಿಂದ ತಾವೂ ಎಲ್ಲರೊಳಗೆ ಒಂದು ಎಂಬ ಭಾವ ಬರುತ್ತಿತ್ತು. ಈಗ ತಂದೆ, ತಾಯಿ, ಒಂದು ಮಗು ಇರುವ ಪುಟ್ಟ ಸಂಸಾರದಲ್ಲಿ ಮಗುವಿನ ಕರ್ತವ್ಯ ಕೇವಲ ಓದುವುದು ಮಾತ್ರ ಆಗಿದ್ದು, ಎಲ್ಲರ ಮುದ್ದಿನಲ್ಲಿ ಏನೂ ಕೆಲಸ ಮಾಡಿಸದೆ, ಮನೆಯವರಿರುವುದು ತನ್ನ ಸೇವೆ ಮಾಡಲು ಎಂಬ ಭಾವದಲ್ಲಿ ಮಗುವಿನಲ್ಲಿ ಬೆಳೆಯುತ್ತದೆ. ನಮ್ಮಲ್ಲಿ ಧರ್ಮ ಅಥವಾ ನೈತಿಕತೆಯ ಮೂಲ ಮನೋನಿಯಂತ್ರಣವಾಗಿದ್ದು, ಸ್ವೇಚ್ಛೆಯಿಂದ ಬೆಳೆಯಲು ಬಿಟ್ಟ ಮಗು ಯಾವುದನ್ನೂ ಗಮನಿಸದ, ಗೌರವಿಸದ ಮನಸ್ಥಿತಿಯಲ್ಲಿ ಇರುತ್ತದೆ. ಮನೆಯಲ್ಲಿ ಇತರ ಮಕ್ಕಳಿದ್ದರೆ ಹಂಚಿಕೊಂಡು ತಿನ್ನುವುದು, ಆಡುವುದು ಗೊತ್ತಿರುತ್ತಿತ್ತು; ತಾಯಿಯ ಪ್ರೀತಿ ಕಡಿಮೆಯಾಗುವುದೆಂದು ತನ್ನ ಸ್ವೇಚ್ಛಾಪ್ರವೃತ್ತಿಗೆ ಕಡಿವಾಣ ಹಾಕಿಕೊಳ್ಳುತ್ತಿತ್ತು.

ಇಂತಹ ಮಕ್ಕಳೇ ಇರುವ ನಮ್ಮ ಶಾಲೆಯಲ್ಲಿ ಮಾಡಿದ ಪ್ರಯೋಗವೊಂದು ಹೀಗಿದೆ: ಮೊದಲ ವರ್ಷ ಸರಸ್ವತೀ ಸ್ತುತಿ ಹೇಳಿಸಿದಾಗ ಮೊದಲ ಪೀರಿಯಡ್ಡಿನಲ್ಲಿ ಏಕಾಗ್ರತೆ ಹೆಚ್ಚಿತ್ತು. ಅನಂತರ ಈ ವರ್ಷ ಶಾಲೆಯ ಆರಂಭದಲ್ಲಿ ಹಾಗೂ ಕೊನೆಯಲ್ಲಿ ಹತ್ತು ನಿಮಿಷ ಓಂಕಾರ ಧ್ಯಾನ ಮಾಡಿಸಿದಾಗ ಇಡೀದಿನ ಗಲಾಟೆ ಇಲ್ಲದೆ ಪಾಠ ಕೇಳಲಾರಂಭಿಸಿದರು. ಉತ್ಸಾಹಿತರಾದ ಅಧ್ಯಾಪಕರು ಸರಳ ಮಂತ್ರಗಳು, ಸ್ತೋತ್ರಗಳನ್ನು ಹೇಳಿಸಿ ಪಾಠ ಆರಂಭಿಸುತ್ತಿದ್ದಾರೆ; ಮಕ್ಕಳು ಓದಿನಲ್ಲಿ ತೊಡಗಿಸಿಕೊಳ್ಳುವಿಕೆ ಹೆಚ್ಚಿದೆ. ಮಾತಿಗಿಂತ ಕೃತಿ ಮೇಲು ಎಂಬುದು ಅನುಭವಕ್ಕೆ ಬಂತು. ಇನ್ನೊಂದು ಪ್ರಯೋಗ ಕೈಬರಹದ್ದು. ಉತ್ಸಾಹೀ ಹಿರಿಯರೊಬ್ಬರು ಒಂಬತ್ತು ಹಾಗೂ ಹತ್ತನೆ ತರಗತಿಯ ಎಲ್ಲ ಲೆಕ್ಕಗಳನ್ನು ಬಿಡಿಸಿ ಕಂಪ್ಯೂಟರ್‌ಗೆ ಹಾಕಿದ್ದರು. ಅದನ್ನು ಧ್ವನಿಯೊಡನೆ ಪರದೆಯ ಮೇಲೆ ತೋರಿಸಿದಾಗ, ಮಕ್ಕಳು ಅಷ್ಟಾಗಿ ಗಮನ ನೀಡದೆ, ಕಲಿಯಲಿಲ್ಲ. ಅವೇ ಲೆಕ್ಕಗಳನ್ನು ಕೈಬರಹದಲ್ಲಿ, ಕ್ರಮವಾದ ಹಂತಗಳಲ್ಲಿ ಪರದೆಯ ಮೇಲೆ ತೋರಿಸುವಾಗ, ಅಧ್ಯಾಪಕರೇ ಅವನ್ನು ಬಿಡಿಸುತ್ತಿದ್ದಾರೆ ಎಂಬ ಭಾವನೆ ಅವರಲ್ಲಿ ಬಂದಿತು! ಅವರು ಧ್ಯಾನದ ಅನುಭವಕ್ಕೆ, ಕೈಬರಹಕ್ಕೆ ಹೊಂದಿಕೊಳ್ಳುತ್ತ ಹೋದುದನ್ನು ಯಾವ ತರ್ಕದಿಂದ ವಿವರಿಸಬಹುದು? ಅನುಭವ ತರ್ಕಾತೀತ.

ನಾನು ಗುಂಪಿಗೆ ಸೇರಿದವನು ಎಂಬ ಭಾವ (sense of belonging) ಮಗುವಿನಲ್ಲಿ ಮೂಡುವುದು ಮುಖ್ಯ. ಸುಭದ್ರತೆಯ ಭಾವನೆ ಇದರಿಂದ ಉಗಮವಾಗುತ್ತದೆ. ಮುಗ್ಧಮನಸ್ಸಿನ ಅಖಂಡತೆಯಿಂದಾಗಿ ಮಗುವಿನ ಕಲಿಕೆಯ ಸಾಮರ್ಥ್ಯವು ಅಸಾಧಾರಣವಾಗಿರುತ್ತದೆ; ಇನ್ನೊಬ್ಬರಿಂದ ಮುಚ್ಚಿಟ್ಟುಕೊಳ್ಳುವುದೇನೂ ಇರದ್ದರಿಂದ ಭಾವನೆಗಳೂ ತೀವ್ರವಾಗಿರುತ್ತವೆ. ಇಂದಿನ ಶಿಕ್ಷಣವು ಅಖಂಡವಾದುದನ್ನು ಮುರಿದು ಭಾಗಗಳಾಗಿ ವಿಂಗಡಿಸಿ ಮತ್ತೆ ಜೋಡಿಸುವ ಆಟವಾಗಿದೆ. ತನಗೆ ಸುಳ್ಳು ವ್ಯಕ್ತಿತ್ವವನ್ನು ಕಲ್ಪಿಸಿಕೊಳ್ಳುವ ಮೂಲಕ ಮಗು ಆ ವ್ಯಕ್ತಿತ್ವವನ್ನು ನಿರಂತರ ಪೋಷಿಸಬೇಕಾದ ಒತ್ತಡಕ್ಕೆ ಸಿಲುಕುತ್ತದೆ. ಹೀಗಾಗಿ ಸಹಜವಾಗಿ ಮಕ್ಕಳಲ್ಲಿರುವ ನೈತಿಕತೆಗೂ, ಸುತ್ತ ಇರುವ ಹಿರಿಯರ ನೈತಿಕತೆಗೂ ವ್ಯತ್ಯಾಸ ಇದ್ದು, ತರ್ಕ, ಇಚ್ಛಾಶಕ್ತಿ ಬೇಕಾಗುವ ಈ ಸಾಮಾಜಿಕ ನೈತಿಕತೆಯನ್ನು ಮಕ್ಕಳಿಗೆ ಕಲಿಸುವುದು ಕಷ್ಟ. ನೈತಿಕತೆಯ ಮುಖವಾಡವನ್ನು ಅವರು ವಿರೋಧಿಸುತ್ತಾರೆ; ಬಲವಂತವಾಗಿ ಹೇರಿದರೆ, ಗಲಿಬಿಲಿಗೊಳ್ಳುತ್ತಾರೆ. ಸ್ವಾಮಿ ವಿವೇಕಾನಂದರು ಹೇಳುವ ನೈತಿಕತೆ ಆತ್ಮನ ಪರಿಶುದ್ಧತೆಯ ಮೇಲೆ, ಸುಪ್ತ ದೈವಿಕತೆಯ ಮೇಲೆ ಆಧಾರಿತವಾಗಿದ್ದು, ಯಾವುದೇ ಒತ್ತಾಯ, ನಿರ್ಬಂಧಗಳಿಂದ ದೂರವಾಗಿದೆ. ಸಹಜವಾಗಿ ಇರುವ ಇಂತಹ ನೈತಿಕತೆ ಸರ್ವತ್ರ ಮಾನ್ಯವಾಗಬೇಕಿದೆ.

ಭಾರತದ ಯುವಜನತೆಗೆ ಸ್ವಾಮಿ ವಿವೇಕಾನಂದರ ಆದರ್ಶಗಳು

ಹಳೇಕೋಟೆ ಎನ್. ರಮೇಶ್

ಸ್ವಾಮಿ ವಿವೇಕಾನಂದರ ಸ್ಫೂರ್ತಿದಾಯಕ ನುಡಿಗಳ ಹಿಂದಿರುವ ಪ್ರೇರಣಾತ್ಮಕ ಶಕ್ತಿಯನ್ನು ಕುರಿತು ಇಲ್ಲಿ ವಿವರಿಸಿರುವ ಲೇಖಕರು, ಆಧುನಿಕ ವಿಚಾರ, ಆಸಕ್ತಿಗಳೊಂದಿಗೆ ಸಾಂಪ್ರದಾಯಿಕ ಕೃಷಿಜೀವನವನ್ನು ಅಳವಡಿಸಿಕೊಂಡಿದ್ದು, ಅನೇಕ ಗ್ರಂಥಗಳನ್ನು ರಚಿಸಿದ್ದಾರೆ.

''ನಿಮಗೆ ಭಾರತವನ್ನು ತಿಳಿಯಬೇಕೆಂಬ ಆಸೆಯಿದ್ದರೆ ವಿವೇಕಾನಂದರನ್ನು ಅಧ್ಯಯನ ಮಾಡಿ, ಅವರಲ್ಲಿ ಎಲ್ಲವೂ ಸಕಾರಾತ್ಮಕ, ನಿಷೇಧಾತ್ಮಕವಾದುದು ಯಾವುದೂ ಇಲ್ಲ'' ಎಂದು ವಿಶ್ವಕವಿ ರವೀಂದ್ರನಾಥ ಠಾಕೂರ್ ಹೇಳಿದ್ದಾರೆ. ಸ್ನೇಹಿತರೇ, ಭಾರತದ ಪುನರುತ್ಥಾನದ ಪ್ರಥಮ ಮುಹೂರ್ತದಲ್ಲಿ ಸ್ವಾಮೀಜಿಯವರ ಪಾಂಚಜನ್ಯ ಸದೃಶವಾದ ಧೀರ ಮತ್ತು ಶಕ್ತಿಸಂಚಾರಕ ಸಿದ್ಧವಾಣಿಯು ವ್ಯಕ್ತಿ-ವ್ಯಕ್ತಿಗಳಲ್ಲಿ ಮತ್ತು ಸಮಗ್ರ ರಾಷ್ಟ್ರದಲ್ಲಿ ಸುರುಳಿ ಸುತ್ತಿ ಸುಪ್ತವಾಗಿದ್ದ ಕುಂಡಲಿನೀ ಶಕ್ತಿಯನ್ನೇ ಎಚ್ಚರಿಸಿ ಕಾರ್ಯಶೀಲವನ್ನಾಗಿ ಮಾಡಿತು. ಇದು ಹಿಂದೆ ಎಂದೋ ಆಗಿ ಹೋದ ಐತಿಹಾಸಿಕ ವಿಷಯವಾಗಿಲ್ಲ, ಇಂದೂ ಜೀವಂತವಾಗಿ, ಸಶಕ್ತವಾಗಿ ಕೋಟ್ಯಂತರ ಹೃದಯಗಳನ್ನು ನಡೆಸುತ್ತಿರುವ ಶಕ್ತಿ ಸ್ಫೂರ್ತಿ - ಜ್ಯೋತಿಯಾಗಿದೆ ಮತ್ತು ಮುಂದೆ ಹುಟ್ಟಿ ಬರುವ ಅಸಂಖ್ಯ ಜೀವರುಗಳಿಗೆ ಮಾರ್ಗದರ್ಶಕ ಸ್ತಂಭ ದೀಪಿಕೆಯಾಗಲಿದೆ.

ನೀವೆಲ್ಲಾ ತಿಳಿದಿರುವಂತೆ ಸ್ವಾಮೀಜಿ ಕೇವಲ ಒಬ್ಬ ಸಂನ್ಯಾಸಿ ಮಾತ್ರವಲ್ಲ, ಅವರು ಅಪ್ರತಿಮ ದೇಶಭಕ್ತ, ಅಸಾಧಾರಣ ವಾಗ್ಮಿ, ಅಪೂರ್ವವಾದ ಸಮಾಜ ಸುಧಾರಕ, ಆಧುನಿಕ ಭಾರತದ ನಿರ್ಮಾತೃ, ಜ್ಞಾನ-ವಿಜ್ಞಾನ, ತಂತ್ರಜ್ಞಾನಗಳ ಸಾಕಾರಮೂರ್ತಿ; ಆಧ್ಯಾತ್ಮಿಕ ಶಕ್ತಿಯೊಡನೆ ಎಲ್ಲವೂ ಸಾಧ್ಯ ಎಂದು ತೋರಿಸಿಕೊಟ್ಟ ವೀರೋದಾತ್ತ, ವಿರಕ್ತ ವಿರಾಗಿ.

ಅವರು ಯುವಕರಿಗೆ ಮಾನಸಿಕ ಏಕಾಗ್ರತೆಯನ್ನು ಅಭಿವೃದ್ಧಿಗೊಳಿಸಿಕೊಳ್ಳಲು, ಆಧ್ಯಾತ್ಮ ಹಾಗೂ ನೈತಿಕತೆಯನ್ನು ಗಟ್ಟಿಗೊಳಿಸಲು, ಧಾರ್ಮಿಕ ತಳಪಾಯದೊಂದಿಗೆ ಬದುಕನ್ನು ಕಟ್ಟಿಕೊಳ್ಳಲು ಹಾಗೂ ನಿಃಸ್ವಾರ್ಥ ಮನೋಭಾವ ಮತ್ತು ತ್ಯಾಗವೇ ಪರಮಾದರ್ಶವೆಂದು ಸಾರಿ ತಿಳಿಸಿದ್ದಾರೆ. ''ಈ ನಮ್ಮ ಪುಣ್ಯಭೂಮಿಯು ಧರ್ಮ ಮತ್ತು ತತ್ತ್ವಗಳ ತವರುಮನೆ. ಆಧ್ಯಾತ್ಮಿಕ ವೀರರ ಜನ್ಮಸ್ಥಾನ, ತ್ಯಾಗಿಗಳ ನಾಡು, ರಾಷ್ಟ್ರಜೀವನದ ತಳಪಾಯ. ಜೀವನದ ಕೇಂದ್ರವು ಧರ್ಮವಲ್ಲದೆ ಬೇರಲ್ಲ, ಆದ್ದರಿಂದ ಅಧ್ಯಾತ್ಮದಿಂದಲೇ ಜೀವನ, ಇದನ್ನು ಬಿಟ್ಟು ಬೇರೆ ಏನನ್ನೂ ಚಿಂತಿಸದಿರಿ. ಈ ಶಕ್ತಿಯೇ ಎಲ್ಲಕ್ಕೂ ಮೂಲ ಹಾಗೂ ಪ್ರೇರಕವಾಗಿದೆ'' ಎಂಬ ದುಂದುಭಿಯನ್ನು ಅವರು ಮೊಳಗಿಸಿದರು.

''ಶುದ್ಧ ಚಾರಿತ್ರ್ಯವೊಂದೇ ಕಷ್ಟ ಪರಂಪರೆಗಳ ಅಭೇದ್ಯ ಕೋಟೆಯನ್ನು ಸೀಳಿಕೊಂಡು ಹೋಗಬಲ್ಲದು. ಆದುದರಿಂದ ಮೊದಲು ಚಾರಿತ್ರ್ಯವನ್ನು ಬೆಳೆಸಿ. ಅದು ನೀವು ಮಾಡಬೇಕಾದ ಅತ್ಯುನ್ನತ ಕರ್ತವ್ಯ. ಶಕ್ತಿಶಾಲಿಗಳಾಗಿ, ಶ್ರದ್ಧಾವಂತರಾಗಿ. ಆಗ ಎಲ್ಲವೂ ನಿಶ್ಚಿತವಾಗಿ ಸಾಧಿಸಲ್ಪಡುತ್ತದೆ. ಶಕ್ತಿಯೆಲ್ಲ ನಿಮ್ಮೊಳಗೇ ಇದೆ. ನೀವು ಏನು ಬೇಕಾದರೂ ಮಾಡಬಲ್ಲಿರಿ. ಎಲ್ಲವನ್ನೂ ಮಾಡಬಲ್ಲಿರಿ'' ಎಂಬ ಸ್ವಾಮೀಜಿಯವರ ವೀರನುಡಿಗಳು ಇಂದಿನ ಯುವಜನತೆಗೆ ಅತ್ಯಗತ್ಯವಾಗಿದೆ.

''ಸಾಧ್ಯವಾದರೆ ಸಹಾಯ ಮಾಡಿ, ಇಲ್ಲದಿದ್ದರೆ ಇತರರನ್ನು ನೋಯಿಸಲು ಪ್ರಯತ್ನಿಸದಿರಿ. ನಿಮ್ಮ ತಪ್ಪಿಗಾಗಿ ಇತರರನ್ನು ದೂಷಿಸಬೇಡಿ. ನಿಮ್ಮ ಕಾಲ ಮೇಲೆ ನೀವು ನಿಲ್ಲಿ. ಸಂಪೂರ್ಣ ಜವಾಬ್ದಾರಿಯನ್ನು ನಿಮ್ಮ ತಲೆಯ ಮೇಲೆ ಹೊತ್ತುಕೊಳ್ಳಿ; ಹಿಂತಿರುಗಿ ನೋಡಬೇಡಿ. ಯಾವಾಗಲೂ ಮುನ್ನಡೆಯಿರಿ. ಅನಂತ ಶಕ್ತಿ, ಅನಂತ ಉತ್ಸಾಹ, ಸಾಹಸ ಮತ್ತು ತಾಳ್ಮೆಗಳಿಂದ ಏನನ್ನಾದರೂ ಸಾಧಿಸಬಹುದು ಎಂದು ಕಾಯುತ್ತಿರಿ.

''ಅನುಕರಣೆ ಎಂದಿಗೂ ಪ್ರಗತಿಯ ಗುರುತಲ್ಲ. ಅದೊಂದು ಹೀನ ಅವನತಿಯ ಚಿಹ್ನೆ. ನಿಮ್ಮ ಆಧ್ಯಾತ್ಮಿಕ ಸಂಪತ್ತನ್ನು ನಿರ್ಲಕ್ಷಿಸಿ, ಕಣ್ಣು ಕೋರೈಸುವ ಪಾಶ್ಚಾತ್ಯ ಭೌತಿಕ ನಾಗರಿಕತೆಯ ಬೆನ್ನು ಹತ್ತಿದಲ್ಲಿ ಮೂರು ತಲೆಮಾರುಗಳಲ್ಲಿ ನಿಮ್ಮ ಜನಾಂಗ ನಿರ್ನಾಮವಾಗುತ್ತದೆ'' ಎಂದು ಸ್ವಾಮೀಜಿ ನೀಡಿರುವ ಎಚ್ಚರಿಕೆಯ ಮಾತುಗಳನ್ನು ಇಂದು ಹೆಚ್ಚಾಗಿ ಯುವಜನತೆ ಮನಗಾಣಬೇಕಿದೆ.

ಸ್ವಾಮೀಜಿಯವರು ಭಾರತೀಯರೆಲ್ಲರನ್ನೂ ಅಮೃತಪುತ್ರರೆಂದು ಸಂಬೋಧಿಸಿದರು. ''ವೀರಾತ್ಮರೇ, ಧೀರರಾಗಿ. ನೆಚ್ಚುಗೆಡದಿರಿ, ಭಾರತೀಯರು ನಾವು ಎಂದು ಹೆಮ್ಮೆಯಿಂದ ಸಾರಿ ಹೇಳಿ. ಭಾರತೀಯರು ನಮ್ಮ ಪ್ರಾಣ. ಭಾರತೀಯ ಸಮಾಜ ನಮ್ಮ ಬಾಲ್ಯದ ತೊಟ್ಟಿಲು, ತಾರುಣ್ಯದ ನಂದನವನ, ವೃದ್ಧಾಪ್ಯದ ವಾರಣಾಸಿ ಎಂದು ಎದೆ ತಟ್ಟಿಕೊಂಡು ಘೋಷಿಸಿ'' ಎಂದು ಭಾರತೀಯರೆಲ್ಲರಿಗೂ ಹೇಳಿದರು.

ವಿವೇಕಾನಂದರು ಪಾಶ್ಚಾತ್ಯ ಅನುಕರಣೆಯ ಬಗ್ಗೆ ಉಗ್ರವಾಗಿ ಮಾತನಾಡುತ್ತಾರೆ. ಪಾಶ್ಚಾತ್ಯರ ಭಾವನೆ, ಭಾಷೆ, ಆಹಾರ, ಉಡಿಗೆ, ತೊಡಿಗೆ, ಆಚಾರ, ವ್ಯವಹಾರ ಮುಂತಾದವನ್ನು ಅನುಸರಿಸಿದರೆ, ನಾವು ಪಾಶ್ಚಾತ್ಯರೂ, ಬಲಾಢ್ಯರೂ ಮತ್ತು ಪರಾಕ್ರಮಶಾಲಿಗಳೂ ಆಗುವೆವು ಎಂದು ಅನೇಕಾನೇಕ ಆಧುನಿಕ ಭಾರತೀಯರು ಬೀಗುತ್ತಾರೆ. ಆದರೆ ಸ್ವಾಮೀಜಿ ಹೀಗೆ ಹೇಳುತ್ತಾರೆ: ''ಅಂಧ ಅನುಕರಣೆಯಿಂದ ಹೆರರ ಭಾವನೆ ಎಂದಿಗೂ ನಮ್ಮದಾಗದು, ಸಿಂಹದ ತೊಗಲನ್ನು ಧರಿಸಿದ ಮಾತ್ರಕ್ಕೆ ಕತ್ತೆ ಸಿಂಹವಾಗುವುದೆ?''

ಸ್ವಾಮಿ ವಿವೇಕಾನಂದರು ತಮ್ಮ ಶಕ್ತಿಯುತ ವ್ಯಕ್ತಿತ್ವದ ಮೂಲಕ, ಪ್ರಭಾವಪೂರ್ಣ ವಾಕ್‌ಶಕ್ತಿಯ ಮೂಲಕ ಹಾಗೂ ಪ್ರಬೋಧಕ ಬರಹಗಳ ಮೂಲಕ ನಮ್ಮ ರಾಷ್ಟ್ರಚೇತನವನ್ನು ಜಾಗೃತಗೊಳಿಸಿ, ಯುವಕರಲ್ಲಿ ನವೋತ್ಸಾಹವನ್ನು ಕೆರಳಿಸಿ, ಅವರಲ್ಲಿ ನಮ್ಮ ಸಂಸ್ಕೃತಿಯ ಬಗ್ಗೆ ಹೆಮ್ಮೆಯನ್ನು ಕುದುರಿಸಿ ಸ್ವತಂತ್ರ ನವಭಾರತ ನಿರ್ಮಾಣಕ್ಕೆ ಬುನಾದಿಯನ್ನು ಹಾಕಿದರು. ಸ್ವಾಮೀಜಿಯವರ ಕೃತಿಗಳನ್ನು ಓದಿದಾಗ ಇಂದಿಗೂ ಅವರ ಶಕ್ತಿ ಪ್ರಭಾವಗಳ ಸಂಚಾರ ನಮ್ಮಲ್ಲುಂಟಾಗುತ್ತದೆ. ಅಪಾರ ಜ್ಞಾನ, ಸಂಪತ್ತಿನಿಂದ ಕೂಡಿದ ಅವರ ಚಿಂತನೆಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ನಾವು ದೇವಮಾನರಾಗೋಣ.

ಭಗವದ್ಗೀತೆ : ಸೃಷ್ಟಿಯ ವಿಜ್ಞಾನ ಕೋಶ

ಡಾ. ಎಸ್.ಪಿ. ಯೋಗಣ್ಣ

ವೈಜ್ಞಾನಿಕ ಹಿನ್ನೆಲೆಯಲ್ಲಿ ಭಗವದ್ಗೀತೆಯ ವೈಶಿಷ್ಟ್ಯ ಹಾಗೂ ಉಪಯುಕ್ತತೆಯನ್ನು ವಿಶ್ಲೇಷಿಸಿರುವ ಲೇಖಕರು ನಿವೃತ್ತ ವೈದ್ಯಶಾಸ್ತ್ರ ಪ್ರಾಧ್ಯಾಪಕರಾಗಿದ್ದು, ಪ್ರಾಚೀನ ಭಾರತೀಯ ವೈದ್ಯವಿಜ್ಞಾನ, ಯೋಗ ಮೊದಲಾದ ವಿಷಯಗಳಲ್ಲಿ ಆಳವಾದ ಅಧ್ಯಯನ ನಡೆಸಿದ್ದಾರೆ. ಅವರು ಉತ್ತಮ ಲೇಖಕರೂ ಆಗಿದ್ದು, ಕನ್ನಡದಲ್ಲಿ 'ಸಮಗ್ರ ಆರೋಗ್ಯದರ್ಶನ' ಎಂಬ ಬೃಹತ್ ಗ್ರಂಥವನ್ನು ರಚಿಸಿದ್ದಾರೆ.

ಭಗವದ್ಗೀತೆಯಲ್ಲಿ ಸೃಷ್ಟಿಯ ಹುಟ್ಟು, ಬೆಳವಣಿಗೆಗೆ ಸಂಬಂಧಿಸಿದ – ಅದರಲ್ಲೂ ಮನುಷ್ಯನಿಗೆ ಸಂಬಂಧಿಸಿದ ಇಂದ್ರಿಯ ಮತ್ತು ಇಂದ್ರಿಯಾತೀತವಾದ ಜ್ಞಾನವಿದೆ. ಸಾಮಾನ್ಯರ ಬುದ್ಧಿಗೆ ನಿಲುಕುವ ಜ್ಞಾನ ಇಂದ್ರಿಯಜ್ಞಾನ. ಸಾಮಾನ್ಯ ಮನುಷ್ಯರ ಬುದ್ಧಿಗೆ ನಿಲುಕದ, ಅತೀತ ಮನಸ್ಸಿಗೆ ಮಾತ್ರ ನಿಲುಕುವ, ಸೃಷ್ಟಿಯ ಅಂತಿಮ ಸತ್ಯಗಳು ಇಂದ್ರಿಯಾತೀತ ಜ್ಞಾನವಾಗಿವೆ. ಆಧುನಿಕ ವಿಜ್ಞಾನದ ಪರಿಮಿತಿಗೆ ಸಿಗದ ಸತ್ಯಗಳು ಅಲ್ಲಿವೆ. ಮನುಷ್ಯನ ಮನಸ್ಸಿನಲ್ಲಿ ಉದ್ಭವಿಸುವ ಸಹಜ, ಸಕಾರಾತ್ಮಕ ಮತ್ತು ನಕಾರಾತ್ಮಕ ಆಲೋಚನೆಗಳ ಸಂಘರ್ಷ ಮತ್ತು ಅವುಗಳನ್ನು ನಿವಾರಣೆ ಮಾಡಿಕೊಳ್ಳುವ ವಿಧಿ-ವಿಧಾನಗಳ ಮಹಾದರ್ಶನ ಅಲ್ಲಿದೆ. ಇದೊಂದು ಧರ್ಮಗ್ರಂಥ ಮಾತ್ರವಲ್ಲ, ಸೃಷ್ಟಿಯ ವೈಜ್ಞಾನಿಕ ಸತ್ಯಗಳನ್ನೊಳಗೊಂಡ 'ಸೃಷ್ಟಿ ವಿಜ್ಞಾನ ಕೋಶ'ವಾಗಿದೆ. ಈ ಬಗ್ಗೆ ಕೃಷ್ಣನೇ ಹೇಳಿರುವ ಮಾತಿದು.

ಜ್ಞಾನಂ ತೇಽಹಂ ಸವಿಜ್ಞಾನಮಿದಂ ವಕ್ಷ್ಯಾಮ್ಯಶೇಷತಃ।
ಯಜ್ಜ್ಞಾತ್ವಾ ನೇಹ ಭೂಯೋಽನ್ಯತ್ ಜ್ಞಾತವ್ಯಮವಶಿಷ್ಯತೇ॥ *(೭.೨)*

('ನಾನು ನಿನಗೆ ವಿಜ್ಞಾನ ಸಹಿತವಾದ ಜ್ಞಾನವನ್ನು ಪೂರ್ತಿಯಾಗಿ ತಿಳಿಸಿಕೊಡುವೆನು. ಅದನ್ನು ತಿಳಿದ ಮೇಲೆ ಈ ಲೋಕದಲ್ಲಿ ಮತ್ತೆ ತಿಳಿಯಬೇಕಾದದ್ದು ಏನೂ ಉಳಿಯುವುದಿಲ್ಲ.')

ಈ ದೃಷ್ಟಿಯಿಂದ ಭಗವದ್ಗೀತೆಯ ಪ್ರತಿಯನ್ನು ನಮ್ಮ ಪ್ರಧಾನ ಮಂತ್ರಿ ಶ್ರೀ ನರೇಂದ್ರ ಮೋದಿಯವರು ಅಮೆರಿಕಾದ ಅಧ್ಯಕ್ಷ ಬರಾಕ್ ಒಬಾಮರವರಿಗೆ ಉಡುಗೊರೆ ನೀಡಿರುವುದು ಸಮಂಜಸವಾಗಿದೆ. ಪ್ರಪಂಚದ ಬಗೆಗಿನ ಜ್ಞಾನವನ್ನು ಪ್ರಾಪಂಚಿಕ ಮಟ್ಟದಲ್ಲಿ ವಿಸ್ತರಿಸಲು ಇದು ಸಹಕಾರಿಯಾಗಿದೆ.

ಸೃಷ್ಟಿಯನ್ನು ಮಾಡಿದ, ಸೃಷ್ಟಿಕರ್ತ ಭಗವಂತನೇ, ತಾನು ಸೃಷ್ಟಿಸಿದ ಬ್ರಹ್ಮಾಂಡದ ರೀತಿ-ನೀತಿ ವಿಕಾಸ, ಪರಿವರ್ತನೆ ಇತ್ಯಾದಿ ಎಲ್ಲ ವೈಜ್ಞಾನಿಕ ಸತ್ಯಾಂಶಗಳನ್ನೂ ಲೋಕಕ್ಕೆ ತಿಳಿಸಿದನೆಂಬುದು ವಾಡಿಕೆ. ವಾಲ್ಮೀಕಿಯು ರಾಮಾಯಣದಲ್ಲಿ ವಿವಿಧ ಪಾತ್ರಗಳ ಮೂಲಕ ಇದನ್ನೇ ವಿವರಿಸಿದ್ದಾನೆ. ವೇದ, ಉಪನಿಷತ್ತುಗಳಲ್ಲಿ ಇರುವುದೂ ಈ ಜ್ಞಾನವೇ. ತದನಂತರ ವ್ಯಾಸರು ಮಹಾಭಾರತದಲ್ಲಿ ಬಹು ವ್ಯಾಪಕವಾಗಿ ಮತ್ತು ಬಹುಪಾತ್ರಗಳ ಮೂಲಕ ಈ ಜ್ಞಾನವನ್ನು ದಾಖಲಿಸಿದ್ದಾರೆ. ಆಧ್ಯಾತ್ಮಿಕ ಜ್ಞಾನದ ಪ್ರಮುಖ ಅಂಶಗಳನ್ನು ಕೃಷ್ಣನ ಮೂಲಕ ಅರ್ಜುನನಿಗೆ ಭಗವದ್ಗೀತೆಯ ರೂಪದಲ್ಲಿ ಬೋಧಿಸಿ ದಾಖಲಿಸಲಾಗಿದೆ. ಭಗವದ್ಗೀತೆ ಆಧ್ಯಾತ್ಮಿಕ ಜ್ಞಾನಕೋಶ. ತದನಂತರ ಏಸು, ಬುದ್ಧ, ಮಹಮದ್ ಪೈಗಂಬರ್, ಶಂಕರ, ರಾಮಾನುಜ, ಬಸವಣ್ಣ, ದಾಸರು, ಡಿ.ವಿ.ಜಿ, ಇತ್ಯಾದಿ ಪ್ರಪಂಚದ ಎಲ್ಲಾ ದಾರ್ಶನಿಕರೂ ಸಹ ಭಗವದ್ಗೀತೆಯ ಒಂದೊಂದು ವಿಷಯವನ್ನು ಪ್ರಮುಖವಾಗಿಟ್ಟುಕೊಂಡು ಜಗತ್ತಿನಲ್ಲಿ ಪ್ರಚುರಪಡಿಸಿರುವುದನ್ನು ನಾವು ಕಾಣಬಹುದಾಗಿದೆ. ಕಾರಣ, ಭಗವದ್ಗೀತೆ ಜಾಗತಿಕ ಮಟ್ಟದಲ್ಲಿ ಪ್ರಪ್ರಥಮ ಲಿಖಿತ ಜ್ಞಾನ ಕೋಶ. ಸಂಸ್ಕೃತದಲ್ಲಿದ್ದ ವೇದಗಳನ್ನು ಆಂಗ್ಲಭಾಷೆಗೆ ಭಾಷಾಂತರಿಸಿದ, ಪಾಶ್ಚಿಮಾತ್ಯ ಶ್ರೇಷ್ಠ ವಿದ್ವಾಂಸ ಮ್ಯಾಕ್ಸಮುಲ್ಲರ್‌ನ ಅಭಿಪ್ರಾಯವೂ ಸಹ ಇದೇ ಆಗಿದೆ. ಆಧುನಿಕ ವಿಜ್ಞಾನದ ಎಲ್ಲ ಪ್ರಕಾರಗಳನ್ನೂ ಆಧ್ಯಾತ್ಮಿಕ ಜ್ಞಾನಕ್ಕೆ ಜೋಡಿಸಬಹುದಾಗಿದೆ. ಇವು ಆಧ್ಯಾತ್ಮಿಕ ವಿಜ್ಞಾನದ ವಿವಿಧ ಕವಲುಗಳ ವಿಕಸಿತ ಜ್ಞಾನಗಳಾಗಿವೆ.

ಸೃಷ್ಟಿಯ ರಚನೆಯು ಅತೀತ ಶಕ್ತಿ, ಪ್ರಕೃತಿ (ವಸ್ತುಗಳ ರೂಪ), ಜೀವ, ಕಾಲ ಮತ್ತು ಕರ್ಮಗಳಿಂದಾಗಿದೆ ಎಂಬ ಕೃಷ್ಣನ ಉಕ್ತಿ ಆಧುನಿಕ ವಿಜ್ಞಾನ ಜಗತ್ತೂ ಸಹ ಒಪ್ಪುವ ಸಂಗತಿಯಾಗಿದೆ. ಸೃಷ್ಟಿಯ ಉದ್ದೇಶ, ಅದರಲ್ಲಿರುವ ಎಲ್ಲ ಅಂಗಗಳ ನಡುವಿನ ಅವಿನಾಭಾವ ಸಂಬಂಧ, ಮನುಷ್ಯನಿಗೆ ಸಂಬಂಧಿಸಿದಂತೆ ಅವನ ಬದುಕಿನ ಉದ್ದೇಶ, ಬೇಕು-ಬೇಡಗಳು, ವ್ಯಾವಹಾರಿಕ ಬದುಕು, ಸಾವಿನಾಚೆಗಿನ ಸತ್ಯಸಂಗತಿಗಳು, ಆಲೋಚನೆಗಳ ನಿಗ್ರಹ, ಅತೀತಶಕ್ತಿ ಮತ್ತು ಅದನ್ನು ಗಳಿಸುವ ವಿಧಿ-ವಿಧಾನಗಳು ಹಾಗೂ ಉಪಯೋಗಗಳು ಇತ್ಯಾದಿ, ಆಧುನಿಕ ವಿಜ್ಞಾನದಲ್ಲಿರುವ ವಾಸ್ತವ ವಿಚಾರಗಳ ಜ್ಞಾನವನ್ನು ಭಗವದ್ಗೀತೆ ಒಳಗೊಂಡಿದೆ.

ಸೃಷ್ಟಿಯಲ್ಲಿ ಅತ್ಯಂತ ಶ್ರೇಷ್ಠವಾಗಿ ವಿಕಾಸವಾಗಿರುವ ಜೀವಿ ಮನುಷ್ಯ. ಅವನಲ್ಲಿರುವ ಮನಸ್ಸು ಇನ್ನೂ ಉತ್ಕೃಷ್ಟ ಮತ್ತು ಶಕ್ತಿ ಯುತ. ಮನಸ್ಸಿಗೆ ಸರಿ ಸಮಾನವಾದದ್ದು ಸೃಷ್ಟಿಯಲ್ಲಿ ಮತ್ತೊಂದಿಲ್ಲ. ಅಂತಹ ಮನುಷ್ಯನಿಗೆ, ಸೃಷ್ಟಿಕರ್ತ ನಿಗದಿಪಡಿಸಿರುವ ಜವಾಬ್ದಾರಿಗಳ ಅರಿವು ಭಗವದ್ಗೀತೆಯಲ್ಲಿದೆ. ಈ ಅಂಶವನ್ನು ಈ ಶ್ಲೋಕವೊಂದರಿಂದ ಅರಿಯಬಹುದಾಗಿದೆ:

ತ್ವಮಕ್ಷರಂ ಪರಮಂ ವೇದಿತವ್ಯಂ।
ತ್ವಮಸ್ಯ ವಿಶ್ವಸ್ಯ ಪರಂ ನಿಧಾನಮ್।
ತ್ವಮವ್ಯಯಃ ಶಾಶ್ವತಧರ್ಮಗೋಪ್ತಾ
ಸನಾತನಸ್ತ್ವಂ ಪುರುಷೋ ಮತೋ ಮೇ॥ *(೧೧.೧೮)*

(ತಿಳಿಯಬೇಕಾಗಿರುವ ಶಾಶ್ವತವಾದ ಪರಮವಸ್ತು ನೀನು. ಈ ವಿಶ್ವಕ್ಕೆ ನೀನೇ ಪರಮಾಧಾರನಾಗಿದ್ದೀಯೆ. ನೀನು ಅವ್ಯಯ, ಶಾಶ್ವತವಾಗಿ ಧರ್ಮವನ್ನು ರಕ್ಷಿಸತಕ್ಕವನು ನೀನು. ಸನಾತನ ಪುರುಷನೂ ನೀನೇ.)

ವ್ಯಾಸನು ಕೃಷ್ಣನಿಂದ ಭಗವದ್ಗೀತೆಯನ್ನು ಅರ್ಜುನನಿಗೆ ಬೋಧಿಸಲು ರಣರಂಗವನ್ನು ಏಕೆ ಆಯ್ಕೆ ಮಾಡಿಕೊಂಡನೋ ಗೊತ್ತಿಲ್ಲ. ವ್ಯಾಸನಿಗೆ ರಣರಂಗವೇ ವಿಷಾದ ಮನಃಸ್ಥಿತಿಗೆ ಅತ್ಯುತ್ತಮವೆಂದೆನಿಸಿರಬಹುದು. ೧೮ ಅಧ್ಯಾಯಗಳ ೭೦೦ ಶ್ಲೋಕಗಳನ್ನುಳ್ಳ ಗೀತೆಯನ್ನು ಬೋಧಿಸುವಾಗ ರಣರಂಗದಲ್ಲಿ ಶತ್ರುಗಳು ಕೈಕಟ್ಟಿ ಕುಳಿತುಕೊಂಡಿದ್ದರೇ ಎಂಬ ಯಕ್ಷಪ್ರಶ್ನೆ ಸಹಜ. ಕೃಷ್ಣನೇ ಸೃಷ್ಟಿಕರ್ತ ಅಥವಾ ಅತೀತ ಶಕ್ತಿಯುಳ್ಳವನಿರಬಹುದು, ಅಥವಾ ಅವನು ಅತೀತ ಶಕ್ತಿಯ ಸಂಕೇತವಿರಬಹುದು. ಅರ್ಜುನನ ಮನಸ್ಸಿನಲ್ಲಿರುವ ನಕಾರಾತ್ಮಕ ಆಲೋಚನೆಗಳೆಲ್ಲವನ್ನೂ ತನ್ನ ಅತೀತಶಕ್ತಿಯಿಂದ ಅರಿತ ಕೃಷ್ಣ ಅವನಲ್ಲಿ ಸಕಾರಾತ್ಮಕ ಭಾವನೆಗಳನ್ನು ಬಿತ್ತುತ್ತಾನೆ. ಇಲ್ಲಿ ಭೌತಿಕ ಯುದ್ಧ ಮುಖ್ಯವಲ್ಲ. ಸಹಜವಾಗಿ ಮನಸ್ಸಿನಲ್ಲಾಗುವ ಸಕಾರಾತ್ಮಕ – ನಕಾರಾತ್ಮಕ ಭಾವನೆಗಳ ಸಂಘರ್ಷ ಮತ್ತು ನಕಾರಾತ್ಮಕ ಭಾವನೆಗಳನ್ನು ಹತ್ತಿಕ್ಕಿ ಸಕಾರಾತ್ಮಕ ಭಾವನೆಗಳನ್ನು ವೃದ್ಧಿಸಿಕೊಳ್ಳುವ ವೈಜ್ಞಾನಿಕ ವಿಧಿ–ವಿಧಾನಗಳು ಇಲ್ಲಿ ಅನಾವರಣಗೊಂಡಿರುವುದು ಮುಖ್ಯ. ಪ್ರತಿಯೊಬ್ಬರ ಮನಸ್ಸಿನಲ್ಲಾಗುವ ಆಲೋಚನೆಗಳ ಅಂತರ್ಯುದ್ಧಕ್ಕೆ ಪರಿಹಾರ ಗೀತೆಯಲ್ಲಿದೆ. ಸೃಷ್ಟಿಯಲ್ಲಿ ಸಕಾರಾತ್ಮಕ ಭಾವನೆಗಳು (ಪ್ರೀತಿ, ಅಹಿಂಸೆ, ಧೈರ್ಯ) ಮತ್ತು ನಕಾರಾತ್ಮಕ ಭಾವನೆಗಳು (ದ್ವೇಷ, ಹಿಂಸೆ, ಭಯ) ಸಹಜವಾಗಿದ್ದು, ಸಂದರ್ಭಕ್ಕನುಗುಣವಾಗಿ ಅವು ವ್ಯಕ್ತವಾಗುತ್ತವೆ. ಅವುಗಳಲ್ಲಿ ಸಕಾರಾತ್ಮಕ ಭಾವನೆಗಳನ್ನೇ ಆಯ್ಕೆ ಮಾಡಿಕೊಳ್ಳುವ ಮಾರ್ಗಸೂಚಿಗಳು ಗೀತೆಯಲ್ಲಿವೆ. ಅವುಗಳನ್ನು ಈ ಕೆಳಗಿನ ಶ್ಲೋಕದಿಂದ ಉದಾಹರಿಸಬಹುದು:

ಇಂದ್ರಿಯಸ್ಯೇಂದ್ರಿಯಸ್ಯಾರ್ಥೇ ರಾಗದ್ವೇಷೌ ವ್ಯವಸ್ಥಿತೌ।
ತಯೋರ್ನ ವಶಮಾಗಚ್ಛೇತ್ ತೌ ಹ್ಯಸ್ಯ ಪರಿಪಂಥಿನೌ॥ *(೩.೩೪)*



('ಪ್ರತಿಯೊಂದು ಇಂದ್ರಿಯಕ್ಕೆ ಗೋಚರವಾಗುವ ಶಬ್ದಾದಿ ವಿಷಯದಲ್ಲಿ ರಾಗದ್ವೇಷಗಳಿದ್ದು, ಇಷ್ಟದಲ್ಲಿ ರಾಗ, ಅನಿಷ್ಟದಲ್ಲಿ ದ್ವೇಷವೆಂದು ವ್ಯವಸ್ಥಿತವಾಗಿರುತ್ತದೆ. ಧೀರನು ಅವುಗಳಿಗೆ ವಶನಾಗಬಾರದು. ರಾಗದ್ವೇಷಗಳು ಈತನ ಶತ್ರುಗಳು.')

ಭಗವದ್ಗೀತೆ ಚತುರ್ವರ್ಣವನ್ನು ಪೋಷಿಸಿ, ಜಾತಿ ವ್ಯವಸ್ಥೆಯನ್ನು ಸ್ಥಿರೀಕರಿಸುತ್ತದೆ ಎಂದು ಹೇಳಲಾಗುವುದಿಲ್ಲ. ಜನ್ಮದತ್ತವಾಗಿಯೇ ಜೀನುಗಳು ಇರುವ ಪರಿಸರಕ್ಕನುಗುಣವಾಗಿ, ಅವರವರು ಪಡೆದುಕೊಳ್ಳುವ ಗುಣವಿಶೇಷಗಳಿಗೆ ಅನುಗುಣವಾಗಿ ಸೃಷ್ಟಿಯಲ್ಲಿರುವ ಎಲ್ಲವುಗಳನ್ನು ನಾಲ್ಕು ಗುಂಪುಗಳನ್ನಾಗಿ ವಿಂಗಡಿಸಲಾಗಿದೆ ಎಂಬುದು ಆ ಶ್ಲೋಕದ ಅರ್ಥ. ಅದನ್ನು ಇಂದಿನ ರಾಜಕೀಯ ಜಾತಿ ವ್ಯವಸ್ಥೆಯೊಡನೆ ಸಮೀಕರಿಸುವುದು ಸರಿಯಲ್ಲ. ಹಾಗಿದ್ದಲ್ಲಿ **'ವಸುಧೈವ ಕುಟುಂಬಕಂ'** (ಪ್ರಪಂಚವೇ ಒಂದು ಕುಟುಂಬ) ಎಂಬಂಶ ಭಗವದ್ಗೀತೆಯಲ್ಲಿ ಇರುತ್ತಲೇ ಇರಲಿಲ್ಲ. ಗೀತೆಯ ಒಂದು ಪದ ಅಥವಾ ವಾಕ್ಯವನ್ನು ಆಧರಿಸಿ ವ್ಯಾಖ್ಯಾನ ಮಾಡುವುದು ಸರಿಯಲ್ಲ. ಅದರ ಹಿಂದು ಮುಂದಿನ ಶ್ಲೋಕಗಳ ಹಿನ್ನೆಲೆಯಲ್ಲಿ ಅದನ್ನು ಮೊದಲು ಅರ್ಥಮಾಡಿಕೊಳ್ಳಬೇಕು. ಗೀತೆಯನ್ನು ಸರಿಯಾಗಿ ಗ್ರಹಿಸಬೇಕು, ಬಳಿಕ ಅದನ್ನು ನಂಬಿ,

ಜೀವನದಲ್ಲಿ ಪಾಲಿಸಬೇಕು. ನಂತರ ಅದು ಅನುಭವಕ್ಕೆ ಬರುತ್ತದೆ. ಅದೊಂದು ಅನುಭವೀಯ ಜ್ಞಾನ. ಅನುಮಾನಿಸಿ, ವಕ್ರದೃಷ್ಟಿಯಿಂದ ನೋಡುವವರಿಗೆ ಅದು ಫಲಿಸುವುದಿಲ್ಲ. ಅದೊಂದು ಇಂದ್ರಿಯಾತೀತ ಜ್ಞಾನವಾಗಿದ್ದು, ಅದನ್ನು ಅರ್ಥಮಾಡಿಕೊಳ್ಳಲು ಅಲ್ಪಸ್ವಲ್ಪ ಅತೀತ ಶಕ್ತಿ ಅತ್ಯಗತ್ಯ. ಹಾಗಿದ್ದಲ್ಲಿ ಮಾತ್ರ ಗೀತೆಯ ದಿವ್ಯ ದರ್ಶನವಾಗುತ್ತದೆ. ಅತೀತ ಶಕ್ತಿ ಜನ್ಮದತ್ತವಾಗಿ ಎಲ್ಲರಿಗೂ ಬರುತ್ತದೆಯಾದರೂ ಅದರ ವೃದ್ಧಿಗೆ ದೈನಂದಿನ ತರಬೇತಿ ಅತ್ಯಗತ್ಯ.

ಮನುಷ್ಯನ ಹುಟ್ಟು, ಬದುಕು, ಸಾವುಗಳು ಮತ್ತು ಅವುಗಳಿಂದಾಚೆ ಗಳಿಕೆ ಮಾಡಿಕೊಳ್ಳುವ ಅತೀತ ಶಕ್ತಿಯ ಪ್ರಮಾಣಕ್ಕನುಗುಣವಾಗಿ ವಿವಿಧ ಬಗೆಯ ಅತೀತ ಅರಿವುಗಳು ಉಂಟಾಗುತ್ತದೆ. ಸತ್ಯ ಸಂಗತಿಗಳ ಜ್ಞಾನ ಗೀತೆಯಲ್ಲಿದೆ. ಈ ಜ್ಞಾನ ಆಧುನಿಕ ವೈದ್ಯ ವಿಜ್ಞಾನದಲ್ಲಿಲ್ಲ. ಮನುಷ್ಯನು ದೇಹ, ಮನಸ್ಸು ಮತ್ತು ಆತ್ಮಗಳ ಸಂಯೋಜನೆಯಿಂದ ಉಂಟಾಗಿರುವ ಆಧ್ಯಾತ್ಮಿಕ ಜೀವಿ. ಅವನು ಹುಟ್ಟು-ಬದುಕು-ಸಾವು-ಪುನರ್ಜನ್ಮಗಳ ಚಕ್ರದಲ್ಲಿ ನಿರಂತರ ಸಾಗುತ್ತಿದ್ದು, ಅವನು ಅತೀತ ಶಕ್ತಿಯೊಡನೆ ನೇರ ಸಂಪರ್ಕವನ್ನು ಹೊಂದಿದ್ದಾನೆ. ಸಾವೊಂದು ನಾಶದ ಕ್ರಿಯೆಯಲ್ಲ. ಅದೊಂದು ರೂಪಾಂತರ ಕ್ರಿಯೆ. ಸಾವಿನಲ್ಲಿ ದೇಹ (ವಸ್ತು) ಪಂಚಭೂತಗಳಲ್ಲಿ, ಆತ್ಮ (ಶಕ್ತಿ) ಅತೀತ ಶಕ್ತಿಯೊಡನೆ ಸೇರುತ್ತವೆ. ನಂತರ ಅವು ಮತ್ತೊಂದು ಹುಟ್ಟಿಗೆ (ಪುನರ್ಜನ್ಮ) ಕಾರಣವಾಗುತ್ತದೆ ಎಂಬ ಗೀತೆಯ ಅಂಶ ವೈಜ್ಞಾನಿಕವಾದುದು. ಜೀವಕೋಶಗಳು ಅವುಗಳಲ್ಲಿರುವ ಜೈವಿಕ ವಿದ್ಯುತ್‌ನಿಂದ ಜೀವವನ್ನು ಹೊಂದಿದ್ದು, ಸಾವಿನಲ್ಲಿ ಅವುಗಳಿಂದ ಜೈವಿಕ ವಿದ್ಯುತ್ ಹೊರಬಂದು ಪ್ರಕೃತಿಯನ್ನು ಸೇರುತ್ತದೆ. ಈ ಜೈವಿಕ ವಿದ್ಯುತ್ತೇ ಆತ್ಮ. ಈ ವೈಜ್ಞಾನಿಕ ಅಂಶವನ್ನು ತಿಳಿಸುವ ಶ್ಲೋಕವಿದು:

ನೈನಂ ಛಿಂದಂತಿ ಶಸ್ತ್ರಾಣಿ ನೈನಂ ದಹತಿ ಪಾವಕಃ ।
ನ ಚೈನಂ ಕ್ಲೇದಯಂತ್ಯಾಪೋ ನ ಶೋಷಯತಿ ಮಾರುತಃ॥ *(೨.೨೩)*

('ಆತ್ಮಕ್ಕೆ ಸಾವಿಲ್ಲ ಮತ್ತು ಅದನ್ನು ಗಾಳಿ, ಬೆಂಕಿ, ಶಸ್ತ್ರಗಳು ಸಹ ನಾಶ ಮಾಡಲಾರವು.')

ಶಕ್ತಿಯನ್ನು ನಾಶಮಾಡಲು ಸಾಧ್ಯವಿಲ್ಲ ಎಂಬ ಅಂಶ ವೈಜ್ಞಾನಿಕವಾಗಿಯೂ ಸತ್ಯ . ಚಂಚಲ ಮನಸ್ಸನ್ನು ಶಾಂತಗೊಳಿಸಿ ಅದನ್ನು ಮತ್ತಷ್ಟು ಶಕ್ತಿಯುತವನ್ನಾಗಿಸುವ, ಧ್ಯಾನಯೋಗದಲ್ಲಿ ಹೇಳಿರುವ ಮಾರ್ಗಸೂಚಿಗಳು ಆಧುನಿಕ ಮನಃಶಾಸ್ತ್ರಜ್ಞರಿಂದಲೂ ಮನ್ನಣೆ ಪಡೆದಿವೆ. ಈ ಬಗ್ಗೆ ಉಲ್ಲೇಖನಾರ್ಹವಾದ ಶ್ಲೋಕವೊಂದು ಹೀಗಿದೆ:

ಅಸಂಶಯಂ ಮಹಾಬಾಹೋ ಮನೋ ದುರ್ನಿಗ್ರಹಂ ಚಲಮ್।
ಅಭ್ಯಾಸೇನ ತು ಕೌಂತೇಯ ವೈರಾಗ್ಯೇಣ ಚ ಗೃಹ್ಯತೇ॥ *(೬.೩೫)*

('ಚಂಚಲ ಮನಸ್ಸನ್ನು ನಿಗ್ರಹಿಸುವುದು ಬಹು ಕಷ್ಟ. ಆದರೆ ಅಭ್ಯಾಸದಿಂದಲೂ ವೈರಾಗ್ಯದಿಂದಲೂ ಅದು ಹಿಡಿತಕ್ಕೆ ಬರುತ್ತದೆ.')

ಚಂಚಲ ಮನಸ್ಸನ್ನು ಆಲೋಚನಾರಹಿತವನ್ನಾಗಿ ಮಾಡುವುದರಲ್ಲಿ ಮಾತ್ರ ಶಾಂತಿ ಇದ್ದು, ಅಂತಹ ಮನಸ್ಸು ಮಾತ್ರ ಅತೀತ ಶಕ್ತಿಯನ್ನು ಗಳಿಕೆ ಮಾಡಿಕೊಳ್ಳುವ ಸಾಮರ್ಥ್ಯವನ್ನು ಹೊಂದಿದೆ. ಅದು ಮಾತ್ರ ಇಂದ್ರಿಯಾತೀತ ವಿಚಾರಗಳನ್ನು ಗ್ರಹಿಸಬಲ್ಲದು. ರಾಜಯೋಗದಲ್ಲಿ ವಿವರಿಸಲಾಗಿರುವ 'ಅಷ್ಟಾಂಗಯೋಗ'ವು ಚಂಚಲ ಮನಸ್ಸನ್ನು ಸ್ಥಿರಗೊಳಿಸುತ್ತದೆ ಎಂಬುದು ವೈಜ್ಞಾನಿಕವಾಗಿಯೂ ಸಾಬೀತಾಗಿದೆ. ಇಂದಿಗೂ ಈ ಶಕ್ತಿಯನ್ನು ಗಳಿಕೆ ಮಾಡಿಕೊಂಡ ಹಲವಾರು ಮಹನೀಯರುಗಳಿದ್ದಾರೆ. ಆಹಾರವಿಲ್ಲದೆ ಸೂರ್ಯನ ಬೆಳಕಿನಿಂದಲೇ ಬದುಕುವ ಯೋಗಿಗಳು ಹಿಮಾಲಯದಲ್ಲಿ ಇಂದಿಗೂ ಇದ್ದಾರೆ.

ಮನುಷ್ಯ ಹುಟ್ಟಿರುವುದೇ ಕರ್ಮ ಮಾಡುವುದಕ್ಕಾಗಿ, ಅವನು ಏನನ್ನೂ ಮಾಡದೆ ಒಂದು ಕ್ಷಣವೂ ಇರಲಾರ. ನಿದ್ರೆಯಲ್ಲೂ ಕನಸು ಕಾಣುತ್ತಾನೆ. ಮನಸ್ಸಿನ ಸ್ಥಿತಿ-ಗತಿ ಮತ್ತು ಅತೀತ ಶಕ್ತಿಯೊಡನೆ ಮನುಷ್ಯನು ಮಾಡುವ ಕಾರ್ಯಗಳಿಗೆ ಇರುವ ಅವಿನಾಭಾವ ಸಂಬಂಧವನ್ನು ತಿಳಿಸುವ ಕರ್ಮಸಿದ್ಧಾಂತ ಗೀತೆಯಲ್ಲಿದೆ. ಸೃಷ್ಟಿಯ ನಿಯಮಗಳನ್ನು ಪೋಷಿಸುವ ಕಾರ್ಯಗಳು ಪುಣ್ಯಕಾರ್ಯ (ಧರ್ಮ)ಗಳೆಂದೂ, ಮತ್ತು ಅವುಗಳನ್ನು ನಾಶ ಮಾಡುವವು ಪಾಪ ಕಾರ್ಯಗಳೆಂದೂ (ಅಧರ್ಮ) ಕರ್ಮಗಳನ್ನು ವರ್ಗೀಕರಿಸಲಾಗಿದೆ. ಸಂತೋಷ ನೀಡುವ ಕರ್ಮಗಳನ್ನು ಮಾಡುವ ರೀತಿ-ನೀತಿಗಳನ್ನು ತಿಳಿಸುವ ಶ್ಲೋಕವಿದು:

ಕಾಯೇನ ಮನಸಾ ಬುದ್ಧ್ಯಾ ಕೇವಲೈರಿಂದ್ರಿಯೈರಪಿ।
ಯೋಗಿನಃ ಕರ್ಮ ಕುರ್ವಂತಿ ಸಂಗಂ ತ್ಯಕ್ತ್ವಾತ್ಮಶುದ್ಧಯೇ॥ *(೫.೧೧)*

('ಫಲಾಸಕ್ತಿಯನ್ನು ತೊರೆದು ಕೇವಲ ದೇಹ, ಮನಸ್ಸು, ಬುದ್ಧಿ ಮತ್ತು ಇಂದ್ರಿಯಗಳಿಂದ ಸತ್ವಶುದ್ಧಿಗಾಗಿ ಯೋಗಿಗಳು ಕರ್ಮವನ್ನು ಮಾಡುತ್ತಾರೆ.') ಈ ಅಂಶವು ವ್ಯಾಮೋಹಗಳಿಂದ ಮನಸ್ಸನ್ನು ದೂರ ಸರಿಸುತ್ತದೆ.

'ಕರ್ಮಣ್ಯೇವಾಧಿಕಾರಸ್ತೇ ಮಾ ಫಲೇಷು ಕದಾಚನ' ಎಂಬುದನ್ನು, ಕರ್ಮ ಮಾಡುವ ಅಧಿಕಾರ ಮಾತ್ರ ನಿನಗಿದೆ, ಫಲ ಕೇಳುವ ಅಧಿಕಾರ ನಿನಗಿಲ್ಲವೆಂದು ವ್ಯಾಖ್ಯಾನಿಸುವುದೂ ಸಹ ಸರಿಯಲ್ಲ. ಇದರ ಹಿಂದಿನ ಆಶಯ ಇದಲ್ಲ. ಫಲ ನಿರೀಕ್ಷಿಸಿ ಕರ್ಮ ಮಾಡುವಾಗ ಮನಸ್ಸು ಅದರತ್ತ ಹೆಚ್ಚು-ಹೆಚ್ಚು ವ್ಯಾಮೋಹಿತವಾಗಿ, ನೈಜತೆಯನ್ನು ಮರೆತು, ವ್ಯಾವಹಾರಿಕವಾಗಿ ವರ್ತಿಸುತ್ತದೆ. ವ್ಯವಹಾರದಲ್ಲಿ ಸುಖಕ್ಕಿಂತ ದುಃಖವೇ ಹೆಚ್ಚು. ಫಲಾಪೇಕ್ಷೆ ಇಲ್ಲದೆ ಮಾಡುವ ಕಾರ್ಯದ ಹಿಂದೆ ಅತೀತಶಕ್ತಿಗೆ ಅದನ್ನು ಸಮರ್ಪಿಸುವ ಅದಮ್ಯ ಉದ್ದೇಶವಿದ್ದು, ಸ್ವಾರ್ಥರಹಿತದ ಕಾರ್ಯನಿಷ್ಠೆ ಮಾತ್ರ ಇರುತ್ತದೆ. ಹಾಗೆ ಮಾಡಲಾಗುವ ಕಾರ್ಯಗಳಿಂದ ಫಲ ಖಂಡಿತ. ನಿರೀಕ್ಷಿಸಿದ ಫಲ ಸಿಗದಿದ್ದಾಗ ಅಸಂತೋಷ ಉಂಟಾಗುತ್ತದೆ. ನಿರೀಕ್ಷೆ ಮಾಡದೆ ಫಲ ಸಿಕ್ಕಾಗ

ಸಂತೋಷವಾಗುತ್ತದೆ. ಅಸಂತೋಷದಿಂದ ಪಾರಾಗುವ ತಂತ್ರ ಮಾರ್ಗ ಇದರಲ್ಲಿದೆ.

ನಿರಂತರ ಸುಖ ಪಡೆಯುವುದೇ ಬದುಕಿನ ಮೂಲ ಉದ್ದೇಶ. ಇದನ್ನು ಪಡೆಯುವ ರೀತಿ-ನೀತಿಗಳ ವಿವರಣೆ ಗೀತೆಯಲ್ಲಿದೆ. ಸುಖ ವೆಂಬುದು ತನ್ನಲ್ಲಿಯೇ ಇದೆ ಎಂಬ ಅಂಶವನ್ನು ವೈಜ್ಞಾನಿಕವಾಗಿ ಮನವರಿಕೆ ಮಾಡಿಕೊಟ್ಟಿರುವ ರೀತಿ ಮನೋಜ್ಞವಾಗಿದೆ. ಬಾಹ್ಯ ಪ್ರಾಪಂಚಿಕ ಆಸೆಗಳಿಂದ ಮನಸ್ಸನ್ನು ಕಳಚಿ ಅವನಲ್ಲೇ ಇರುವ ಅಂತರಂಗದ ದೀಪವನ್ನು ಪ್ರಕಾಶಿಸಿಕೊಂಡು ನಿರಂತರವಾಗಿ ಸುಖ ವಾಗಿರುವ ರೀತಿಯ ಬೋಧನೆ ಗೀತೆಯಲ್ಲಿದೆ. ಉದಾಹರಣೆಗೆ:

ಯೋऽಂತಃಸುಖೋऽಂತರಾರಾಮಸ್ತಥಾಂತರ್ಜ್ಯೋತಿರೇವ ಯಃ।
ಸ ಯೋಗೀ ಬ್ರಹ್ಮನಿರ್ವಾಣಂ ಬ್ರಹ್ಮಭೂತೋऽಧಿಗಚ್ಛತಿ॥ *(೫-೨೪)*

('ಯಾವಾತ ತನ್ನೊಳಗಿರುವ ಆತ್ಮನಲ್ಲಿಯೇ ಸುಖ ಪಡು ವನೋ, ಆತ್ಮನಲ್ಲಿಯೇ ಕ್ರೀಡಿಸುವನೊ, ಅಂತರಾತ್ಮವೇ ಯಾರಿಗೆ ಪ್ರಕಾಶವಾಗಿರುವುದೋ, ಆ ಯೋಗಿಯು ಬ್ರಹ್ಮಸ್ವರೂಪಿಯೇ ಆಗಿ, ಬ್ರಹ್ಮದಲ್ಲಿ (ಅತೀತಶಕ್ತಿಯಲ್ಲಿ) ಲೀನವಾಗುವನು.')

ರಾಜಯೋಗ, ಭಕ್ತಿಯೋಗಗಳಿಂದ ಅತೀತಶಕ್ತಿಯನ್ನು ಗಳಿಕೆ ಮಾಡಿಕೊಂಡು ನಿರಂತರ ಸುಖಾನುಭವವನ್ನು ಹೊಂದುವ ವಿಧಿ-ವಿಧಾನಗಳು ಗೀತೆಯಲ್ಲಿವೆ.

ವಿಶ್ವರೂಪಿ ಸೃಷ್ಟಿಯಲ್ಲಿರುವವುಗಳೆಲ್ಲಾ ಮನುಷ್ಯನಲ್ಲಿವೆ. ಅವ ನಲ್ಲಿರುವವುಗಳೆಲ್ಲಾ ಸೃಷ್ಟಿಯಲ್ಲಿವೆ. ಹೀಗಾಗಿ ಸೃಷ್ಟಿಯ ಪ್ರತಿ ಯೊಂದರ ಜೊತೆಗೆ ಅವನಿಗೆ ಗೋಚರ ಮತ್ತು ಅಗೋಚರವಾದ ಅವಿನಾಭಾವ ಸಂಬಂಧವಿದೆ ಎಂಬ ಜ್ಞಾನ ಗೀತೆಯಲ್ಲಿದೆ.

ಮನುಷ್ಯ ಬದುಕಿರುವಾಗ, ಬದುಕಿನ ಮತ್ತು ಸಾವಿನ ಆಚೆಯ ಲೋಕಗಳನ್ನು ಅವನಿಗೆ ಪರಿಚಯಿಸಿ, ಅವು ಅವನಿಂದ ಏನನ್ನು ನಿರೀಕ್ಷಿಸುತ್ತವೆ ಎಂಬ ಅರಿವನ್ನುಂಟುಮಾಡಿ, ಲೌಕಿಕ ಬದುಕನ್ನು ಹಸನುಗೊಳಿಸುವ ಜ್ಞಾನ ಗೀತೆಯಲ್ಲಿದೆ. ವ್ಯಾವಹಾರಿಕ ಲೋಕ ಮತ್ತು ಆಧ್ಯಾತ್ಮಿಕ ಲೋಕಗಳೆರಡರ ಜ್ಞಾನಕೋಶ ಭಗವದ್ಗೀತೆ. ವ್ಯಾವಹಾರಿಕ ಬದುಕಿನಲ್ಲಿ ತಲ್ಲೀನವಾಗಿರುವಾಗಲೇ, ಅದರಿಂದ ಬಿಡುಗಡೆಗೊಳ್ಳುವ ವಿಧಿ-ವಿಧಾನಗಳು ಗೀತೆಯಲ್ಲಿವೆ. ಗೀತೆ ಬದು ಕಿನ ನೀತಿ ಸಂಹಿತೆಗಳನ್ನೊಳಗೊಂಡಿದೆ.

ಜಗತ್ತಿನಲ್ಲಿ ಯಾವುದನ್ನೂ ಹೊಸದಾಗಿ ಸೃಷ್ಟಿಸಲು ಸಾಧ್ಯವಿಲ್ಲ, ಯಾವುದನ್ನೂ ನಾಶಪಡಿಸುವುದು ಸಾಧ್ಯವಿಲ್ಲ, ಒಂದನ್ನು ಮತ್ತೊಂ ದನ್ನಾಗಿ ರೂಪಾಂತರಿಸಬಹುದಷ್ಟೆ ಎಂಬ ಗೀತೆಯಲ್ಲಿನ ಉಕ್ತಿ ಸಾರ್ವತ್ರಿಕ ಸತ್ಯವಾಗಿದೆ. ವಸ್ತು ಮತ್ತು ಶಕ್ತಿಗಳನ್ನೊಳಗೊಂಡ ಈ ತತ್ತ್ವ ಕ್ವಾಂಟಮ್ ಭೌತಶಾಸ್ತ್ರದಿಂದಲೂ ಅನುಮೋದಿತವಾಗಿದೆ. ಈ ಹಿನ್ನೆಲೆಯಲ್ಲಿ ಮನುಷ್ಯನ ಪುನರ್ಜನ್ಮಕ್ಕೆ ಸಂಬಂಧಿಸಿದ ವಿಚಾರಗಳೂ ಸಹ ವೈಜ್ಞಾನಿಕವಾಗಿಯೇ ಇವೆ. ಉದಾಹರಣೆಗೆ:

ದೇಹಿನೋऽಸ್ಮಿನ್ ಯಥಾ ದೇಹೇ ಕೌಮಾರಂ ಯೌವನಂ ಜರಾ।
ತಥಾ ದೇಹಾಂತರ ಪ್ರಾಪ್ತಿರ್ಧೀರಸ್ತತ್ರ ನ ಮುಹ್ಯತಿ॥ *(೨.೧೩)*

('ದೇಹಿಗೆ ಬಾಲ್ಯ, ಯೌವನ, ಮುಪ್ಪು ಮತ್ತು ಸಾವುಗಳೆಂಬ ಅವಸ್ಥೆಗಳು ಇರುವಂತೆ, ಸಾವಿನ ನಂತರ ಮತ್ತೊಂದು ದೇಹವನ್ನು ಹೊಂದುವುದೂ ಸಹಜ.ಇದನ್ನರಿತ ಧೀರನು ಈ ವಿಷಯದಲ್ಲಿ ಭ್ರಮಿತನಾಗುವುದಿಲ್ಲ.')

ವಿಶ್ವ ಆರೋಗ್ಯ ಸಂಸ್ಥೆ ಆಧ್ಯಾತ್ಮಿಕ ಆರೋಗ್ಯವನ್ನು ಒಪ್ಪಿಕೊಂಡಿ ದ್ದರೂ, ಅದರ ರೂಪುರೇಷೆ ಮತ್ತು ಸ್ವರೂಪಗಳನ್ನು ಇನ್ನೂ ನಿರ್ಧರಿ ಸಿಲ್ಲ. ಆತ್ಮದ ಬಗ್ಗೆ ಆಧುನಿಕ ವೈದ್ಯವಿಜ್ಞಾನಕ್ಕೆ ಏನೇನೂ ಗೊತ್ತಿಲ್ಲ. ಆಧ್ಯಾತ್ಮಿಕ ಆರೋಗ್ಯಜ್ಞಾನದ ಗಣಿ ಇರುವುದು ಭಗವದ್ಗೀತೆಯಲ್ಲಿ ಎಂಬಂಶ ಆಧುನಿಕ ವಿಜ್ಞಾನಕ್ಕೂ ಇಂದು ಅರಿವಾಗತೊಡಗಿದೆ. ಭಗವದ್ಗೀತೆಯ ಪ್ರಮುಖ ಅಂಶವಾದ 'ಯೋಗ' ವಿಶ್ವ ವಿಖ್ಯಾತಿ ಪಡೆದಿರುವುದೇ ಇದಕ್ಕೆ ಸಾಕ್ಷಿ. ಇಡೀ ವಿಶ್ವವೇ ಆಧ್ಯಾತ್ಮಿಕ ಆರೋಗ್ಯಕ್ಕೆ ಭಾರತದತ್ತ ನೋಡುತ್ತಿದೆ.

ಪ್ರಾಪಂಚಿಕ ಮಟ್ಟದಲ್ಲಿ ಮಾನಸಿಕ ಮತ್ತು ಕ್ಯಾನ್ಸರ್ ಆಸ್ಪತ್ರೆ ಗಳಲ್ಲಿ ಆಧ್ಯಾತ್ಮಿಕ ಆರೋಗ್ಯ ಕೇಂದ್ರಗಳನ್ನು ಸ್ಥಾಪಿಸಿ, ಆಧ್ಯಾತ್ಮಿಕ ವಿಚಾರಗಳನ್ನು ಬೋಧಿಸಿ, ದುರ್ಬಲಗೊಂಡ ಮನಸ್ಸನ್ನು ಸಬಲ ಗೊಳಿಸುವ ಮೂಲಕ, ಆಧುನಿಕ ವೈದ್ಯವಿಜ್ಞಾನದಲ್ಲಿ ಉತ್ತರ ಕಂಡು ಕೊಳ್ಳಲಾಗದ ಸಮಸ್ಯೆಗಳಿಗೆ ಆಧ್ಯಾತ್ಮಿಕ ಜ್ಞಾನದಿಂದ ಉತ್ತರಗಳನ್ನು ಪ್ರಾಪಂಚಿಕ ಮಟ್ಟದಲ್ಲಿ ಯಶಸ್ವಿಯಾಗಿ ಕಂಡುಕೊಳ್ಳಲಾಗುತ್ತಿದೆ.

ಆಧ್ಯಾತ್ಮಿಕ ಜ್ಞಾನವನ್ನು ಎಲ್ಲಾ ಶಾಲಾಕಾಲೇಜುಗಳಲ್ಲಿ ಪಠ್ಯ ವಿಷಯಗಳನ್ನಾಗಿ ಬೋಧಿಸುವಂತಾಗಬೇಕು. ಸರ್ಕಾರ ಈ ದಿಕ್ಕಿನಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ರೂಪಿಸಬೇಕು. ಗೀತೆಯಲ್ಲಿರದ, ಬೈಬಲ್, ಕುರಾನ್, ಇತ್ಯಾದಿ ಇನ್ನಿತರ ಆಧ್ಯಾತ್ಮಿಕ ಗ್ರಂಥಗಳಲ್ಲಿರುವ ಆಧ್ಯಾತ್ಮಿಕ ಜ್ಞಾನವನ್ನೂ ಸಹ ಬೋಧಿಸುವಂತಾಗಬೇಕು. ಬದುಕಿಗೆ ಸಂಬಂಧಿಸಿದ ಜ್ಞಾನವಿರುವುದು ಆಧ್ಯಾತ್ಮಿಕ ಜ್ಞಾನದಲ್ಲಿ ಮಾತ್ರ. ಇಂದಿನ ಶಿಕ್ಷಣದಲ್ಲಿ ಭೌತಿಕ ವಿಚಾರಗಳಿಗೆ ಮಾತ್ರ ಹೆಚ್ಚು ಒತ್ತು ನೀಡಲಾಗುತ್ತಿದೆ. ಸೃಷ್ಟಿಯ ಸತ್ಯಸಂಗತಿಗಳನ್ನು ತಿಳಿಸಿಕೊಟ್ಟು, ಅದನ್ನು ಸುಸಂಸ್ಕೃತ ದಿಕ್ಕಿನಲ್ಲಿ ಬೆಳೆಸುವ ಜ್ಞಾನ ಇಂದಿನ ಶಿಕ್ಷಣದ ಲ್ಲಿಲ್ಲ. ಆಧುನಿಕ ಮಾನವ ಮಾನಸಿಕವಾಗಿ ಹೆಚ್ಚು-ಹೆಚ್ಚು ಸಂಕಷ್ಟ ಕ್ಕೀಡಾಗಿ ಹೊಸ ಹೊಸ ಬಗೆಯ ಕಾಯಿಲೆಗಳಿಗೆ ತುತ್ತಾಗುತ್ತಿರುವು ದಕ್ಕೆ ಈ ಕೊರತೆಯೇ ಪ್ರಮುಖ ಕಾರಣ. ಸಂಕಷ್ಟಗಳ ನಿವಾರಣೆಯ ಜ್ಞಾನವಿರುವುದು ಆಧ್ಯಾತ್ಮಿಕ ಜ್ಞಾನದಲ್ಲಿ ಮಾತ್ರ. ಇಂದಿನ ಆಧುನಿಕ ಜಗತ್ತಿನ ಭಾಷೆಯಲ್ಲಿ ಹೇಳುವುದಾದರೆ ಆಧ್ಯಾತ್ಮಿಕ ಜ್ಞಾನ ಧರ್ಮಾ ತೀತ, ದೇಶಾತೀತ, ಜಾತ್ಯತೀತ, ವರ್ಗಾತೀತವಾಗಿದ್ದು ಮನುಕುಲದ ಉದ್ಧಾರಕ ಜ್ಞಾನವಾಗಿದೆ. ಅದು ಪ್ರಪಂಚದ ಎಲ್ಲ ಜನರನ್ನೂ ತಲುಪುವಂತಾಗಬೇಕು. ಆಗ ಮಾತ್ರ **'ವಸುಧೈವ ಕುಟುಂಬಕಂ'** ಎಂಬ ವೈಜ್ಞಾನಿಕ ದೃಷ್ಟಿಕೋನ ವಿಶ್ವಮಾನ್ಯವಾಗಲು ಸಾಧ್ಯ. ✤

ಕುರುಕ್ಷೇತ್ರದ ಉಗಮ


ಸಂಗ್ರಹ: ಸ್ವಾಮಿ ಜ್ಞಾನಸ್ವರೂಪಾನಂದ **ನಿರೂಪಣೆ:** ರೇವತಿ **ಚಿತ್ರ:** ಶಂಕರ್

ಸ್ವಾಮಿ ವಿವೇಕಾನಂದರು ಕರೆ ನೀಡಿದ ಶಕ್ತಿ, ಪೌರುಷ, ಕ್ಷಾತ್ರವೀರ್ಯ, ಬ್ರಹ್ಮತೇಜಸ್ಸುಗಳಿಗೆ ಉತ್ತಮ ನಿದರ್ಶನವಾಗಿದೆ ಈ ಕಥೆ.






3 ಮಂತ್ರಿಯ ತ್ಯಾಗ ಮತ್ತು ಅವನು ರಾಜ್ಯವನ್ನು ಬಿಟ್ಟು ಕಾಶಿಗೆ ಹೋದ ಸಂಗತಿ ರಾಜನನ್ನು ಬಹಳ ತೀವ್ರವಾಗಿ ತಟ್ಟಿತು.




4 ರಾಜ ಅನೇಕ ಮಂದಿ ಸಾಧು, ಸಂತರ ಸಲಹೆ ಕೇಳಿದ.

ಪಾಪಿಗಳಿಗೂ ಸ್ವರ್ಗಪದವಿಯನ್ನು ನೀಡುವಂಥ ಪವಿತ್ರ ಸ್ಥಳವನ್ನು ನಿರ್ಮಾಣ ಮಾಡುವುದೆ ? ಅದು ಅಸಾಧ್ಯ.




ರಾಜನ ಶಾಂತಿಗೆ ಭಂಗವುಂಟಾಯಿತು.

5 ರಾಜ ಕಾಡಿನಲ್ಲಿ ತಪಸ್ಸು ಮಾಡುತ್ತಿದ್ದ ಋಷಿಮುನಿಗಳನ್ನು ವಿಚಾರಿಸಿದ.





6 ಋಷಿಗಳ ಮಾರ್ಗದರ್ಶನದಂತೆ ರಾಜ ಕಠಿಣ ತಪಸ್ಸನ್ನು ಆಚರಿಸಿದ. ಆಗ ಮಹಾದೇವ ಮತ್ತು ಯಮ ಪ್ರತ್ಯಕ್ಷರಾದರು.



7 ಕುರುರಾಜನು ಶಿವನ ವೃಷಭ ಹಾಗೂ ಯಮನ ಕೋಣ ವನ್ನು ನೊಗಕ್ಕೆ ಕಟ್ಟಿ ನೆಲವನ್ನು ಉಳತೊಡಗಿದ.

8 ಆಕಾಶಮಾರ್ಗದಲ್ಲಿ ಪ್ರಯಾಣ ಮಾಡುತ್ತಿದ್ದ ಇಂದ್ರ ಅದನ್ನು ನೋಡಿ, ಆಶ್ಚರ್ಯಚಕಿತನಾಗಿ ಅದನ್ನು ನೋಡಲು ಕೆಳಗಿಳಿದು ಬಂದ.






9 ಹೀಗೆ ರಾಜ ಉಳುತ್ತಿದ್ದಾಗ ಅವನ ಮುಂದೆ ಶಿವ ಕಾಣಿಸಿಕೊಂಡ.




10





ಹೀಗೆ ಹೇಳಿದ ಶಿವ ಕಣ್ಮರೆಯಾದ.

11 ಅದರಿಂದೇನೂ ವ್ಯಥೆಗೊಳಗಾಗದೆ ರಾಜ 'ಓಂ ನಮಃ ಶಿವಾಯ', 'ಓಂ ನಮೋ ನಾರಾಯಣಾಯ' ಎಂದು ಸ್ತುತಿಸುತ್ತ ಉಳುವುದನ್ನು ಮುಂದುವರೆಸಿದ. ಆಗ ಮಹಾವಿಷ್ಣು ಅಲ್ಲಿ ಪ್ರತ್ಯಕ್ಷನಾದ.



12





14 ಕುರುರಾಜನು ಬೀಜರೂಪ ಧರಿಸಿ, ಮಹಾವಿಷ್ಣುವಿನ ಕೈಯಲ್ಲಿದ್ದ ಬುಟಿಯಲ್ಲಿ ತುಂಬಿಕೊಂಡ.



15 ವಿಷ್ಣು ಬೀಜವನ್ನು ಬಿತ್ತಿದ.






ಕುರುರಾಜ ದಿವ್ಯ ವೃಷಭ ಹಾಗೂ ಕೋಣವನ್ನು ಕಟ್ಟಿ ಉತ್ತ ನೆಲ ಕುರುಕ್ಷೇತ್ರ ನಗರದ ಒಂದು ಭಾಗವಾಗಿದೆ. ಅತ್ಯಂತ ನೀಚತಮ ಪಾಪವನ್ನು ಮಾಡಿದವರಿಗೂ ಮುಕ್ತಿ ಲಭಿಸುವಂತೆ ಆ ನೆಲವನ್ನು ಪಾವನಗೊಳಿಸಿದ ಕುರುರಾಜನ ಹೃದಯವೈಶಾಲ್ಯ, ಅನುಕಂಪಗಳು ಚಿರಕಾಲವೂ ಸ್ಥಾಯಿಯಾಗಿ ನಿಲ್ಲುವವು.

‘ಶ್ರೀಶಂಕರ ದಿಗ್ವಿಜಯ’ ಪುಸ್ತಕ ಬಿಡುಗಡೆ



ಜುಲೈ ೩೧ರಂದು ಮೈಸೂರು ಶ್ರೀರಾಮಕೃಷ್ಣ ಆಶ್ರಮದಲ್ಲಿ ನಡೆದ ಗುರುಪೂರ್ಣಿಮೆ ಕಾರ್ಯಕ್ರಮದ ಸಂದರ್ಭದಲ್ಲಿ ಆಶ್ರಮದ ಪ್ರಕಟಣೆ **‘ಶ್ರೀಶಂಕರ ದಿಗ್ವಿಜಯ’**ದ ಬಿಡುಗಡೆಯನ್ನು ಮಾಡಲಾಯಿತು. ಆಶ್ರಮದ ಹಿರಿಯ ಸಂನ್ಯಾಸಿಗಳಾದ ಸ್ವಾಮಿ ಸುರೇಶಾನಂದಜೀ ಮಹಾರಾಜ್ ಪುಸ್ತಕವನ್ನು ಬಿಡುಗಡೆ ಮಾಡಿದರು. ಆಶ್ರಮದ ಅಧ್ಯಕ್ಷರಾದ ಸ್ವಾಮಿ ಮುಕ್ತಿದಾನಂದಜಿಯವರು ಪುಸ್ತಕದ ಲೇಖಕರಾದ ಶ್ರೀ ವಿಜಯನಾಥ ಭಟ್ (‘ಕೌಂಡಿನ್ಯ’) ಅವರನ್ನು ಸನ್ಮಾನಿಸಿದರು. ಜೊತೆಗೆ, ದಿವಂಗತ ಸ್ವಾಮಿ ಸೋಮನಾಥಾನಂದಜಿಯವರ ಪ್ರವಚನಗಳನ್ನೊಳಗೊಂಡ ಡಿ.ವಿ.ಡಿ.ಯನ್ನೂ ಬಿಡುಗಡೆ ಮಾಡಲಾಯಿತು. ಪ್ರಕಾಶನ ವಿಭಾಗದ ಮೇಲ್ವಿಚಾರಕರಾದ ಬ್ರಹ್ಮಚಾರಿ ಅನಘಚೈತನ್ಯ ಅವರು ಬಿಡುಗಡೆಯಾದ ಕೃತಿಗಳ ಪರಿಚಯ ಮಾಡಿಕೊಟ್ಟರು.




ಕೃತಿಗಳ ಪರಿಚಯ:

ಶ್ರೀ ಶಂಕರ ದಿಗ್ವಿಜಯ: ವಿಜಯನಗರ ಸಾಮ್ರಾಜ್ಯದ ಸಂಸ್ಥಾಪನಾಚಾರ್ಯರಾದ ಶ್ರೀವಿದ್ಯಾರಣ್ಯರು ರಚಿಸಿದ **‘ಶ್ರೀ ಶಂಕರ ದಿಗ್ವಿಜಯ’**ವು ಶ್ರೀಶಂಕರರ ಜೀವನ ಚರಿತ್ರೆಗಳಲ್ಲೆಲ್ಲ ಅತ್ಯಂತ ಪ್ರಾಚೀನವಾದುದು. ಶ್ಲೋಕ ರೂಪದಲ್ಲಿರುವ ಈ ಕೃತಿಯ ಇಂಗ್ಲೀಷ್ ಅನುವಾದವನ್ನು ಸ್ವಾಮಿ ತಪಸ್ಯಾನಂದರು ಮಾಡಿದ್ದು, ಅದರೊಂದಿಗೆ ಇನ್ನಿತರ ಆಕರಗಳನ್ನೂ ಆಧರಿಸಿ ಸರಳ ಕನ್ನಡದಲ್ಲಿ ಈ ಕೃತಿಯನ್ನು ರಚಿಸಲಾಗಿದೆ. ಇದರಲ್ಲಿ ಶ್ರೀಶಂಕರರ ಜೀವನ ವೃತ್ತಾಂತವಷ್ಟೇ ಅಲ್ಲದೆ ತತ್ತ್ವವಿಚಾರ, ಅವರ ಸಾಧನೆಯ ವಿವರಗಳು, (ಅನುಬಂಧದಲ್ಲಿ) ಕೆಲವು ಪ್ರಮುಖ ಸ್ತೋತ್ರಗಳು ಕೂಡ ಸೇರಿವೆ. ಶ್ರೀ ಶಂಕರರ ಜೀವನ, ತತ್ತ್ವಗಳನ್ನು ಅರಿತುಕೊಳ್ಳಬಯಸುವವರಿಗೆ ಇದೊಂದು ಒಳ್ಳೆಯ ಪ್ರವೇಶವೂ ಆಕರ ಗ್ರಂಥವೂ ಆಗಿದೆ. (ಪುಟಗಳು: ೧೮೪, ಬೆಲೆ: ₹ ೮೦)

ಸ್ವಾಮಿ ಸೋಮನಾಥನಂದರ ಪ್ರವಚನಗಳು:

ಮೈಸೂರು ಪ್ರಕಾಶನ ವಿಭಾಗವನ್ನು ಕಟ್ಟಿ ಬೆಳೆಸಿದ ಮಹನೀಯರಾದ ಸ್ವಾಮಿ



ಸೋಮನಾಥಾನಂದಜಿಯವರು ನೀಡಿದ ೩೦ ಪ್ರವಚನಗಳು ಈ ಡಿ.ವಿ.ಡಿ.ಯಲ್ಲಿ ಸೇರಿವೆ. ಉತ್ತಮ ವಾಗ್ಮಿಗಳೂ, ಆಧ್ಯಾತ್ಮಿಕ ಸಾಧಕರೂ ಆದ ಸೋಮನಾಥಾನಂದಜಿಯವರು ಅತ್ಯಂತ ಸರಳ ಭಾಷೆಯಲ್ಲಿ, ಸುಂದರವಾದ ಶೈಲಿಯಲ್ಲಿ ಆಧ್ಯಾತ್ಮಿಕ ಜೀವನ ಹಾಗೂ ದಿವ್ಯತ್ರಯರನ್ನು ಕುರಿತು ನೀಡಿದ ಪ್ರವಚನಗಳು ಇಲ್ಲಿವೆ. ಆಧ್ಯಾತ್ಮಿಕ ಸಾಧಕರಿಗೆ ಸ್ಫೂರ್ತಿ ನೀಡಬಲ್ಲ ಈ ಡಿ.ವಿ.ಡಿ.ಯು ಸುಲಭ ಬೆಲೆಗೆ ರೂ. (₹ ೫೦) ಲಭ್ಯವಿದೆ.


Managing Editor : Swami Muktidananda Editor : Swami Jnanayogananda
Printed and Published by Swami Muktidananda, on behalf of Sri Ramakrishna Ashrama, Yadavagiri, Mysore and Printed at Mayur Graphics, No.C-12, Industrial Estate, Rajaji Nagar, Bangalore -560 010 and published at Sri Ramakrishna Ashrama, Yadavagiri, Mysore -570 020

PACKAGE TOURS 2015

Hotel Room Accom. & South Indian Veg. Food

Shaktipeetha Manali Special : 18 Days


Oct 23



Wagah Border [Indo-Pak Border], Amritsar, Vaishnavi Devi, Chamunda, Kangra, Chintapurni, Jwalamukhi, Baijnath, Kullu-Manali, Vasista, Rohtang Pass [Optional], Naina Devi, Kufri, Shimla, Chandigarh, Kurukshetra, New Delhi

Charodham - Kashi - Gaya : 26 Days

Sep 18 Oct 06



Haridwar, Yamunotri, Gangotri, Uttarkashi, Kedar, Triyugi (Optional), Mana, Vyasa Guha, Ganesh Guha, Keshava Prayag, Badari, Rishikesh, New Delhi, Allahabad, Ayodhya, Saranath, Gaya, Bodhgaya, Kashi

Dwarka & Jyothirlinga : 24 Days


Oct 29



Jaipur, Pushkar, Ajmer, Nathadwar, Kankroli, Eklingji, Udaipur, Mt. Abu, Mathru Gaya, Dwarka, Bet Dwarka, Nagesham, Mul Dwarka, Porbandar, Veraval, Somnath, Dakor, Ahmedabad, Ujjain, Omkareshwar, Parli, Aurangabad, Ellora, Grishneshwar, Triyambak, Nasik, Shirdi, Shanisinganapur, Bhimashankar.

South India : 10 Days

Sep 01 Nov 27



Guruvayur, Kaladi, Trivandram, Suchindram, Kovalam Beach, Kanyakumari, Rameshwaram, Madurai, Trichy, Srirangam, Tanjore, Kumbakonam, Chidambaram, Thiruvannamalai, Navagraha Temples

INTERNATIONAL TOURS







Dubai, Singapore, Malaysia, Thailand, Sri Lanka

Shri Hansaa Travels

Recognised by Department of Tourism, Govt. of Karnataka

: 640, 40th Cross, 8th Block, Jayanagar, Bangalore - 70

: hansaatravels@gmail.com : hansaatravels.com

080-26643276 / 26543891 / 9341215612 / 9341415612

VIVEKA PRABHA (KANNADA MONTHLY)
September 2015, Vol.16, No.09, No. of pages : 44

Registered With Registrar of News Papers Of India under 72356/2000.postal Regn.No.KA/SK/MYS/480/ 2015-17. LICENCED TO POST W.P.P.AT YADAVAGIRI MYSORE 570 020,VIDE LICENCE NO.SK/WPP/MYS/155/2013-15

Printed at mayur graphics,Bangalore